# ಪೈಗಂಬರರ ಆಪ್ತ ಸಂಗಾತಿಗಳು

ಡಾ. ಮಾಯಿಲ್ ಖೈರಾಬಾದಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

## ಪ್ರಕಾಶಕರ ಮಾತು

ಪ್ರವಾದಿ ಮುಹಮ್ಮದ್(ಸ) ಅವರಿಗೆ ಲಕ್ಷಗಟ್ಟಳೆ ಸಂಗಾತಿ(ಸಹಾಬಿ)ಗಳಿದ್ದರು. ಅವರ ಪೈಕಿ ಕೆಲವರು ಆಪ್ತರಾಗಿದ್ದರು. ಪ್ರವಾದಿ(ಸ)ರವರ ಬದುಕು ನಮಗೆ ಮಾದರಿಯಾಗಿದೆ. ಪ್ರವಾದಿವರ್ಯರನ್ನು ಪ್ರಥಮವಾಗಿ ಅನುಕರಿಸಿ ನಡೆದವರು ಸಹಾಬಿಗಳಾಗಿದ್ದರು. ಪ್ರವಾದಿವರ್ಯರನ್ನು ಅನುಸರಿಸಿದ ಸಹಾಬಿಗಳೂ ನಮಗೆ ಆದರ್ಶವಾಗಿದ್ದಾರೆ. ಆದ್ದರಿಂದ ಸಹಾಬಿಗಳ ಚರಿತ್ರೆಯನ್ನು ಕಲಿಯುವುದು ಪ್ರವಾದಿಚರಿತ್ರೆಯನ್ನು ಕಲಿಯುವಷ್ಟೇ ಅಗತ್ಯವಾಗಿದೆ.

ಶಾಂತಿ ಪ್ರಕಾಶನವು ನಾಲ್ವರು ಖಲೀಫರು, ಮಹಾಪುರುಷರು, ವಿಜಯದ ಹಾದಿಯಲ್ಲಿ ಎಂಬ ಪುಸ್ತಕಗಳ ಮೂಲಕ ಪ್ರವಾದಿವರ್ಯರ(ಸ) ಕೆಲವು ಸಹಾಬಿಗಳ ಜೀವನ ಚರಿತ್ರೆಯನ್ನು ಈ ಹಿಂದೆ ಪ್ರಕಟಿಸಿದೆ. 'ಪೈಗಂಬರರ ಆಪ್ತ ಸಂಗಾತಿಗಳು' ಎಂಬ ಈ ಕೃತಿಯು ಅದರ ಮುಂದುವರಿಕೆಯಾಗಿದೆ. ಅಲ್ಲದೆ ಕೆಲವು ಮಹಿಳಾ ಸಹಾಬಿಗಳ ಜೀವನ ವೃತ್ತಾಂತಗಳ ಪುಸ್ತಕಗಳನ್ನೂ ಈ ಹಿಂದೆ ಪ್ರಕಟಿಸಲಾಗಿದೆ. ಈ ಕೃತಿಯಲ್ಲಿ ಒಟ್ಟು ಹತ್ತು ಸಹಾಬಿಗಳ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಅಳವಡಿಸಲಾಗಿದೆ. ಇದರ ಅಧ್ಯಯನದಿಂದ ಸಹಾಬಿಗಳ ಬದುಕು ನಮಗೆ ಹೇಗೆ ಆದರ್ಶಪ್ರಾಯವೆಂಬುದನ್ನು ಗ್ರಹಿಸಬಹುದಾಗಿದೆ. ಈ ನಿಟ್ಟಿನಲ್ಲಿ ಇದು ಕನ್ನಡ ಕುಲಕೋಟಿಗೆ ಫಲಪ್ರದವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ

1. ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್(ರ) ................................ 05

2. ಹಂಝಾ ಬಿನ್ ಅಬ್ದುಲ್ ಮುತ್ತಲಿಬ್(ರ) ................................ 10

3. ಹ.ಅಬ್ದುಲ್ಲಾ ಬಿನ್ ಮಸ್‌ವೂದ್(ರ) ................................ 17

4. ಸಈದ್ ಬಿನ್ ಆಮಿರ್(ರ) ................................ 20

5. ಹ.ಅಬ್ದುರ್ರಹ್ಮಾನ್ ಬಿನ್ ಔಫ್(ರ) ................................ 23

6. ಸಈದ್ ಬಿನ್ ಝೈದ್(ರ) ................................ 28

7. ಝೈದ್ ಬಿನ್ ಹಾರಿಸ್(ರ) ................................ 31

8. ಸುಹೈಬ್ ರೂಮಿ(ರ) ................................ 35

9. ಜಅ್‌ಫರ್ ತಯ್ಯಾರ್(ರ) ................................ 38

10. ಅಬೂ ಉಬೈದಾ ಬಿನ್ ಜರ್ರಾಹ್(ರ) ................................ 43

# ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್(ರ)

ಪ್ರವಾದಿ ಮುಹಮ್ಮದ್‌ರವರ(ಸ) ಅನೇಕ ಪಿತೃಸಹೋದರರ ಪೈಕಿ ನಾಲ್ವರು ಪ್ರಸಿದ್ಧರು. ಅಬೂತಾಲಿಬರು ತನ್ನ ತಂದೆ ಅಬ್ದುಲ್ ಮುತ್ತಲಿಬ್‌ರ ಮರಣದ ಬಳಿಕ ಅನಾಥ ಭ್ರಾತೃಜ ಮುಹಮ್ಮದ್‌ರನ್ನು(ಸ) ಸಾಕಿ ಸಲಹಿದ್ದು ಮಾತ್ರವಲ್ಲ, ಎಲ್ಲ ಸಮಯದಲ್ಲೂ ಪ್ರವಾದಿಯವರನ್ನು ಬೆಂಬಲಿಸಿದ ಕಾರಣ ಪ್ರಸಿದ್ಧರಾದರು. ಅಬೂಲಹಬ್ ಜೀವಮಾನವಿಡೀ ಅಲ್ಲಾಹನ ಮತ್ತು ಪ್ರವಾದಿಯ ವೈರಿಯಾಗಿದ್ದು ಯಾವ ಬೆಲೆ ತೆತ್ತಾದರೂ ಇಸ್ಲಾಮನ್ನು ಅಳಿಸಿ ಹಾಕಬೇಕೆಂದು ಪ್ರಯತ್ನಿಸುತ್ತಿದ್ದ ಕಾರಣ ಪ್ರಸಿದ್ಧನಾದ. ಆದರೆ ಪ್ರವಾದಿವರ್ಯರ(ಸ) ಇನ್ನಿಬ್ಬರು ಚಿಕ್ಕಪ್ಪಂದಿರುಗಳಾದ ಹಂಝಾ ಮತ್ತು ಅಬ್ಬಾಸ್(ರ) ಪ್ರವಾದಿವರ್ಯರ(ಸ) ಮೇಲೆ ವಿಶ್ವಾಸವಿರಿಸಿ ಇಸ್ಲಾಮಿನಲ್ಲಿ ಸ್ಥಿರವಾಗಿ ನಿಂತು ಅಲ್ಲಾಹನ ಸಂಪ್ರೀತಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡುವ ಮೂಲಕ ಪ್ರಸಿದ್ಧರಾದರು. ಅವರಿಬ್ಬರೂ ತಮ್ಮ ಮಾತು, ಕೃತಿ, ಶರೀರ ಮತ್ತು ಸಂಪತ್ತಿನಿಂದ ತಾವು ನೈಜ ಮುಸ್ಲಿಮರೆಂಬುದರ ಸಾಕ್ಷ್ಯ ಒದಗಿಸಿದರು.

ಅಬ್ಬಾಸ್‌ರವರು ಪ್ರವಾದಿವರ್ಯರ(ಸ) ಚಿಕ್ಕಪ್ಪ ಆಗಿದ್ದರೂ ಅವರಿಗಿಂತ ಎರಡೂವರೆ ವರ್ಷ ದೊಡ್ಡವರಾಗಿದ್ದರು. ಬಾಲ್ಯದಿಂದಲೇ ಮುಹಮ್ಮದ್‌ರನ್ನು ತುಂಬಾ ಪ್ರೀತಿಸುತ್ತಿದ್ದರು. ಒಟ್ಟಿಗೆ ಕೆಲಸ ಮಾಡುತ್ತಿರುವಾಗ ಭ್ರಾತೃಜನಿಗೆ ದಣಿವಾದರೆ ಕಳವಳ ಪಡುತ್ತಿದ್ದರು. ಒಮ್ಮೆ ಕಅಬಾ ಭವನದ ಪುನರ್ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಆಬಾಲ ವೃದ್ಧರೆಲ್ಲರೂ ಕೆಲಸ ಮಾಡುತ್ತಿದ್ದರು. ಇತರ ಮಕ್ಕಳ ಜೊತೆಯಲ್ಲಿ ಪ್ರವಾದಿ(ಸ) ಮತ್ತು ಅಬ್ಬಾಸ್ ಕೂಡಾ ಕಲ್ಲು ಹೊರುತ್ತಿದ್ದರು, ಕಲ್ಲು ಹೊತ್ತುಹೊತ್ತು ಪ್ರವಾದಿವರ್ಯರ(ಸ) ಭುಜದ ಮೇಲೆ ಗಾಯ ಉಂಟಾಯಿತು. ಆ ಕೂಡಲೇ ಅಬ್ಬಾಸ್‌ರವರು ಲುಂಗಿಯನ್ನು ಕಳಚಿ ಪ್ರವಾದಿವರ್ಯರ(ಸ) ಭುಜದ ಮೇಲಿಟ್ಟರು.

ಬಾಲ್ಯದಲ್ಲಿದ್ದ ಪ್ರೀತಿಯು ಪ್ರಾಯ ಸಂದಂತೆಯೇ ಹೆಚ್ಚುತ್ತಾ ಹೋಯಿತು. ಮುಸ್ಲಿಮನಾಗುವುದಕ್ಕೆ ಮುಂಚೆಯೂ ಅವರು ಪ್ರವಾದಿಯವರ(ಸ) ಜೊತೆಯಲ್ಲಿರುತ್ತಿದ್ದರು. ಮುಸ್ಲಿಮನಾದ ನಂತರವೂ ಜೊತೆಯಲ್ಲೇ ಇರತೊಡಗಿದರು. ಪ್ರವಾದಿವರ್ಯರು(ಸ) ಮಕ್ಕಾದಲ್ಲಿ ಇಸ್ಲಾಮಿ ಆಂದೋಲನದ ಕಾರ್ಯವನ್ನು ಆರಂಭಿಸಿದಾಗ ಮತ್ತು ಜನರನ್ನು ಏಕದೇವನ ಕಡೆಗೆ

ಆಹ್ವಾನಿಸುತ್ತಿದ್ದಾಗ, ಅಬ್ಬಾಸ್ ವಿಶ್ವಾಸ ಸ್ವೀಕರಿಸದಿದ್ದರೂ ಅದನ್ನು ಒಳ್ಳೆಯದೆಂದು ಭಾವಿಸಿ ಮನಸ್ಸಿನಲ್ಲಿ ಬೆಂಬಲಿಸುತ್ತಿದ್ದರು. ಹಜ್ಜ್‌ನ ಸಮಯದಲ್ಲಿ ಮದೀನಾದ 72 ಮಂದಿ ಮಿನಾದ ಕಣಿವೆಯಲ್ಲಿ ಪ್ರವಾದಿವರ್ಯರನ್ನು(ಸ) ಭೇಟಿ ಮಾಡಿ ಮದೀನಕ್ಕೆ ಆಹ್ವಾನಿಸಿದ ಆ ರಹಸ್ಯ ವೇಳೆಯಲ್ಲೂ ಅಬ್ಬಾಸ್ ಜತೆಗಿದ್ದರು. ಆ ಸಂದರ್ಭದಲ್ಲಿ ಅವರು ಮಾಡಿದ ಭಾಷಣವು ಅವರ ಅನುಭವ ಮತ್ತು ಪ್ರಾಮಾಣಿಕತೆಯನ್ನು ವ್ಯಕ್ತಪಡಿಸುತ್ತದೆ. ಅವರಿಗೆ ಇಸ್ಲಾಮಿ ಆಂದೋಲನದ ದಾರಿಯ ಸಂಕಷ್ಟಗಳ ಅರಿವೂ ಚೆನ್ನಾಗಿ ಇತ್ತೆಂದು ಅದರಿಂದ ತಿಳಿಯುತ್ತದೆ. ಅವರು ಅನ್ಸಾರರೊಂದಿಗೆ ಹೀಗೆಂದರು- "ಅನ್ಸಾರರೇ! (ಮದೀನಾದ ವಿಶ್ವಾಸಿಗಳೇ!) ಕೇಳಿರಿ, ಮುಹಮ್ಮದ್(ಸ) ನಮ್ಮ ಕುಟುಂಬದವರ ಪೈಕಿ ಅತ್ಯಂತ ಪ್ರತಿಷ್ಠಿತ ಮತ್ತು ಗೌರವಕ್ಕೆ ಪಾತ್ರರಾದ ವ್ಯಕ್ತಿಯಾಗಿದ್ದಾರೆ. ನಾವು ಯಾವಾಗಲೂ ಅವರನ್ನು ವೈರಿಗಳಿಂದ ರಕ್ಷಿಸಿದ್ದೇವೆ. ಈಗ ಅವರು ನಿಮ್ಮ ಜೊತೆ ಬರಬಯಸಿದ್ದಾರೆ. ನೀವು ಅವರ ಜೊತೆಯಲ್ಲಿ ಕೊನೆಯುಸಿರಿನ ತನಕವೂ ಇರಬಲ್ಲಿರಾದರೆ ಸರಿ. ಇಲ್ಲವಾದರೆ ಈಗಲೇ ಅವರಿಗೆ ಸ್ಪಷ್ಟ ಉತ್ತರ ಕೊಟ್ಟು ಹಿಂದೆ ಸರಿಯಿರಿ."

ಇದನ್ನು ಕೇಳಿ ಅನ್ಸಾರರು ಆತ್ಮಾರ್ಪಣೆಗೆ ಸಿದ್ಧರಾಗಿದ್ದೇವೆಂದು ವಾಗ್ದಾನ ಮಾಡಿದಾಗ ಅಬ್ಬಾಸ್‌ರಿಗೆ ಸಮಾಧಾನವಾಯಿತು. ಇದಾದ ಕೆಲವೇ ದಿನಗಳ ಬಳಿಕ ಪ್ರವಾದಿವರ್ಯರು(ಸ) ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋದರು. ಅಬ್ಬಾಸ್‌ರವರು ಮದೀನದಲ್ಲೇ ಉಳಿದರು. ಆದರೆ ಮನಸ್ಸು ಮಾತ್ರ ಪ್ರವಾದಿಯವರೊಂದಿಗೇ ಇತ್ತು. ಅಲ್ಲಿ ಪ್ರವಾದಿವರ್ಯರು(ಸ) ಖೈಬರನ್ನು ಗೆದ್ದುಕೊಂಡರು. ಆಗ ಯಾರೋ, ಖೈಬರ್‌ನಲ್ಲಿ ಮುಸ್ಲಿಮರಿಗೆ ಭಾರೀ ಸೋಲುಂಟಾಗಿದೆ, ಮುಹಮ್ಮದ್‌ರನ್ನು(ಸ) ಸೆರೆ ಹಿಡಿಯಲಾಗಿದೆ ಮತ್ತು ಅವರ ಸಂಗಾತಿಗಳು ಕೊಲ್ಲಲ್ಪಟ್ಟಿದ್ದಾರೆಂಬ ವದಂತಿ ಹರಡಿದರು.

ಈ ಸುದ್ದಿ ಕೇಳಿದ ಮಕ್ಕಾ ನಿವಾಸಿಗಳು ಸಂತೋಷ, ಸಂಭ್ರಮದಿಂದ ಕುಣಿದಾಡಿದರೆ ಅಬ್ಬಾಸ್‌ರವರ ಮನೆಯಲ್ಲಿ ಶೋಕದ ಕತ್ತಲು ಕವಿಯಿತು. ಅನಂತರ ಸುದ್ದಿ ಸುಳ್ಳೆಂದೂ ಪ್ರವಾದಿವರ್ಯರು(ಸ) ಖೈಬರ್‌ನಲ್ಲಿ ಸಂಪೂರ್ಣ ವಿಜಯ ಸಾಧಿಸಿದ್ದಾರೆಂದೂ ತಿಳಿದಾಗ ಅಬ್ಬಾಸ್‌ರ ಸಂತೋಷಕ್ಕೆ ಪಾರವೇ ಇರಲಿಲ್ಲ. ತರುವಾಯ ಸ್ನಾನ ಮಾಡಿ, ಉತ್ತಮ ಬಟ್ಟೆ ಧರಿಸಿ, ಕೈಯಲ್ಲಿ ಲಾಠಿ ಹಿಡಿದುಕೊಂಡು ಕಅಬಾ ಭವನಕ್ಕೆ ತೆರಳಿ ತವಾಫ್ (ಪ್ರದಕ್ಷಿಣೆ) ಮಾಡತೊಡಗಿದಾಗ ಜನರು, ಈ ದಯನೀಯಾವಸ್ಥೆಯಲ್ಲೂ ಇಷ್ಟೊಂದು ಸಹನೆಯೇ?" ಎಂದು ಕೆಣಕ ತೊಡಗಿದರು. ಅದಕ್ಕೆ ಅಬ್ಬಾಸ್‌ರವರು ನೀಡಿದ ಉತ್ತರ ಹೀಗಿತ್ತು: "ದೇವನಾಣೆ! ಈ ಸುದ್ದಿ ಸಂಪೂರ್ಣ ಸುಳ್ಳು. ಖೈಬರ್‌ನಲ್ಲಿ ಪ್ರಚಂಡ ವಿಜಯ ಸಾಧಿಸಲಾಗಿದೆ. ಅದರ ಒಂದೊಂದು ಇಂಚು ಕೂಡಾ ಮುಹಮ್ಮದ್(ಸ) ಮತ್ತು ಸಂಗಾತಿಗಳ ವಶವಾಗಿದೆ." ಜನರು ತನಿಖೆ ನಡೆಸಿದಾಗ ಅಬ್ಬಾಸ್‌ರ ಮಾತು ನಿಜವೆಂದು ಸಾಬೀತಾಯಿತು. ಅವರು ಸೋತು ಹೋದ ಜೂಜುಕೋರರಂತೆ ತಲೆಗೆ ಕೈ ಹೊತ್ತು ಕುಳಿತರು. ಪ್ರವಾದಿಯವರನ್ನು(ಸ) ಅಬ್ಬಾಸ್‌ರವರು ತುಂಬಾ ಪ್ರೀತಿಸುತ್ತಿದ್ದರು. ಅವರು ಸಂತೋಷದಲ್ಲಿದ್ದರೆ ಇವರೂ ಸಂತೋಷಪಡುತ್ತಿದ್ದರು. ಅವರಿಗೆ ದುಃಖವಾದರೆ ಇವರೂ ದುಃಖಿತರಾಗುತ್ತಿದ್ದರು. ಅಬ್ಬಾಸ್‌ರವರು ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆ ಮಕ್ಕಾದವರ

ಒಂದೊಂದು ಚಲನವಲನವನ್ನೂ ಪ್ರವಾದಿವರ್ಯರಿಗೆ(ಸ) ಮುಟ್ಟಿಸುತ್ತಿದ್ದರು. ವಿವಿಧ ಕಾರಣಗಳಿಂದಾಗಿ ಮಕ್ಕಾದಲ್ಲೇ ಉಳಿದಿದ್ದ ಬಡಮುಸ್ಲಿಮರಿಗೆ ಸಹಾಯ ಮಾಡುತ್ತಿದ್ದರು. ಅವರು ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋಗಲು ಇಚ್ಛಿಸಿದಾಗಲೆಲ್ಲ ಪ್ರವಾದಿವರ್ಯರು(ಸ) ಅವರನ್ನು ತಡೆಯುತ್ತಿದ್ದರು. "ನೀವೀಗ ಮಕ್ಕಾದಲ್ಲೇ ಉಳಿಯುವುದು ಒಳ್ಳೆಯದು. ಪ್ರವಾದಿತ್ವವು ನನ್ನೊಂದಿಗೆ ಕೊನೆಗೊಂಡಿರುವಂತೆಯೇ ಮಕ್ಕಾದಿಂದ ಹಿಜ್ರತ್ ಮಾಡುವವರಲ್ಲಿ ನೀವೇ ಕೊನೆಯವರಾಗಿರುವಿರಿ" ಎಂದು ಹೇಳಿದರು.

ತಮ್ಮ ರಕ್ತ ಸಂಬಂಧಿಯಾದ ಕಾರಣ ಪ್ರವಾದಿವರ್ಯರು(ಸ) ಅಬ್ಬಾಸ್‌ರು ಪ್ರೀತಿಸುತ್ತಾರೆ. ಅನ್ಯಥಾ ಅವರು ತಮ್ಮೊಂದಿಗಿದ್ದಾರೆಂದು ಕುರೈಶರು ಭಾವಿಸಿದ್ದರು. ಆದ್ದರಿಂದಲೇ ಬದ್ರ್ ಯುದ್ಧದಲ್ಲಿ ಭಾಗವಹಿಸಿ ಮುಸ್ಲಿಮರೊಂದಿಗೆ ಹೋರಾಡುವಂತೆ ಅವರನ್ನು ನಿರ್ಬಂಧಿಸಲಾಗಿತ್ತು. ಆ ಯುದ್ಧದಲ್ಲಿ ಅವರು ಕುರೈಶರ ಜೊತೆ ಸೇರಿಕೊಂಡರು. ಪ್ರವಾದಿಯವರಿಗೆ(ಸ) ಅಬ್ಬಾಸ್‌ರ ನೆಲೆ ಬೆಲೆ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಪ್ರವಾದಿವರ್ಯರು(ಸ) ಸಹಾಬಿಗಳಿಗೆ, ಅಬ್ಬಾಸ್‌ರವರು ಯುದ್ಧರಂಗದಲ್ಲಿ ಎದುರಾದರೆ ಅವರನ್ನು ವಧಿಸಬಾರದು. ಅವರನ್ನು ಒತ್ತಾಯಪೂರ್ವಕ ಎಳೆದು ತರಲಾಗಿದೆ ಎಂದು ಆದೇಶಿಸಿದ್ದರು.

ಬದ್ರ್ ಯುದ್ಧದಲ್ಲಿ ಅಲ್ಲಾಹನು ಮುಸ್ಲಿಮರಿಗೆ ವಿಜಯ ಪ್ರದಾನ ಮಾಡಿದನು. ಅಬ್ಬಾಸ್ ಸೆರೆ ಹಿಡಿಯಲ್ಪಟ್ಟರು. ಯುದ್ಧ ಕೈದಿಗಳನ್ನು ಹಗ್ಗದಿಂದ ಬಿಗಿದು ಕಟ್ಟಲಾಗಿತ್ತು. ಅಬ್ಬಾಸ್‌ರಿಗೆ ಹಾಕಿದ ಕಟ್ಟು ಹೆಚ್ಚು ಬಿಗಿಯಾಗಿತ್ತು. ಅದರಿಂದ ಅವರಿಗೆ ನೋವು ತಡೆಯಲಾರದೆ ಚೀರಾಡತೊಡಗಿದರು. ಅವರ ಈ ಕಷ್ಟವನ್ನು ನೋಡಿ ಪ್ರವಾದಿಯವರಿಗೆ(ಸ) ನಿದ್ದೆ ಬರಲಿಲ್ಲ. ಸಹಾಬಿಗಳಿಗೆ ವಿಷಯ ತಿಳಿಸಿದಾಗ ಅವರು ಕಟ್ಟುಗಳನ್ನು ಬಿಚ್ಚಿದರು.

ಪ್ರವಾದಿವರ್ಯರ(ಸ) ಈ ಪ್ರೀತಿ ಒಂದು ಕಡೆಯಾದರೆ, ಪರಿಹಾರದ ಧನ ಕೇಳುವ ಸಂದರ್ಭ ಬಂದಾಗ ಅಬ್ಬಾಸ್‌ರಿಂದ ಒಂದು ದೊಡ್ಡ ಮೊತ್ತವನ್ನು ಅಪೇಕ್ಷಿಸಲಾಯಿತು. ಆಗ ಅವರು, ನಾನು ಮೊದಲೇ ಮನಸ್ಸಿನಲ್ಲಿ ಮುಸ್ಲಿಮನಾಗಿರುವೆನು. ನನ್ನನ್ನು ಮಕ್ಕಾದವರು ಬಲವಂತವಾಗಿ ಎಳೆದು ತಂದಿದ್ದಾರೆ ಎಂಬ ನೆಪವೊಡ್ಡಿದರು. ಅದಕ್ಕೆ ಪ್ರವಾದಿ(ಸ) ಹೀಗೆ ಉತ್ತರಿಸಿದರು. "ಮನಸ್ಸಿನ ಸ್ಥಿತಿಯನ್ನು ಅಲ್ಲಾಹನೇ ಬಲ್ಲ. ನಿಮ್ಮ ಮಾತು ಸರಿಯಾಗಿದ್ದರೆ ಅದರ ಪ್ರತಿಫಲ ಅಲ್ಲಾಹನೇ ನೀಡುವನು. ಬಾಹ್ಯ ಸ್ಥಿತಿಯಲ್ಲಿ ನಿಮಗೆ ಯಾವುದೇ ರಿಯಾಯಿತಿ ತೋರಲಾಗದು."

ಅನಂತರ ಅವರು ತನ್ನ ಬಡತನದ ನೆಪವೊಡ್ಡಿದರು. ಅದನ್ನೂ ಸ್ವೀಕರಿಸಲಾಗಲಿಲ್ಲ. ಪ್ರವಾದಿ(ಸ) ಹೇಳಿದರು- "ನೀವು ನಿಮ್ಮ ಪತ್ನಿಯ ಬಳಿ ಮಕ್ಕಾದಲ್ಲಿ ದೊಡ್ಡ ಮೊತ್ತವೊಂದನ್ನು ಇಟ್ಟು ಬಂದಿದ್ದೀರಿ." ಇದನ್ನು ಕೇಳಿ ಅಬ್ಬಾಸ್‌ರಿಗೆ ಅತ್ಯಾಶ್ಚರ್ಯವಾಯಿತು. ಏಕೆಂದರೆ ಈ ವಿಷಯ ತನಗೂ ಪತ್ನಿಗೂ ಅಲ್ಲದೆ ಬೇರಾರಿಗೂ ತಿಳಿದಿರಲಿಲ್ಲ. ಅವರು ಹೀಗೆಂದರು- "ಅಲ್ಲಾಹನಾಣೆ! ಈ ವಿಷಯ ನನಗೂ ನನ್ನ ಪತ್ನಿಗೂ ಅಲ್ಲದೆ ಬೇರಾರಿಗೂ ತಿಳಿದಿರಲಿಲ್ಲ. ಖಂಡಿತವಾಗಿಯೂ ನೀವು ಅಲ್ಲಾಹನ ಪ್ರವಾದಿಯಾಗಿದ್ದೀರಿ." ಅನಂತರ ತನ್ನನ್ನೂ ತನ್ನ ಇಬ್ಬರು

ಭ್ರಾತೃಜರಾದ ಅಕೀಲ್ ಮತ್ತು ನೌಫಲ್ ಬಿನ್ ಹಾರಿಸ್‌ರನ್ನೂ ಬಿಡುಗಡೆ ಮಾಡಲು ಬೇಕಾದಷ್ಟು ದೊಡ್ಡ ಪರಿಹಾರ ಧನ ಪಾವತಿಸಿದರು.

ಆ ಬಳಿಕ ಅವರು ಕೆಲವು ಕಾಲ ಮಕ್ಕಾದಲ್ಲೇ ಉಳಿದರು. ಮಕ್ಕಾ ವಿಜಯಕ್ಕಿಂತ ಸ್ವಲ್ಪ ಮುಂಚೆ ಹಿಜ್ರತ್‌ನ ಅನುಮತಿ ಸಿಕ್ಕಿದಾಗ ಮನೆ ಮಂದಿಯೊಂದಿಗೆ ಮದೀನಾಕ್ಕೆ ತೆರಳಿದರು. ಅಲ್ಲಿ ಬಹಿರಂಗವಾಗಿ ತನ್ನ ಇಸ್ಲಾಮ್ ಸ್ವೀಕಾರದ ಘೋಷಣೆ ಮಾಡಿದರು ಮತ್ತು ಮುಸ್ಲಿಮರ ಎಲ್ಲ ಸುಖದುಃಖಗಳಲ್ಲಿ ಭಾಗಿಯಾದರು.

ಇಸ್ಲಾಮ್ ಸ್ವೀಕಾರಕ್ಕಿಂತ ಮೊದಲು ಅಬ್ಬಾಸ್‌ರವರು ದೊಡ್ಡ ಐಶ್ವರ್ಯವಂತ ರಾಗಿದ್ದರು. ತಂದೆಯ ಮರಣದ ಬಳಿಕ ಕಅಬಾ ಭವನದ ಆಡಳಿತ ಹಾಗೂ ಹಾಜಿಗಳಿಗೆ ನೀರು ಕುಡಿಸುವುದರ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡರು. ಉಪಜೀವನ ಮಾರ್ಗ ವ್ಯಾಪಾರವಾಗಿತ್ತು. ಜೊತೆಗೆ ಬಡ್ಡಿ ವ್ಯವಹಾರವನ್ನೂ ಮಾಡುತ್ತಿದ್ದರು. ಮಕ್ಕಾ ವಿಜಯದ ಬಳಿಕ ಹಿ.ಶ. 10ರಲ್ಲಿ ಪ್ರವಾದಿ(ಸ) ತಮ್ಮ ವಿದಾಯ ಹಜ್ಜ್‌ನ ಸಂದರ್ಭದಲ್ಲಿ ಮಾಡಿದ ಕೊನೆಯ ಭಾಷಣದಲ್ಲಿ ಬಡ್ಡಿಯ ನಿಷೇಧವನ್ನು ಈ ರೀತಿ ಘೋಷಿಸಿದರು.

"ಇಂದು ಅರೇಬಿಯಾದ ಎಲ್ಲ ಬಡ್ಡಿ ವ್ಯವಹಾರಗಳೂ ಕೊನೆಗೊಳಿಸಲ್ಪಟ್ಟಿವೆ. ಮೊತ್ತ ಮೊದಲು ನಾನು ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್‌ರ ಬಡ್ಡಿಯನ್ನು ಕೊನೆಗೊಳಿಸುತ್ತೇನೆ."

ಈ ಘೋಷಣೆಯ ಬಳಿಕ ಅಬ್ಬಾಸ್‌ರ ಈ ವರಮಾನ ಸ್ಥಗಿತಗೊಂಡಿತು. ಮಕ್ಕಾದ ವ್ಯಾಪಾರ ವಹಿವಾಟುಗಳೆಲ್ಲ ಹಿಜ್ರತ್‌ಗಿಂತ ಮುಂಚೆಯೇ ಕೊನೆಗೊಂಡಿತ್ತು. ಆದ್ದರಿಂದ ಪ್ರವಾದಿವರ್ಯರು(ಸ) ಸಮರಾರ್ಜಿತ ಸೊತ್ತಿನಿಂದ ಮತ್ತು ಫದಕ್‌ನ ತಮ್ಮ ಸೊತ್ತಿನ ವರಮಾನ ದಿಂದ ಅವರಿಗೆ ಸಹಾಯ ಮಾಡುತ್ತಿದ್ದರು. ಈ ರೀತಿ ಸಿಕ್ಕಿದುದನ್ನು ಅಬ್ಬಾಸ್‌ರವರು ಮನಬಿಚ್ಚಿ ಖರ್ಚು ಮಾಡುತ್ತಿದ್ದರು. ಅತಿಥಿಗಳನ್ನು ಸತ್ಕರಿಸುತ್ತಿದ್ದರು. ಅತ್ಯಂತ ಕೋಮಲ ಹೃದಯದವರಾದ ಅವರು ಪ್ರಾರ್ಥನೆಗಾಗಿ ಕೈಯೆತ್ತಿದರೆ ತನ್ನನ್ನು ತಾನೇ ಮರೆಯುತ್ತಿದ್ದರು. ಅವರ ಪ್ರಾರ್ಥನೆಗಳು ಬಹಳ ಪರಿಣಾಮಕಾರಿಯಾಗಿರುತ್ತಿತ್ತು. ಉಮರ್ ಫಾರೂಕ್‌ರವರ(ರ) ಆಡಳಿತ ಕಾಲದಲ್ಲಿ ಒಮ್ಮೆ ಮಳೆಯಿಲ್ಲದೆ ತೀವ್ರ ಬರಗಾಲವುಂಟಾಯಿತು. ಉಮರ್‌ರವರು ಅಬ್ಬಾಸ್‌ರವರನ್ನು ಮಳೆಗಾಗಿ ಪ್ರಾರ್ಥಿಸುವಂತೆ ವಿನಂತಿಸಿದರು. ಅಬ್ಬಾಸ್ ಪ್ರಾರ್ಥಿಸಲೆಂದು ಕೈಯೆತ್ತಿದ್ದೇ ತಡ, ಶುಭ್ರ ಆಕಾಶದಲ್ಲಿ ಕಾರ್ಮೋಡಗಳು ಗೋಚರಿಸಿದುವು. ನೋಡು ನೋಡುತ್ತಿದ್ದಂತೆಯೇ ಧಾರಾಕಾರ ಮಳೆ ಸುರಿಯಿತು.

ಅಬ್ಬಾಸ್‌ರವರ ಪ್ರೀತಿ ಮತ್ತು ವಿಶೇಷ ಗುಣಗಳಿಂದಾಗಿ ಪ್ರವಾದಿವರ್ಯರು(ಸ) ಅವರನ್ನು ತುಂಬಾ ಗೌರವಿಸುತ್ತಿದ್ದರು. ಅವರಿಗೆ ಯಾರಾದರೂ ಕೋಪ ಬರಿಸಿದರೆ ಪ್ರವಾದಿವರ್ಯರೂ ಕೋಪಗೊಳ್ಳುತ್ತಿದ್ದರು. "ಅಬ್ಬಾಸ್ ಪ್ರವಾದಿಯ ಚಿಕ್ಕಪ್ಪ. ಚಿಕ್ಕಪ್ಪನೆಂದರೆ ತಂದೆಗೆ ಸಮಾನ" ಎನ್ನುತ್ತಿದ್ದರು. ಕೆಲವೊಮ್ಮೆ ಹೀಗೂ ಹೇಳುತ್ತಿದ್ದರು- "ಈ ಅಬ್ಬಾಸ್ ಅಲ್ಲಾಹನ ಪ್ರವಾದಿಯ ಚಿಕ್ಕಪ್ಪ. ಇವರು ಕುರೈಶರ ಅತಿ ದೊಡ್ಡ ದಾನಶೂರ ವ್ಯಕ್ತಿಯಾಗಿದ್ದಾರೆ. ತನ್ನ ಬಂಧು ಬಳಗದವರ ಬಗ್ಗೆ ವಿಶೇಷ ಕಾಳಜಿಯುಳ್ಳವರಾಗಿದ್ದಾರೆ." ಒಮ್ಮೆ ಅಬ್ಬಾಸ್‌ರನ್ನೇ ಅಭಿಸಂಬೋಧಿಸಿ ಹೀಗೆಂದರು- "ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆತನಾಣೆ! ಯಾರು ಅಲ್ಲಾಹ್ ಮತ್ತು ಪ್ರವಾದಿಗಾಗಿ

ನಿಮ್ಮನ್ನು ಪ್ರೀತಿಸುವುದಿಲ್ಲವೋ ಅವನ ಮನಸ್ಸಿನಲ್ಲಿ ಈಮಾನಿನ ಜ್ಯೋತಿಯಿರಲಾರದು. ಚಿಕ್ಕಪ್ಪ ತಂದೆಗೆ ಸಮಾನವಾಗಿದ್ದಾರೆ." ಪ್ರವಾದಿ(ಸ) ನಿಧನರಾದಾಗ ಸಂತಾಪ ಸೂಚಿಸಲು ಜನರು ಅಬ್ಬಾಸ್‌ರನ್ನೇ ಸಮೀಪಿಸುತ್ತಿದ್ದರು.

ಅಬ್ಬಾಸ್‌ರು(ರ) ದೊಡ್ಡ ಸ್ವರದ ವ್ಯಕ್ತಿಯಾಗಿದ್ದರು. ಯುದ್ಧ ರಂಗದಲ್ಲೂ ಎಲ್ಲೆಲ್ಲೂ ಆಯುಧಗಳ ತಾಕಲಾಟ ಮತ್ತು ಸೈನಿಕರ ಬೊಬ್ಬೆಯಲ್ಲಿ ಯಾರಿಗೂ ಏನೂ ಕೇಳದ ಸ್ಥಿತಿಯಲ್ಲಿದ್ದಾಗಲೂ ಅವರ ಮಾತು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಅವರೇ ಹೇಳುವಂತೆ, ಹುನೈನ್ ಯುದ್ಧದ ವೇಳೆ ಪ್ರವಾದಿಯವರ(ಸ) ಕುದುರೆಯ ಲಗಾಮು ಹಿಡಿದು ಮುಂದೆ ಸಾಗುತ್ತಿದ್ದಂತೆ ಒಮ್ಮೆಲೇ ಸತ್ಯನಿಷೇಧಿಗಳ ಕೈಮೇಲಾಯಿತು. ಅವರ ಪ್ರಾಬಲ್ಯ ಹೆಚ್ಚಿತು. ಮುಸ್ಲಿಮರು ಚೆಲ್ಲಾಪಿಲ್ಲಿಯಾದರು. ಆಗ ಪ್ರವಾದಿ(ಸ) ಹೇಳಿದರು- ಅಬ್ಬಾಸ್! ಈಟಿಧಾರಿಗಳನ್ನು ಕರೆಯಿರಿ. ನನ್ನ ಸ್ವರ ಮೊದಲೇ ದೊಡ್ಡದಾಗಿತ್ತು. ನಾನು, ಈಟಿಧಾರಿಗಳೇ ಎಲ್ಲಿದ್ದೀರಿ ಎಂದು ಕೂಗಿ ಕರೆದೆ. ಈ ಘೋಷಣೆ ಮೊಳಗುತ್ತಲೇ ಎಲ್ಲರೂ ಬಂದು ಸೇರಿದರು. ಪತನದತ್ತ ಸಾಗುತ್ತಿದ್ದ ಹೋರಾಟವು ಪುನಃ ವಿಜಯದೆಡೆಗೆ ಸಾಗಿತು.

ಅಬ್ಬಾಸ್‌ರ ಬದುಕಿನಲ್ಲಿ ನಡೆದ ಒಂದು ಘಟನೆ ಹೀಗಿದೆ: ಅಮೀರುಲ್ ಮೂಮಿನೀನ್ ಉಮರ್ ಫಾರೂಕ್‌ರ ಕಾಲದಲ್ಲಿ ಅವರ ಮನೆಯ ಮಾಡಿನ ದಂಬೆ ಮಸೀದಿಯತ್ತ ಇತ್ತು. ಮಳೆ ಬಂದಾಗ ಅದರಿಂದ ಇಳಿಯುವ ನೀರು ಮಸೀದಿಗೆ ಹರಿದು ನಮಾಝ್ ಮಾಡುವವರಿಗೆ ತೊಂದರೆಯಾಗುತ್ತಿತ್ತು. ಈ ಬಗ್ಗೆ ಜನರು ಖಲೀಫರಿಗೆ ದೂರು ಸಲ್ಲಿಸಿದರು. ಖಲೀಫರು ವಿಷಯ ತಿಳಿದು ಅದನ್ನು ಮುಚ್ಚಿ ಬಿಡುವಂತೆ ಆಜ್ಞಾಪಿಸಿದರು. ಅಬ್ಬಾಸ್‌ರಿಗೆ ಈ ವಿಷಯ ತಿಳಿಯಿತು. ಅವರು ಖಲೀಫರ ವಿರುದ್ಧ ದೂರು ಕೊಟ್ಟರು. "ಇದು ಪ್ರವಾದಿಯವರ ಕಾಲದಿಂದಲೇ ಇರುವಂತಹದ್ದು. ನನ್ನ ಅನುಮತಿಯಿಲ್ಲದೆ ಅದನ್ನು ಮುಚ್ಚಿಸಲಾಗಿದೆ" ಎಂದು ಪುರಾವೆ ಒದಗಿಸಿದರು.

ಈ ಪುರಾವೆಯ ಆಧಾರದಲ್ಲಿ ಕಾಝಿ (ನ್ಯಾಯಾಧೀಶರು) ಖಲೀಫರ ವಿರುದ್ಧ, ಅಬ್ಬಾಸ್‌ರ ಪರವಾಗಿ ತೀರ್ಪು ನೀಡಿದರು. ಅಬ್ಬಾಸ್‌ರು ಖಲೀಫರ ಉಪಸ್ಥಿತಿಯಲ್ಲೇ ಅದನ್ನು ತೆರೆದರು. ಇದೆಲ್ಲ ನಡೆದ ಬಳಿಕ ಅಬ್ಬಾಸ್ ಹೇಳಿದರು- ಅಮೀರುಲ್ ಮುಅ್‌ಮಿನೀನ್! ನಾನು ನನ್ನ ಹಕ್ಕನ್ನು ಮೊದಲೇ ಬಿಟ್ಟು ಕೊಡುತ್ತಿದ್ದರೆ, ನಿಮ್ಮಲ್ಲಿರುವ ಪ್ರೀತಿಯಿಂದ ಅಥವಾ ನಿಮ್ಮ ಭಯದ ಕಾರಣ ಬಿಟ್ಟು ಕೊಟ್ಟಿದ್ದೇನೆಂಬ ಆರೋಪ ನನ್ನ ಮೇಲೆ ಬೀಳುವ ಸಂಭವವಿತ್ತು. ಈಗ ಈ ವ್ಯಾಜ್ಯದಲ್ಲಿ ನಾನು ಗೆದ್ದಿರುವುದರಿಂದ ನನ್ನ ಇಡೀ ಮನೆಯನ್ನು ಅಲ್ಲಾಹನಿಗಾಗಿ ಅರ್ಪಿಸುತ್ತಿದ್ದೇನೆ. ಅದನ್ನು ಹೇಗೆ ಬೇಕಾದರೂ ನೀವು ಉಪಯೋಗಿಸಬಹುದು. ಈ ರೀತಿ ಅಲ್ಲಾಹನ ಸಂಪ್ರೀತಿಯನ್ನು ಸಂಪಾದಿಸಿದ ಅಬ್ಬಾಸ್‌ರವರು ತನ್ನ 88ನೇ ಪ್ರಾಯದಲ್ಲಿ ಇಹಲೋಕ ತ್ಯಜಿಸಿದರು. ಅವರ ಪುತ್ರರ ಪೈಕಿ ಅಬ್ದುಲ್ಲಾ(ರ) ಸುಪ್ರಸಿದ್ಧ ಸಹಾಬಿಯಾಗಿದ್ದಾರೆ.

# ಹುತಾತ್ಮ ಶ್ರೇಷ್ಠ
# ಹಂಝಾ ಬಿನ್ ಅಬ್ದುಲ್ ಮುತ್ತಲಿಬ್(ರ)

ಪ್ರವಾದಿ ಮುಹಮ್ಮದ್‌ರವರ(ಸ) ಚಿಕ್ಕಪ್ಪ ಹಾಗೂ ಚಿಕ್ಕಮ್ಮನ ಮಗನಾದ* ಹಂಝಾ ಪ್ರವಾದಿವರ್ಯರ(ಸ) ಸ್ತನಪಾನ ಸಂಬಂಧ ಸಹೋದರನೂ ಆಗಿದ್ದರು. ಅಬೂಲಹಬನ ದಾಸಿ ಸೌಬಿಯಾ ಪ್ರವಾದಿಯವರಿಗೆ ಎದೆಹಾಲು ಕುಡಿಸುತ್ತಿದ್ದಾಗ ಹಂಝಾರಿಗೂ ಕುಡಿಸುತ್ತಿದ್ದರು. ಪ್ರಾಯದಲ್ಲಿ ಅವರಿಬ್ಬರ ನಡುವೆ ಹೆಚ್ಚೇನೂ ಅಂತರವಿರಲಿಲ್ಲ. ಅವರು ಪ್ರವಾದಿವರ್ಯರಿಗಿಂತ(ಸ) ಎರಡು ವರ್ಷ ಹಿರಿಯರಾಗಿದ್ದರು. ಅಲ್ಲಾಹನು ಹಮ್‌ಝಾರಿಗೆ ಹೆಚ್ಚು ದೈಹಿಕ ಶಕ್ತಿಯನ್ನು ದಯಪಾಲಿಸಿದ್ದನು. ಅವರು ತನ್ನ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಅಲ್ಲಾಹನ ಮಾರ್ಗದಲ್ಲಿ ತೊಡಗಿಸಿದರು. ತನ್ನ ಪ್ರತಿಭೆಗಳನ್ನೆಲ್ಲ ಇಸ್ಲಾಮಿಗಾಗಿಯೇ ವಿನಿಯೋಗಿಸಿದರು. ಇದರಿಂದಾಗಿ ಪ್ರವಾದಿವರ್ಯರಿಂದ(ಸ) ಸಯ್ಯಿದುಶ್ಶುಹದಾ(ಹುತಾತ್ಮರ ನಾಯಕ) ಎಂಬ ಬಿರುದನ್ನು ಪಡೆದರು.

ಹಂಝಾರಿಗೆ ಚಿಕ್ಕಂದಿನಿಂದಲೇ ಮಲ್ಲ ಯುದ್ಧ ಮತ್ತು ಬೇಟೆಯೆಂದರೆ ಬಹಳ ಆಸಕ್ತಿ. ಬಾಣ ಎಸೆಯುವುದು ಮತ್ತು ಖಡ್ಗ ಚಲಾಯಿಸುವುದು ಅವರ ದಿನಚರಿಯಾಗಿತ್ತು. ಆದರೆ ತೌಹೀದ್(ಏಕದೇವತ್ವ)ನ ಕರೆಯು ಅವರ ಮನೆಯಿಂದಲೇ ಮೊಳಗಿದರೂ ಅವರ ಬೇಟೆ, ಬಾಣ ಎಸೆತ ಮತ್ತು ಖಡ್ಗ ಪ್ರಯೋಗ ಚಟುವಟಿಕೆಗಳಿಂದಾಗಿ ಅವರಿಗೆ ಅದರತ್ತ ಗಮನ ಹರಿಸುವಷ್ಟು ಪುರುಸೊತ್ತು ಸಿಕ್ಕಿರಲಿಲ್ಲ.

ಅಲ್ಲಾಹನು ಇಸ್ಲಾಮಿನ ಸೌಭಾಗ್ಯವನ್ನು ಅವರಿಗೆ ಅದ್ಭುತ ರೀತಿಯಲ್ಲಿ ದಯಪಾಲಿಸಿದನು.

ಅವರು ಒಂದು ಬೇಟೆಯಿಂದ ಮರಳುತ್ತಿದ್ದರು. ನಗರಕ್ಕೆ ಪ್ರವೇಶಿಸುವ ದಾರಿಯಲ್ಲಿ ದಾಸಿ ಸಿಕ್ಕಿದಳು. ಆಕೆ ಹೀಗೆಂದಳು- "ಅಯ್ಯಯ್ಯೋ! ಸ್ವಲ್ಪ ಸಮಯ ಮುಂಚೆ ನೀವು ಬಂದಿದ್ದರೆ ನಿಮ್ಮ ಭ್ರಾತೃಜನ(ಸ) ಅವಸ್ಥೆಯನ್ನು ನೋಡಬಹುದಾಗಿತ್ತು. ಅವರು ಕಅಬಾ ಭವನದಲ್ಲಿ ತಮ್ಮ ಧರ್ಮವನ್ನು ಬೋಧಿಸುತ್ತಿದ್ದರು. ಅಲ್ಲಿಗೆ ಬಂದ ಅಬೂಜಹಲ್ ಅವರನ್ನು ಚೆನ್ನಾಗಿ ಬೈದರು. ಬಹಳ ಕೆಟ್ಟ ರೀತಿಯಲ್ಲಿ ವರ್ತಿಸಿದರು. ಆದರೆ ಮುಹಮ್ಮದ್(ಸ) ಏನೂ ಮಾತಾಡದೆ ಅಸಹಾಯಕತೆಯೊಂದಿಗೆ ಮರಳಿದರು."

---

*ಹಂಝಾರ ತಾಯಿ ಹಾಲ ಬಿಂತಿ ವಹಬ್ ಪ್ರವಾದಿವರ್ಯರ(ಸ) ತಾಯಿ ಆಮಿನಾರ ಚಿಕ್ಕಪ್ಪನ ಮಗಳಾಗಿದ್ದರು.

ಇದನ್ನು ಕೇಳಿದಾಗ ಹಂಝಾರ ರಕ್ತ ಕುದಿಯತೊಡಗಿತು. ಹೃದಯ ತಲ್ಲಣಗೊಂಡಿತು. ಕಅಬಾ ಭವನಕ್ಕೆ ಧಾವಿಸಿ ಬಂದರು. ದಾರಿಯಲ್ಲಿ ಎದುರಾಗುತ್ತಿದ್ದ ಸ್ನೇಹಿತರ ಕಡೆಗೆ ಗಮನ ಹರಿಸುವಷ್ಟು ತಾಳ್ಮೆಯೂ ಅವರಲ್ಲಿರಲಿಲ್ಲ. ಕಅಬಾದ ಬಳಿ ಅಬೂಜಹಲ್ ತನ್ನ ಕೆಲವು ಉಂಡಾಡಿ ಸಂಗಾತಿಗಳ ಬಳಿ ಕುಳಿತಿದ್ದ. ಅವನನ್ನು ಕಂಡ ಕೂಡಲೇ ಹಂಝಾರು(ರ) ಮುಂದೆ ಧುಮುಕಿ ಅವನ ತಲೆಗೆ ಬಿಲ್ಲಿನಿಂದ ಜೋರಾಗಿ ಹೊಡೆದರು. ಅವನ ತಲೆಯಿಂದ ರಕ್ತ ಚಿಮ್ಮಿ ಗಾಯವಾಯಿತು. ಅವನ ಸಂಗಾತಿಗಳು ಸಹಾಯಕ್ಕೆ ಮುಂದೆ ಬಂದರು. "ಬಹುಶಃ ನೀನೂ ಧರ್ಮಭ್ರಷ್ಟನಾಗಿರುವೆ" ಎಂದರು. ಹಮ್‌ಝಾ ಹೇಳಿದರು- "ಹೌದು! ನನಗೆ ಸತ್ಯ ಮನವರಿಕೆಯಾಗಿ ಬಿಟ್ಟಿದೆ. ನಾನು ಸಾಕ್ಷಿ ವಹಿಸುತ್ತೇನೆ. ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ. ಅವರು ಹೇಳುವುದೆಲ್ಲ ಸತ್ಯ. ದೇವನಾಣೆ! ಇನ್ನು ನಾನು ಮರಳುವವನಲ್ಲ. ನೀವು ಸತ್ಯವಂತರಾಗಿದ್ದರೆ ನನ್ನನ್ನು ತಡೆಯಿರಿ." ಹಂಝಾರ ಕೋಪವನ್ನು ನೋಡಿ ಅಬೂಜಹಲ್ ತನ್ನ ಸಂಗಾತಿಗಳನ್ನು ಅವರ ಮೇಲೆ ಕೈ ಮಾಡದಂತೆ ತಡೆದನು.

ಇದು ಮಕ್ಕಾದ ಸತ್ಯನಿಷೇಧಿಗಳು ದುರ್ಬಲ, ಅಸಹಾಯಕ ಮುಸ್ಲಿಮರನ್ನು ಪೀಡಿಸುತ್ತಿದ್ದ ಕಾಲವಾಗಿತ್ತು. ಅವರನ್ನು ಈ ಕಿರುಕುಳದಿಂದ ರಕ್ಷಿಸುವ ಸಲುವಾಗಿ ಪ್ರವಾದಿವರ್ಯರು(ಸ) ಅರ್ಕಮ್ ಬಿನ್ ಅರ್ಕಮ್‌ರ ಮನೆಯಲ್ಲಿ ಆಶ್ರಯ ಪಡೆದಿದ್ದರು. ಜನರು ಇಸ್ಲಾಮಿನ ಹೆಸರು ಹೇಳಲು ಹೆದರುತ್ತಿದ್ದರು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಹಂಝಾರ ಸತ್ಯ ಸ್ವೀಕಾರದ ಘೋಷಣೆಯಾಗುತ್ತದೆ. ಇದು ಅರಬರ ಮೇಲೆ ಅವರಿಗಿದ್ದ ಪ್ರಭಾವ ಮತ್ತು ವರ್ಚಸ್ಸನ್ನು ಸೂಚಿಸುತ್ತದೆ. ವಾಸ್ತವದಲ್ಲಿ ಅವರ ಸತ್ಯ ಸ್ವೀಕಾರದಿಂದ ಪರಿಸ್ಥಿತಿ ಒಮ್ಮೆಲೇ ಬದಲಾಯಿತು. ಈಗ ಸತ್ಯನಿಷೇಧಿಗಳು ಮುಸ್ಲಿಮರನ್ನು ಹಿಂಸಿಸುವುದಕ್ಕೆ ಹಿಂದೆ ಮುಂದೆ ನೋಡುವಂತಾಯಿತು. ಈ ರೀತಿ ಹಂಝಾರವರು ಅಲ್ಲಾಹನ ಮಾರ್ಗದಲ್ಲಿ ಪ್ರಪ್ರಥಮ ಬಾರಿ ತನ್ನ ಶೌರ್ಯ ಪರಾಕ್ರಮಗಳಿಗೆ ಸಾಕ್ಷ್ಯ ವಹಿಸಿದರು. ಅವರ ಇಸ್ಲಾಮ್ ಸ್ವೀಕಾರದಿಂದ ಸತ್ಯನಿಷೇಧಿಗಳು ಚಿಂತೆಗೀಡಾದರು. ಈಗೇನು ಮಾಡುವುದೆಂದು ತೋಚದಾಯಿತು. ಕೊನೆಗೆ ಪರಸ್ಪರ ಸಮಾಲೋಚನೆ ನಡೆಸಿದರು. ಕೊನೆಗೆ, ಇನ್ನು ಇಸ್ಲಾಮಿನ ಮಹಾ ನಾಯಕ[ಮುಹಮದ್(ಸ)]ರನ್ನೇ ಮುಗಿಸಿ ಇಸ್ಲಾಮಿನ ಸದ್ದಡಗಿಸುವುದೆಂಬ ತೀರ್ಮಾನಕ್ಕೆ ಬಂದರು. ಅದಕ್ಕೆ ಬಹುಮಾನವಾಗಿ ಒಂದು ದೊಡ್ಡ ಮೊತ್ತವನ್ನು ಘೋಷಿಸಲಾಯಿತು.

ಮಕ್ಕಾದ ಪರಾಕ್ರಮಿಗಳ ಪೈಕಿ ಪ್ರಸಿದ್ಧರಾದ ಉಮರ್(ರ) ನಗ್ನ ಖಡ್ಗ ಹಿಡಿದು ಅರ್ಕಮ್‌ರ ಮನೆಯತ್ತ ದಾಪುಗಾಲು ಹಾಕುತ್ತಾ ನಡೆದರು. ಅಲ್ಲಿ ಸಹಾಬಿಗಳು ಪ್ರವಾದಿವರ್ಯರ(ಸ) ಸುತ್ತ ನೆರೆದಿದ್ದರು. ಉಮರ್‌ರವರು ಬರುವುದು ತಿಳಿದು ಚಿಂತಾಕ್ರಾಂತರಾದರು. ಆದರೆ ಹಂಝಾ ಹೀಗೆ ಘರ್ಜಿಸಿದರು- ನೀವು ಯಾರೂ ಚಿಂತಿಸಬೇಡಿ. ಆತ ಒಳ್ಳೆಯ ಮನಸ್ಸಿನಿಂದ ಬಂದಿದ್ದರೆ ಸರಿ, ಅನ್ಯಥಾ ಅವನ ಖಡ್ಗದಿಂದಲೇ ಅವನ ರುಂಡ ಹಾರಿಸಿಬಿಡುವೆನು.

ಇದು ಅವರ ಅಪ್ರತಿಮ ಶೌರ್ಯ ಹಾಗೂ ಆ ಶೌರ್ಯದ ಮೇಲೆ ಅವರಿಗಿದ್ದ ಭರವಸೆಯ ಪ್ರತೀಕವಾಗಿತ್ತು. ಅರಬರು ಸಾಮಾನ್ಯವಾಗಿ ದುರಹಂಕಾರಿಗಳಾಗಿದ್ದರು. ಈ ಕೆಟ್ಟ ಗುಣದಿಂದಾಗಿಯೇ

ಅನೇಕ ಮಂದಿ ಇಸ್ಲಾಮಿನ ಸೌಭಾಗ್ಯದಿಂದ ವಂಚಿತರಾಗಿದ್ದರು. ಬದ್ರ್ ರಣಾಂಗಣದಲ್ಲಿ ಪ್ರವಾದಿವರ್ಯರನ್ನು(ಸ) ತೋರಿಸುತ್ತಾ ಅಬುಲ್‌ಬಖ್ತರಿಯು ಅಬೂಜಹಲ್ ನೊಡನೆ ಕೇಳಿದನು- "ಈ ವ್ಯಕ್ತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಆಗ ಆತ ಹೇಳಿದ- "ಅವರ ಸತ್ಯಸಂಧತೆಯಲ್ಲಿ ಯಾವುದೇ ಸಂಶಯವಿಲ್ಲ. ಆದರೆ ನಾವು ಬಿಲಾಲ್‌ನಂತಹವರ ಜೊತೆಯಲ್ಲಿ ಕುಳಿತುಕೊಳ್ಳುವುದು ಹೇಗೆ?" ಗುಲಾಮರಾಗಿದ್ದ ಬಿಲಾಲ್ ಇಸ್ಲಾಮ್ ಸ್ವೀಕರಿಸಿದ್ದರು. ಅಂದಿನ ಸಮಾಜದಲ್ಲಿ ಗುಲಾಮರನ್ನು ಪ್ರಾಣಿಗಿಂತಲೂ ಕಡೆಯಾಗಿ ಕಾಣಲಾಗುತ್ತಿತ್ತು. ಅದನ್ನು ಇಂದು ನಾವು ಊಹಿಸಲೂ ಸಾಧ್ಯವಿಲ್ಲ. ಇಲ್ಲಿನ ಅಸ್ಪೃಶ್ಯರು ಮತ್ತು ದಕ್ಷಿಣ ಆಫ್ರಿಕಾದ ಕರಿಯರೊಂದಿಗೆ ಯಾವ ರೀತಿಯಲ್ಲಿ ವರ್ತಿಸಲಾಗುತ್ತದೋ ಅದಕ್ಕೆ ಆ ಕಾಲದ ಗುಲಾಮರನ್ನು ಹೋಲಿಸಲು ಸಾಧ್ಯವಿಲ್ಲ. ಅಷ್ಟೊ ಕೆಟ್ಟದಾಗಿ ಅವರೊಂದಿಗೆ ವರ್ತಿಸಲಾಗುತ್ತಿತ್ತು. ಆದರೆ ಅಲ್ಲಾಹನು ಸಹಾಬಿಗಳಿಗೆ ಇಸ್ಲಾಮಿನ ಮಹಾ ಸೌಭಾಗ್ಯ ದಯಪಾಲಿಸಿದನು. ಅದರಲ್ಲಿ ಬಿಳಿಯ - ಕರಿಯ, ಉಚ್ಚ - ನೀಚ, ಬಡವ - ಬಲ್ಲಿದರೆಂಬ ಯಾವ ಭೇದಭಾವದ ಲವಲೇಶವೂ ಉಳಿಯಲಿಲ್ಲ. ಹಂಝಾ ಅವರು ಅದಕ್ಕೊಂದು ಉದಾಹರಣೆಯಾಗಿದ್ದಾರೆ.

ಪ್ರವಾದಿ(ಸ) ತಮ್ಮ ಪ್ರಸಿದ್ಧ ಗುಲಾಮ ಝೈದ್ ಬಿನ್ ಹಾರಿಸ್‌ರನ್ನು ತಮ್ಮ ಸ್ವಂತ ಚಿಕ್ಕಪ್ಪನವರಾದ ಹಂಝಾರೊಂದಿಗೆ ಇಸ್ಲಾಮೀ ಸಹೋದರತೆಯಲ್ಲಿ ಪೋಣಿಸಿದರು. ಇದರಿಂದಾಗಿ ಅವರು ಝೈದ್‌ರನ್ನು ಅತಿಯಾಗಿ ಪ್ರೀತಿಸತೊಡಗಿದರು. ಅವರಿಗೆ ಎಲ್ಲಿಗಾದರೂ ಹೋಗಲಿಕ್ಕಿದ್ದರೆ ಈ ಸೋದರನಿಗೆ ತನ್ನ ಉತ್ತರಾಧಿಕಾರಿಯೆಂಬಂತೆ ಉಪದೇಶಿಸುತ್ತಿದ್ದರು. ಈ ರೀತಿ ಹಂಝಾರವರು ಸರ್ವ ದಿಕ್ಕುಗಳಿಂದಲೂ ಸಂಬಂಧ ಕಡಿದು ಅಪ್ಪಟ ಇಸ್ಲಾಮಿನ ಅನುಯಾಯಿಯಾದರು. ಜಟ್ಟಿಗಳಿಗೆ ತಮ್ಮಂತಹ ಜಟ್ಟಿಗಳೊಂದಿಗೆ ಎಷ್ಟು ಪ್ರೀತಿ ಮತ್ತು ಎಂತಹ ಸಂಬಂಧವಿರುತ್ತದೆಂದು ಎಲ್ಲರಿಗೂ ತಿಳಿದಿದೆ. ಆದರೆ ಹಮ್‌ಝಾರು ಅಂತಹ ಸಂಬಂಧ ಮತ್ತು ಸ್ನೇಹವನ್ನು ಮುರಿದು ಕೇವಲ ಅಲ್ಲಾಹನ ಪ್ರೀತಿಯ ದಾಸರಾಗಿ ಮಾರ್ಪಟ್ಟರು. ಅನಂತರ ವಿಹಾರ, ಬೇಟೆ, ಆಟ, ವಿನೋದ, ಮಲ್ಲಯುದ್ಧಗಳಲ್ಲಿ ಕಳೆಯುತ್ತಿದ್ದ ಅವರ ಬದುಕು ಸಂಪೂರ್ಣವಾಗಿ ಇಸ್ಲಾಮಿನ ಹಾದಿಯಲ್ಲಿ ಮೀಸಲಾಯಿತು. ಅದು ಹೇಗೆಂದು ನೋಡಿ.

ಪ್ರವಾದಿತ್ವದ 13ನೆಯ ವರ್ಷದಲ್ಲಿ ಎಲ್ಲಾ ಸಹಾಬಿಗಳೊಂದಿಗೆ ಅವರೂ ಮದೀನಾಕ್ಕೆ ವಲಸೆ ಹೋದರು. ಅಲ್ಲಿ ಅವರಿಗೆ ಅಲ್ಲಾಹನು ನೀಡಿರುವ ಶಕ್ತಿ - ಸಾಮರ್ಥ್ಯ ಮತ್ತು ಶೌರ್ಯ ಪರಾಕ್ರಮಗಳನ್ನು ಇಸ್ಲಾಮಿಗಾಗಿ ಮುಡಿಪಾಗಿಡಲು ಅತ್ಯುತ್ತಮ ಅವಕಾಶ ಲಭಿಸಿತು. ಪ್ರಪ್ರಥಮವಾಗಿ, ಮಕ್ಕಾದ ಸತ್ಯನಿಷೇಧಿಗಳು ವ್ಯಾಪಾರಿ ತಂಡಗಳನ್ನು ತಡೆಗಟ್ಟಲಿಕ್ಕಾಗಿ ಪ್ರವಾದಿ(ಸ) ರವಾನಿಸಿದ ಮೂವತ್ತು ಸದಸ್ಯರ ತಂಡದ ನಾಯಕತ್ವವನ್ನು ಅವರಿಗೆ ನೀಡಲಾಯಿತು. ಈ ರೀತಿ ಪ್ರಪ್ರಥಮ ಇಸ್ಲಾಮೀ ಧ್ವಜವು ಅವರಿಗೇ ಲಭಿಸಿತು. ಈ ಮೂವತ್ತರ ತಂಡ ಮುಂದೆ ಸಾಗುತ್ತಿದ್ದಾಗ ಹಠಾತ್ತನೆ ಅಬೂಜಹಲನ ತಂಡ ಎದುರಾಯಿತು. ಅದರಲ್ಲಿ 300 ಮಂದಿ ಇದ್ದರು. ಎರಡೂ ತಂಡಗಳ ಮಧ್ಯೆ ಸಂಘರ್ಷವೇರ್ಪಟ್ಟಿತು. ಹಮ್‌ಝಾರವರು ತನ್ನ 30 ಸಂಗಾತಿಗಳ ಜೊತೆಯಲ್ಲಿ ವೀರಾವೇಶದಿಂದ ಹೋರಾಡಿದರು. ಅವರನ್ನು ಕಂಡ ಮುಜದ್ದೀಬಿನ್ ಅಮ್ರ್‌ಬಿನ್ ಜುಹ್ನೀ

ಮಧ್ಯೆ ಪ್ರವೇಶಿಸಿ ಸಂಧಾನವೇರ್ಪಡಿಸಿದನು. ಎರಡೂ ತಂಡಗಳು ಯುದ್ಧವಿಲ್ಲದೆ ತಂತಮ್ಮ ಸ್ಥಾನಗಳಿಗೆ ಮರಳಿದವು. ಇದೇ ರೀತಿಯಲ್ಲಿ ಪ್ರವಾದಿವರ್ಯರು(ಸ) ಇನ್ನೂ ಕೆಲವು ಕಾರ್ಯಾಚರಣೆಗಳಿಗೆ ಅವರನ್ನು ಕೆಲವೇ ಮಂದಿ ಸಂಗಾತಿಗಳ ಜೊತೆ ರವಾನಿಸಿದ್ದರು. ಎಲ್ಲಾ ಸಂದರ್ಭಗಳಲ್ಲೂ ಅವರು ಯಶಸ್ವಿಯಾಗಿ ಕಾರ್ಯಾಚರಿಸಿ ಮರಳಿ ಬಂದರು.

ತರುವಾಯ ಬದ್ರ್ ಯುದ್ಧ ನಡೆಯಿತು. ಕುರೈಶರ ಅತಿ ಹೆಚ್ಚು ಅನುಭವಿ ಮತ್ತು ಪರಾಕ್ರಮಿಯಾಗಿದ್ದ ಉತ್ಬಾ ತನ್ನ ಸಹೋದರನೊಂದಿಗೆ ಮುಂದೆ ಬಂದ. ಇಸ್ಲಾಮಿನ ಸೈನ್ಯದಿಂದ ಕೆಲವು ಅನ್ಸಾರಿ ಯುವಕರು ಅವರನ್ನೆದುರಿಸಲು ಮುಂದೆ ಬಂದರು. ಆದರೆ ಉತ್ಬಾನಿಗೆ ತನ್ನ ಶಕ್ತಿ ಮತ್ತು ಪರಾಕ್ರಮದ ಮೇಲೆ ಬಹಳ ಗರ್ವ ಇತ್ತು. ತನಗಿಂತ ಕೆಳಗಿನ ಸ್ತರದ ಜನರೊಂದಿಗೆ ಹೋರಾಡುವುದು ತನಗೆ ಅವಮಾನವೆಂದು ಆತ ಭಾವಿಸಿದ್ದ. ಆದ್ದರಿಂದ ಪ್ರವಾದಿ ವರ್ಯರನ್ನು(ಸ) ಉದ್ದೇಶಿಸಿ, ಆತ, "ಓ ಮುಹಮ್ಮದ್! ನಾವು ನಪುಂಸಕರೊಂದಿಗೆ ಹೋರಾಡುವುದಿಲ್ಲ. ನಮ್ಮ ಸ್ಥಾನಮಾನದ ವ್ಯಕ್ತಿಗಳನ್ನು ಕಳಿಸು" ಎಂದು ಸ್ವರವೆತ್ತಿ ಹೇಳಿದ. ಇದನ್ನು ಕೇಳಿ ಪ್ರವಾದಿವರ್ಯರು(ಸ) ಹಂಝಾ, ಅಲೀ ಮತ್ತು ಉಬೈದಾರನ್ನು ಕಳಿಸಿದರು. ಹಂಝಾ ಉತ್ಬಾನನ್ನು ಕೆಣಕಿದರು ಮತ್ತು ಒಂದೇ ಏಟಿಗೆ ಅವನ ಕಥೆ ಮುಗಿಸಿದರು. ಇದರಿಂದ ಕುಪಿತನಾದ ಇನ್ನೋರ್ವ ಪರಾಕ್ರಮಿ ತಈಮ್ ಬಿನ್ ಅದೀ ಪ್ರತೀಕಾರ ತೀರಿಸಲು ಮುನ್ನುಗ್ಗಿ ಬಂದನು. ಅವನೂ ಹಂಝಾರ ಒಂದೇ ಏಟಿಗೆ ಕುಸಿದು ಬಿದ್ದನು. ಈ ದೃಶ್ಯವನ್ನು ಕಂಡ ವೈರಿಗಳು ಒಮ್ಮೆಲೇ ಮುನ್ನುಗ್ಗಿದರು. ತಮ್ಮ ಸಂಗಾತಿಗಳು ವೈರಿಗಳ ಮಧ್ಯೆ ಸಿಲುಕಿರುವುದನ್ನು ಕಂಡ ಇಸ್ಲಾಮೀ ಸೇನೆಯ ಯೋಧರು ಪ್ರವಾದಿವರ್ಯರ(ಸ) ಆದೇಶ ಪ್ರಕಾರ ಪ್ರಹಾರ ಆರಂಭಿಸಿದರು. ಘನಘೋರ ಯುದ್ಧ ನಡೆಯಿತು. ಹಂಝಾರ ಮುಂಡಾಸಿಗೆ ಉಷ್ಟ್ರಪಕ್ಷಿಯ ಗರಿ ಸಿಕ್ಕಿಸಲಾಗಿತ್ತು. ಆದ್ದರಿಂದ ಅವರು ಎತ್ತ ಸಾಗಿದರೂ ಅವರನ್ನು ಸ್ಪಷ್ಟವಾಗಿ ಕಾಣಬಹುದಾಗಿತ್ತು. ಎರಡೂ ಕೈಗಳಿಂದ ಖಡ್ಗ ಬೀಸುತ್ತಿದ್ದರು. ಎತ್ತ ಸಾಗಿದರೂ ವೈರಿಗಳನ್ನು ಸದೆ ಬಡಿಯುತ್ತಿದ್ದರು. ವೈರಿಗಳ ಅನೇಕ ಮಂದಿ ಪರಾಕ್ರಮಿಗಳು ಅವರ ಕೈಯಿಂದ ಹತರಾದರು. ಸ್ವಲ್ಪವೇ ಹೊತ್ತಿನಲ್ಲಿ ವೈರಿಗಳು ಪಲಾಯನ ಮಾಡತೊಡಗಿದರು. ಮುಸ್ಲಿಮರು ಅನೇಕರನ್ನು ಸೆರೆ ಹಿಡಿದರು. ಅವರಲ್ಲಿ ಮಕ್ಕಾದ ಅನೇಕ ದೊಡ್ಡ ದೊಡ್ಡ ಸರದಾರರಿದ್ದರು. ಅವರಲ್ಲಿ, ಈ ಗರಿ ಹೊತ್ತ ವ್ಯಕ್ತಿ ಯಾರೆಂದು ಕೆಲವು ಕೈದಿಗಳು ಕೇಳಿದಾಗ, "ಅದು ಹಂಝಾ, ಇಂದು ನಮಗೆ ಅತಿ ಹೆಚ್ಚು ಹಾನಿ ತಟ್ಟಿದ್ದು ಈ ವ್ಯಕ್ತಿಯಿಂದಲೇ" ಎಂದುತ್ತರಿಸಿದರು.

ಬದ್ರ್‌ನ ಸೋಲಿನಿಂದ ಮಕ್ಕಾದ ಸತ್ಯನಿಷೇಧಿಗಳಿಗೆ ಭಾರೀ ನಾಶ ನಷ್ಟವುಂಟಾಯಿತು. ಅವರ ಜೀವ - ಸೊತ್ತುಗಳಿಗೆ ಅಪಾರ ಹಾನಿಯುಂಟಾಯಿತು. ಈ ದುಃಖವನ್ನು ಅವರು ಮರೆಯಲಿಲ್ಲ. ಪ್ರತೀಕಾರದ ಆವೇಶದೊಂದಿಗೆ ಅವರು ಒಂದು ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಮದೀನಾದತ್ತ ಸಾಗಿದರು. ಪ್ರವಾದಿ(ಸ) ತಮ್ಮ ಕೆಲವು ಧೀರಶೂರ ಸಂಗಾತಿಗಳೊಂದಿಗೆ ಅವರನ್ನು ಉಹುದ್‌ನಲ್ಲಿ ತಡೆದರು. ವೈರಿಗಳ ಕಡೆಯಿಂದ ಸಬಾಲ್ ಎಂಬ ಜಗಜಟ್ಟಿ, "ನನ್ನೊಂದಿಗೆ ಹೋರಾಡಲು ಬನ್ನಿ" ಎಂದು ಮುಸ್ಲಿಮರಿಗೆ ಪಂಥಾಹ್ವಾನ ನೀಡಿದಾಗ ಹಂಝಾರವರು ತಲವಾರು

ಝಳಪಿಸುತ್ತಾ ರಣರಂಗಕ್ಕಿಳಿದರು. "ನೀನು ಅಲ್ಲಾಹ್ ಮತ್ತು ಪ್ರವಾದಿಯವರೊಂದಿಗೆ ಕಾದಾಡಲು ಬಂದಿರುವೆಯಾ" ಎನ್ನುತ್ತಾ ನೀಡಿದ ಒಂದೇ ಏಟಿಗೆ ಆತ ನೆಲಕ್ಕುರುಳಿ ಕೊನೆಯುಸಿರೆಳೆದನು.

ಅನಂತರ ಉಹುದ್‌ನಲ್ಲಿ ಘನಘೋರ ಯುದ್ಧ ನಡೆಯಿತು. ಈ ಹಿಂದೆ ಬದ್ರ್ ಯುದ್ಧದಲ್ಲಿ ಕುರೈಶರ ದೊಡ್ಡ ಸರದಾರರು ಹಂಝಾರ ಕೈಯಲ್ಲಿ ಹತರಾಗಿದ್ದರು. ಆದ್ದರಿಂದ ಕುರೈಶರು ಹಂಝಾರ ರಕ್ತ ಕುಡಿಯುವ ಅವಕಾಶ ಹುಡುಕುತ್ತಿದ್ದರು. ಅವರ ಸಾಲು ಗಟ್ಟಿ ಅವರ ಮೇಲೆ ಪದೇಪದೇ ಆಕ್ರಮಣ ನಡೆಸಿದರು. ಆದರೆ ಹಂಝಾರು ಅವರ ಪಂಕ್ತಿಗಳನ್ನೇ ಅಸ್ತವ್ಯಸ್ತಗೊಳಿಸುತ್ತಿದ್ದರು. ಅವರು ಏಕಾಂಗಿಯಾಗಿ ಹೋರಾಡಿ ಕುರೈಶರ ಮೂವತ್ತು ಮಂದಿ ಹೆಸರಾಂತ ವೈರಿಗಳನ್ನು ಹೊಡೆದುರುಳಿಸಿದರು.

ಬದ್ರ್ ಯುದ್ಧದಲ್ಲಿ ಹಂಝಾರು ತಈಮ್ ಬಿನ್ ಅದೀ ಎಂಬೋರ್ವನನ್ನು ವಧಿಸಿದ್ದರು. ಅದರಿಂದ ಕುಪಿತನಾಗಿದ್ದ ಅವನ ಸೋದರ ಪುತ್ರ ಜುಬೈರ್ ಬಿನ್ ಮುತ್‌ಇಮ್ ಅದರ ಪ್ರತೀಕಾರ ತೀರಿಸುವ ಅವಕಾಶಕ್ಕಾಗಿ ಕಾಯುತ್ತಿದ್ದನು. ಅದಕ್ಕಾಗಿ ಆತ ವಹ್‌ಶೀ ಎಂಬ ಗುಲಾಮನನ್ನು ಸಿದ್ಧಗೊಳಿಸಿದ್ದನು. ಹಮ್‌ಝಾರನ್ನು ವಧಿಸಿದರೆ ನಿನ್ನನ್ನು ಸ್ವತಂತ್ರ ಗೊಳಿಸುತ್ತೇನೆಂದೂ ಭಾರೀ ಬಹುಮಾನವನ್ನು ನೀಡುತ್ತೇನೆಂದೂ ಆಮಿಷವೊಡ್ಡಿದ್ದನು. ಅವನ ಹುರಿದುಂಬಿಸುವಿಕೆಯಿಂದ ವಹ್ಶೀ ಈ ಯುದ್ಧದಲ್ಲಿ ಒಂದು ಬಂಡೆಯ ಹಿಂದೆ ಹೊಂಚು ಹಾಕಿ ಕುಳಿತುಕೊಂಡನು. ಹಂಝಾರವರು ಕಾದಾಡುತ್ತಾ ಅಚಾನಕ್ಕಾಗಿ ಅಲ್ಲಿಗೆ ತಲುಪಿದರು. ಅವನು ತನ್ನ ವಿಶಿಷ್ಟವಾದ ಭರ್ಚಿಯನ್ನು ಅವರತ್ತ ಒಮ್ಮೆಲೆ ಎಸೆದು ಬಿಟ್ಟನು. ಆತನ ಗುರಿ ತಪ್ಪಲಿಲ್ಲ. ಹಂಝಾ ಕೆಳಗುರುಳಿದರು. ಅವರ ಪ್ರಾಣಪಕ್ಷಿ ಹಾರಿ ಹೋಯಿತು.

ಈ ಘಟನೆಯಿಂದ ಸತ್ಯನಿಷೇಧಿಗಳ ಸ್ತ್ರೀಪುರುಷರೆಲ್ಲರೂ ಸಂತೋಷದಿಂದ ಕುಣಿದಾಡಿದರು. ಅಬೂಸುಫ್ಯಾನರ ಪತ್ನಿ ಹಿಂದ್ ಬದ್ರ್‌ನಲ್ಲಿ ತನ್ನ ತಂದೆಯನ್ನು ವಧಿಸಿದ್ದಕ್ಕಾಗಿ ಪ್ರತೀಕಾರ ಭಾವನೆಯಿಂದ ಕುದಿಯುತ್ತಿದ್ದಳು. ಆಕೆ ನೇರವಾಗಿ ಹಂಝಾರ ಜಡದೇಹದ ಬಳಿ ಸಾಗಿ ಅವರ ಹೊಟ್ಟೆಯನ್ನು ಸೀಳಿದಳು. ಕರುಳನ್ನು ಹೊರತೆಗೆದು ಜಗಿದು ನುಂಗ ಬಯಸಿದ್ದಳು. ಆದರೆ ಹಾಗೆ ಮಾಡಲು ಆಕೆಗೆ ಸಾಧ್ಯವಾಗಲಿಲ್ಲ. ಅದನ್ನು ಹಾಗೆಯೇ ಉಗುಳಿ ಬಿಟ್ಟಳು. ತರುವಾಯ ಅವರ ಕಿವಿ, ಮೂಗನ್ನು ಕೊಯ್ದು ಅದನ್ನು ಆಭರಣದಂತೆ ಕೊರಳಿಗೆ ಧರಿಸಿದಳು. ವಿಷಯ ತಿಳಿದಾಗ ಪ್ರವಾದಿ(ಸ) ಜನರೊಂದಿಗೆ, ಆಕೆಯೇನಾದರೂ ಅದರಿಂದ ನುಂಗಿದ್ದಾಳೆಯೇ ಎಂದು ಕೇಳಿದರು. ಜನರು ಇಲ್ಲವೆಂದಾಗ ಹಂಝಾರ ಯಾವುದೇ ದೇಹಭಾಗವನ್ನು ಅಲ್ಲಾಹನು ನರಕಕ್ಕೆ ಹೋಗಲು ಬಿಡಲಾರನು ಎಂದರು.

ಪ್ರವಾದಿವರ್ಯರು(ಸ) ಅನಂತರ ಹಂಝಾರ ಮೃತದೇಹದ ಬಳಿಗೆ ಬಂದರು. ಹಿಂದ್‌ಳು ಕಿವಿ, ಮೂಗುಗಳನ್ನು ಕತ್ತರಿಸಿ ಅತ್ಯಂತ ವಿರೂಪಗೊಳಿಸಿ ಬಿಟ್ಟಿದ್ದಳು. ಪ್ರವಾದಿವರ್ಯರಿಗೆ(ಸ) ಅದನ್ನು ನೋಡಿ ದುಃಖ ಉಮ್ಮಳಿಸಿ ಬಂತು. ಗದ್ಗದಿತರಾಗಿ ಈ ರೀತಿ ಹೇಳಿದರು, "ನಿಮ್ಮ ಮೇಲೆ ಅಲ್ಲಾಹನ ಅನುಗ್ರಹಗಳಿವೆ. ಏಕೆಂದರೆ ನೀವು ಸಂಬಂಧಿಕರ ಬಗ್ಗೆ ಚಿಂತಿಸುತ್ತಿದ್ದೀರಿ. ಒಳಿತಿನ ಕಾರ್ಯಗಳಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದಿರಿ. ನನಗೆ ನಿಮ್ಮ ಸಹೋದರಿ ಸಫಿಯ್ಯರ

ಬಗ್ಗೆ ಚಿಂತೆಯಿಲ್ಲದಿರುತ್ತಿದ್ದರೆ ನಿಮ್ಮ ಶರೀರವನ್ನು ಪಕ್ಷಿಗಳು ತಿನ್ನಲೆಂದೂ ಕಿಯಾಮತ್‌ನ ದಿನದಂದು ನೀವು ಅವುಗಳ ಹೊಟ್ಟೆಯಿಂದಲೇ ಎಬ್ಬಿಸಲ್ಪಡು ವಂತಾಗಲೆಂದೂ ನಿಮ್ಮನ್ನು ಹಾಗೆಯೇ ಬಿಟ್ಟು ಬಿಡುತ್ತಿದ್ದೆ. ದೇವನಾಣೆ! ನಿಮ್ಮ ಪ್ರತೀಕಾರ ನನ್ನ ಮೇಲೆ ಕಡ್ಡಾಯವಾಯಿತು. ನಿಮ್ಮ ಬದಲಿಗೆ ನಾನು ಸತ್ಯನಿಷೇಧಿಗಳ 70 ಮಂದಿಯ ಕಿವಿ, ಮೂಗು ಕತ್ತರಿಸುವೆನು." ಆದರೆ ಅಲ್ಲಾಹನು ಈ ಅಸಂಬದ್ಧ ಪ್ರತೀಕಾರಕ್ಕೆ ಅನುಮತಿ ನೀಡಲಿಲ್ಲ. ಆದ್ದರಿಂದ ಸಹನೆ ವಹಿಸಿದರು.

ಹ.ಸಫಿಯ್ಯ(ರ) ಹಂಝಾರ ನೇರ ಸಹೋದರಿಯಾಗಿದ್ದರು. ಸಹೋದರನ ಮರಣ ವಾರ್ತೆ ಕೇಳಿ ಮೃತದೇಹದ ಹತ್ತಿರ ಬಂದರು. ಆದರೆ ಪ್ರವಾದಿವರ್ಯರು(ಸ) ಮೃತದೇಹವನ್ನು ನೋಡಲು ಬಿಡಲಿಲ್ಲ. ಸಾಂತ್ವನ ಹೇಳಿ ಮರಳಿ ಕಳಿಸಿದರು. ಅವರು ಹಿಂತೆರಳುವಾಗ ಪುತ್ರ ಝುಬೈರ್‌ರ ಕೈಯಲ್ಲಿ ಎರಡು ಚದ್ದರಗಳನ್ನು ಕೊಟ್ಟು ಅದನ್ನು ಹಂಝಾರ ಕಫನ್‌ಗಾಗಿ ಉಪಯೋಗಿಸುವಂತೆ ಆದೇಶಿಸಿದರು. ಆದರೆ ಬಳಿಯಲ್ಲೇ ಓರ್ವ ಅನ್ಸಾರಿಯ ಶವ ಬಿದ್ದಿರುವುದು ಕಂಡಿತು. ಆದ್ದರಿಂದ ಆ ಪೈಕಿ ಒಂದು ಚದ್ದರವನ್ನು ಅದರ ಅಂತ್ಯ ಸಂಸ್ಕಾರಕ್ಕಾಗಿ ನೀಡಲು ಹೇಳಿದರು. ಪ್ರವಾದಿ(ಸ) ಎಲ್ಲ ಹುತಾತ್ಮರ ಜನಾಝಾ ನಮಾಝನ್ನು ಪ್ರತ್ಯಪ್ರತ್ಯೇಕವಾಗಿ ನಿರ್ವಹಿಸಿದರು. ಈ ರೀತಿ ಎಪ್ಪತ್ತು ನಮಾಝ್‌ಗಳನ್ನು ನಿರ್ವಹಿಸಿದ ನಂತರ ಸೈಯದುಶ್ಶುಹದಾ (ಹುತಾತ್ಮರ ಸರದಾರ) ಹಂಝಾರ ಸಹಿತ ಎಲ್ಲರನ್ನೂ ಉಹುದ್‌ನ ಬಯಲಲ್ಲಿ ದಫನ ಮಾಡಲಾಯಿತು.

ಪ್ರವಾದಿಯವರು(ಸ) ಹಂಝಾರನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತಿದ್ದರೆಂಬುದನ್ನು ವಹ್‌ಶಿಯ ಘಟನೆಯಿಂದ ಅಂದಾಜಿಸಬಹುದು. ಮಕ್ಕಾ ವಿಜಯದ ಸಮಯದಲ್ಲಿ ಇಸ್ಲಾಮ್ ಸ್ವೀಕರಿಸಿ ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾದ ವಹ್‌ಶಿಯನ್ನು ಪ್ರವಾದಿ(ಸ) ನೀನು ಹಂಝಾರನ್ನು ಕೊಂದ ಅದೇ ವಹ್‌ಶಿಯೋ ಎಂದು ಕೇಳಿದರು. ಅವರು ಹೌದೆಂದಾಗ, ನನ್ನಿಂದ ನಿನ್ನ ಮುಖವನ್ನು ಮರೆಸುವೆಯಾ, ಏಕೆಂದರೆ ನಿನ್ನನ್ನು ನೋಡುವಾಗ ನನಗೆ ನನ್ನ ಪ್ರೀತಿಯ ಚಿಕ್ಕಪ್ಪ ನೆನಪಾಗುತ್ತಾರೆ ಎಂದು ಪ್ರವಾದಿ(ಸ) ಹೇಳಿದರು. ವಹ್‌ಶಿ ಕೂಡಲೇ ಅಲ್ಲಿಂದ ಎದ್ದು ಹೊರ ನಡೆದರು. ಅನಂತರ ಜೀವಮಾನವಿಡೀ ಪ್ರವಾದಿವರ್ಯರ(ಸ) ಮುಂದೆ ಬರಲಿಲ್ಲ.

ಹಂಝಾರವರು ಇಸ್ಲಾಮ್ ಸ್ವೀಕರಿಸಿದಂದಿನಿಂದ ತನ್ನ ಎಲ್ಲಾ ಶಕ್ತಿ - ಸಾಮರ್ಥ್ಯಗಳನ್ನು ಇಸ್ಲಾಮಿಗಾಗಿ ಧಾರೆಯೆರೆದರು. ತನ್ನ ಬಾಯಿಯಿಂದ ಯಾವ ಸತ್ಯದ ಸಾಕ್ಷ್ಯವನ್ನು ವಹಿಸಿದರೋ ಅದನ್ನು ತನ್ನ ಜೀವವನ್ನು ದೇವಮಾರ್ಗದಲ್ಲಿ ಅರ್ಪಿಸುವ ಮೂಲಕ ಪೂರ್ತಿಗೊಳಿಸಿದರು. ಹಮ್‌ಝಾರು ಅನೇಕ ವಿವಾಹಗಳನ್ನು ಮಾಡಿದ್ದರು. ಅನೇಕ ಮಕ್ಕಳೂ ಆಗಿದ್ದರು. ಆದರೆ ಉಮಾಮ ಎಂಬೋರ್ವ ಪುತ್ರಿಯ ಹೊರತು ಉಳಿದವರೆಲ್ಲರೂ ಬಾಲ್ಯದಲ್ಲಿಯೇ ತೀರಿ ಕೊಂಡಿದ್ದರು. ಹಿಜ್ರತ್ ಸಮಯದಲ್ಲಿ ಆಕೆ ಮಕ್ಕಾದಲ್ಲೇ ಉಳಿದಿದ್ದಳು. ಪ್ರವಾದಿ(ಸ) ಮಕ್ಕಾ ವಿಜಯದ ಬಳಿಕ ಮದೀನಾಕ್ಕೆ ಹಿಂತೆರಳುವಾಗ ಆಕೆ ಅಣ್ಣಾ, ಅಣ್ಣಾ ಎನ್ನುತ್ತಾ ಓಡಿ ಬಂದಳು. ಹ.ಅಲೀ ಆಕೆಯನ್ನು ಎತ್ತಿ ಕೊಂಡರು. ಈಕೆ ನನ್ನ ಚಿಕ್ಕಪ್ಪನ ಮಗಳು, ಆದ್ದರಿಂದ ಇವಳನ್ನು ನಾನು ಸಾಕುತ್ತೇನೆಂದರು. ಝೈದ್ ಬಿನ್ ಹಾರಿಸ್ ತನ್ನ ವಾದವನ್ನು ಮಂಡಿಸುತ್ತಾ, ನಾನು ಹಂಝಾರ ಸಹೋದರ ಹಾಗೂ ಉತ್ತರಾಧಿಕಾರಿ, ಆದ್ದರಿಂದ ಈಕೆಯನ್ನು ಸಾಕುವ ಹೊಣೆ

ನನ್ನದು ಎಂದು ಹೇಳಿದರು. ಅಷ್ಟರಲ್ಲಿ ಜಲ್‌ಫರ್ ತಯ್ಯಾರ್ ಎದ್ದರು. ಉಮಾಮ ನನ್ನ ಚಿಕ್ಕಪ್ಪನ ಪುತ್ರಿ, ಅಲ್ಲದೆ ಈಕೆಯ ಚಿಕ್ಕಮ್ಮ ನನ್ನ ವಿವಾಹ ಬಂಧನದಲ್ಲಿದ್ದಾಳೆ. ಆದ್ದರಿಂದ ಈಕೆ ನನಗೆ ಸಲ್ಲತಕ್ಕವಳು ಎಂದು ತನ್ನ ಹಕ್ಕು ಮಂಡಿಸಿದರು. ಪ್ರವಾದಿ(ಸ) ಜಲ್‌ಫರ್‌ರ ಪರವಾಗಿ ತೀರ್ಪು ನೀಡಿದರು. ಏಕೆಂದರೆ ಚಿಕ್ಕಮ್ಮ ತಾಯಿಗೆ ಸಮಾನಳಾಗಿರುತ್ತಾಳೆ. ಆಕೆ ಪ್ರೌಢೆಯಾದಾಗ ಆಕೆಯನ್ನು ವಿವಾಹವಾಗುವಂತೆ ಅಲೀಯವರು ಪ್ರವಾದಿವರ್ಯರನ್ನು(ಸ) ಕೇಳಿಕೊಂಡರು. ಆದರೆ ಪ್ರವಾದಿ(ಸ) ಈ ಬೇಡಿಕೆಯನ್ನು ನಿರಾಕರಿಸುತ್ತಾ, ಹಂಝಾ ನನ್ನ ಸ್ತನಪಾನ ಸಂಬಂಧಿ ಸೋದರ ಎಂದು ಹೇಳಿದರು.

❖

# ಹ.ಅಬ್ದುಲ್ಲಾ ಬಿನ್ ಮಸ್‌ವೂದ್(ರ)

ಪ್ರವಾದಿ ಮುಹಮ್ಮದ್‌ರವರ(ಸ) ಮೇಲೆ ವಿಶ್ವಾಸವಿರಿಸುವ ವ್ಯಕ್ತಿಗಳು ಹಿಂಸೆ - ದೌರ್ಜನ್ಯಗಳಿಗೆ ಗುರಿಯಾಗುತ್ತಿದ್ದಂತಹ ಕಾಲಘಟ್ಟದಲ್ಲಿ ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಇಸ್ಲಾಮ್ ಸ್ವೀಕರಿಸಿದರು. ಚಿಕ್ಕಂದಿನಲ್ಲಿ ಆಡು ಕುರಿಗಳನ್ನು ಮೇಯಿಸಿ, ಅದರಿಂದ ಬರುವ ಸಂಪಾದನೆಯಿಂದ ದಿನ ದೂಡುತ್ತಿದ್ದರು. ಒಂದು ದಿನ ಅವರು ಆಡುಗಳನ್ನು ಮೇಯಿಸುತ್ತಿದ್ದಾಗ, ಪ್ರವಾದಿ(ಸ), ಅಬೂಬಕರ್‌ರ(ರ) ಜೊತೆಯಲ್ಲಿ ಅಲ್ಲಿಂದ ಹಾದು ಹೋಗುತ್ತಿದ್ದರು. ತೀವ್ರ ಬಾಯಾರಿಕೆಯಾಗಿದ್ದುದರಿಂದ ಅಬೂಬಕರ್‌ರವರು ಅಬ್ದುಲ್ಲಾ ಬಿನ್ ಮಸ್‌ವೂದ್‌ರ ಬಳಿ ಹೋಗಿ, ಮಗನೇ! ತುಂಬಾ ಬಾಯಾರಿದೆ. ಸ್ವಲ್ಪ ಹಾಲು ಕೊಡುವೆಯಾ ಎಂದು ಕೇಳಿದರು. ಆಗ ಅವರು, ನನ್ನ ಬಳಿ ತುಂಬಾ ಆಡುಗಳಿವೆ. ಅವುಗಳ ಪೈಕಿ ಹಾಲು ಕೊಡುವವುಗಳೂ ಇವೆ. ಆದರೆ ಅವು ಯಾವುದೂ ನನ್ನದಲ್ಲ. ನನ್ನ ಯಜಮಾನರದ್ದು. ಅವರ ಅನುಮತಿಯಿಲ್ಲದೆ ನಾನು ಹಾಲು ಕೊಡಲಾರೆ. ಕೊಟ್ಟರೆ ಅದು ವಂಚನೆಯಾಗುವುದು ಎಂದುತ್ತರಿಸಿದರು.

ಪ್ರವಾದಿಯವರಿಗೆ(ಸ) ಅಬ್ದುಲ್ಲಾ ಬಿನ್‌ಮಸ್‌ವೂದ್‌ರ ಈ ಮಾತು ಬಹಳ ಹಿಡಿಸಿತು. "ಅಲ್ಲಾಹನು ಈ ಬಾಲಕನಿಗೆ ನೀಡಿರುವ ದೊಡ್ಡ ಸಂಪತ್ತಿದು" ಎಂದು ಪ್ರವಾದಿ(ಸ) ಗ್ರಹಿಸಿದರು. "ನಿನ್ನ ಬಳಿ ಹಾಲು ಕೊಡದ ಯಾವುದಾದರೂ ಆಡು ಇದೆಯಾ" ಎಂದು ಕೇಳಿದಾಗ ಅವರು "ಇದೆ"ಯೆಂದರು. ಹಾಗೆ ಒಂದು ಆಡನ್ನು ಹಿಡಿದು ತಂದರು. ಪ್ರವಾದಿ(ಸ) ಅದರ ಕೆಚ್ಚಲಿಗೆ ಕೈ ಹಾಕಿ ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಆಗಲೇ ಅದರ ಕೆಚ್ಚಲು ಹಾಲಿನಿಂದ ತುಂಬಿತು. ಅಬೂಬಕರ್‌ರವರು ಅದನ್ನು ಸ್ವಲ್ಪ ದೂರ ಒಯ್ದು ಹಾಲು ಕರೆದರು. ಮೂವರೂ ಹೊಟ್ಟೆ ತುಂಬಾ ಕುಡಿದರು. ತರುವಾಯ ಪ್ರವಾದಿಯವರು(ಸ) ಪುನಃ ಪ್ರಾರ್ಥಿಸಿದರು. ಆಗ ಕೆಚ್ಚಲು ಪೂರ್ವಸ್ಥಿತಿಗೆ ಬಂತು.

ಈ ಪವಾಡವು ಅಬ್ದುಲ್ಲಾ ಬಿನ್ ಮಸ್‌ವೂದ್‌ರ ಮೇಲೆ ಗಾಢ ಪ್ರಭಾವ ಬೀರಿತು. ಅವರು ಪ್ರವಾದಿವರ್ಯರೊಡನೆ, ತಾವು ಏನನ್ನು ಜನರಿಗೆ ಬೋಧಿಸುತ್ತಿರುವಿರೋ ಅದನ್ನು ನನಗೂ ಕಲಿಸಿರಿ. ನಾನು ತಮ್ಮನ್ನು ಅಲ್ಲಾಹನ ಪ್ರವಾದಿಯೆಂದು ಅಂಗೀಕರಿಸುತ್ತೇನೆಂದರು. ಪ್ರವಾದಿಯವರಿಗೆ(ಸ) ಬಹಳ ಸಂತೋಷವಾಯಿತು. "ನೀನು ಈಗಾಗಲೇ ಕಲಿತಿರುವೆ" ಎಂದು ಹೇಳಿದರು. ತರುವಾಯ ಅವರನ್ನು ತಮ್ಮ ಶಿಷ್ಯ ವೃಂದಕ್ಕೆ ಸೇರಿಸಿ ಅವರಿಗೆ ಕಲಿಸ ತೊಡಗಿದರು.

ಅವರು ಬಹಳ ಶ್ರಮಪಟ್ಟು ಕುರ್‌ಆನ್ ಕಲಿತರು. ಅಷ್ಟರವರೆಗೂ ಯಾರೂ ಕಂಠಪಾಠ ಮಾಡಿರದಂತಹ ಎಪ್ಪತ್ತು ಅಧ್ಯಾಯಗಳನ್ನು ಕಂಠಪಾಠ ಮಾಡಿದರು.

ಯುವ ಪ್ರಾಯವಾಗಿತ್ತು. ಮುಸ್ಲಿಮನಾದ ಬಳಿಕ ಸ್ಫೂರ್ತಿ ಹೆಚ್ಚಿತು. ಒಂದು ದಿನ ಸಂಗಾತಿಗಳ ಜೊತೆಯಲ್ಲಿ ಕುಳಿತಿದ್ದರು. ಅವರೆಲ್ಲ ಪರಸ್ಪರ ಹೀಗೆ ಮಾತಾಡುತ್ತಿದ್ದರು- "ಕುರೈಶರು ಈ ವರೆಗೂ ಉಚ್ಚಸ್ವರದಲ್ಲಿ ಕುರ್‌ಆನ್ ಪಠಿಸುವುದನ್ನು ಆಲಿಸಿಲ್ಲ. ಅವರಿಗೆ ಕುರ್‌ಆನ್ ಕೇಳಿಸಬೇಕಾಗಿದೆ. ಯಾರು ಕೇಳಿಸಬಲ್ಲರು." ಈ ಕೆಲಸಕ್ಕೆ ಯಾರೆಲ್ಲ ಕೈ ಹಾಕಿದ್ದರೋ ಅವರಿಗೆ ದುರ್ಗತಿ ಬಂದಿತ್ತೆಂದು ಅವರಿಗೆ ಚೆನ್ನಾಗಿ ತಿಳಿದಿತ್ತು. ಆ ಸಂದರ್ಭದಲ್ಲಿ ಅಬ್ದುಲ್ಲಾ ಬಿನ್ ಮಸ್‌ವೂದ್ ಎದ್ದು ನಿಂತರು. ಈ ಕಾರ್ಯವನ್ನು ನಾನು ಮಾಡಬಲ್ಲೆ ಎಂದರು. ಸಂಗಾತಿಗಳು ಹೇಳಿದರು- "ನೀನು ಬೇಡ. ಏಕೆಂದರೆ ನಿನಗೆ ಯಾರೂ ಇಲ್ಲ. ಒಬ್ಬಂಟಿಯಾಗಿರುವೆ. ಈ ಕಾರ್ಯವನ್ನು ವಹಿಸುವವರು ದೊಡ್ಡ ಮನೆತನದವನಾಗಿರಬೇಕು. ಕುರ್‌ಆನ್ ಓದುವುದನ್ನು ಆಲಿಸಿ ಕುರೈಶರು ಹೊಡೆಯಲು ಬಂದರೆ ಅವರನ್ನು ತಡೆಯುವವರಿರಬೇಕು. ಅಬ್ದುಲ್ಲಾ ಬಿನ್ ಮಸ್‌ವೂದ್ ಪುನಃ ಹೇಳಿದರು- "ನನಗೆ ಅನುಮತಿ ಕೊಡಿರಿ. ಅಲ್ಲಾಹನು ನನ್ನನ್ನು ರಕ್ಷಿಸುವನು. ನಾನು ಈ ಕಾರ್ಯ ಮಾಡಿಯೇ ಸಿದ್ಧ."

ಮಾರನೆಯ ದಿನ ಅಬ್ದುಲ್ಲಾ ಬಿನ್ ಮಸ್‌ವೂದ್ ಕಅಬಾದ ಬಳಿಗೆ ತೆರಳಿ ಜೋರಾಗಿ "ಅರ್ರಹ್ಮಾನ್" ಅಧ್ಯಾಯವನ್ನು ಪಠಿಸತೊಡಗಿದರು. ಇದನ್ನು ಕೇಳುತ್ತಲೇ ಕುಪಿತರಾದ ಕುರೈಶರು ನಾಲ್ಕೂ ಕಡೆಯಿಂದ ಬಂದು ಅವರನ್ನು ಚೆನ್ನಾಗಿ ಥಳಿಸಿದರು. ಕುರೈಶರ ಏಟಿನಿಂದ ಅವರು ನೆಲಕ್ಕುರುಳಿದರಾದರೂ ತಾನು ಎಷ್ಟಂಶ ಕುರ್‌ಆನನ್ನು ಕೇಳಿಸಬೇಕೆಂದು ಬಯಸಿದ್ದರೋ ಅಷ್ಟನ್ನು ಪಠಿಸದೆ ಸುಮ್ಮನಾಗಲಿಲ್ಲ. ಅವರ ಮುಖ ಊದಿಕೊಂಡಿತ್ತು. ಮೈಮೇಲೆ ಗಾಯಗಳಾಗಿದ್ದುವು. ಅವರು ತನ್ನ ಸಂಗಾತಿಗಳೆಡೆಗೆ ಮರಳಿದರು. ಅವರ ಅವಸ್ಥೆಯನ್ನು ಕಂಡು ಸಂಗಾತಿಗಳೆಲ್ಲರೂ ಅತ್ತುಬಿಟ್ಟರು. "ನಾವು ಇದಕ್ಕಾಗಿಯೇ ಅಲ್ಲವೆ ನಿನ್ನನ್ನು ತಡೆದದ್ದು" ಎಂದು ಹೇಳಿದಾಗ ಅವರು ಹೀಗೆ ಉತ್ತರಿಸಿದರು- "ದೇವನಾಣೆ! ಈ ವರೆಗೂ ನಾನು ದೇವಧಿಕ್ಕಾರಿಗಳನ್ನು ಬಹಳ ಪ್ರತಿಷ್ಠಿತರೆಂದು ಭಾವಿಸಿದ್ದೆ. ಆದರೆ ಇಂದು ನೋಡುವಾಗ ಅವರಷ್ಟು ದುರುಳರು ಬೇರಾರೂ ಇಲ್ಲವೆಂದು ತಿಳಿಯಿತು. ನೀವು ಅನುಮತಿ ನೀಡುವುದಾದರೆ ನಾಳೆಯೂ ನಾನು ಹೋಗಿ ಅವರನ್ನು ಅಪಮಾನಿಸುವೆನು." ಇನ್ನು ಸಾಕು. ಕೇಳಲಿಕ್ಕೇ ಸಿದ್ಧರಿಲ್ಲದವರಿಗೆ ನೀನು ಕೇಳಿಸಿ ನಿನ್ನ ಕರ್ತವ್ಯವನ್ನು ಪೂರೈಸಿದೆ ಎಂದು ಅವರ ಸಂಗಾತಿಗಳು ಹೇಳಿದರು.

ಮಕ್ಕಾದ ಉತ್ಸಾಹಿ ಯುವಕನೊಬ್ಬ ಇಸ್ಲಾಮ್ ಸ್ವೀಕರಿಸಿದ್ದಾನೆ ಎಂಬ ಸುದ್ದಿ ನಾಡಿನಾದ್ಯಂತ ಪಸರಿಸಿತು. ಇನ್ನೇನು? ಸತ್ಯನಿಷೇಧಿಗಳು ಅವರನ್ನು ಕಂಡಕಂಡಲ್ಲಿ ಹಿಂಸಿಸತೊಡಗಿದರು. ಪ್ರವಾದಿ(ಸ) ತಮ್ಮ ಸಂಗಾತಿಗಳನ್ನು ಇಥಿಯೋಪಿಯಾಕ್ಕೆ ವಲಸೆ ಹೋಗಲು ಆದೇಶಿಸಿದಾಗ ಅಬ್ದುಲ್ಲಾ ಬಿನ್ ಮಸ್‌ವೂದ್ ಕೂಡಾ ಎಲ್ಲರ ಜತೆ ಹೋದರು. ಅನಂತರ ಮದೀನಾಕ್ಕೆ ಹೋಗಲು ಆದೇಶಿಸಿದಾಗ ಅಲ್ಲಿಂದಲೇ ಮದೀನಾಕ್ಕೆ ಹೋದರು. ಅಲ್ಲಿ ಅವರು ಮುಆದ್ ಬಿನ್ ಜಬಲ್‌ರವರ(ರ) ಮನೆಯಲ್ಲಿ ಉಳಕೊಂಡರು. ಪ್ರವಾದಿ(ಸ) ಮದೀನಾಕ್ಕೆ ಬಂದಾಗ ಅವರಿಬ್ಬರನ್ನು ಸೋದರರನ್ನಾಗಿ ಮಾಡಿದರು. ಇಬ್ಬರೂ ಯುವಕರಾಗಿದ್ದುದರಿಂದ ಅವರಲ್ಲಿ ಗಾಢ ಸ್ನೇಹ ಸಂಬಂಧ

ಬೆಳೆಯಿತು. ಪ್ರವಾದಿ(ಸ) ಮಸ್ಜಿದುನ್ನಬವಿಯ ಹತ್ತಿರದಲ್ಲೇ ಸ್ವಲ್ಪ ಜಮೀನನ್ನು ಅವರಿಗೆ ಉಳಕೊಳ್ಳಲು ನೀಡಿದರು.

ಮುಸ್ಲಿಮರು ಹಿಜ್ರತ್ ಮಾಡಿ ಮದೀನಾಕ್ಕೆ ಬಂದಾಗ ಅತ್ತ ಮಕ್ಕಾದಲ್ಲಿ ಕುರೈಶರಿಗೆ ಭೀತಿ ಹುಟ್ಟಿತು. ಮುಸ್ಲಿಮರು ಮದೀನಾದಲ್ಲಿ ತಮ್ಮ ಜನಬಲವನ್ನು ಹೆಚ್ಚಿಸಿಕೊಂಡರೆ ಅನಂತರ ಅವರನ್ನು ದಮನಿಸುವುದು ಸಾಧ್ಯವಿಲ್ಲವೆಂದು ಅವರು ಭಾವಿಸಿದರು. ಆದ್ದರಿಂದಲೇ ಅವರು ಮದೀನಾದ ಮೇಲೆ ನಿರಂತರ ಆಕ್ರಮಣಗಳನ್ನು ನಡೆಸಿದರು. ಅನೇಕ ಯುದ್ಧಗಳು ನಡೆದುವು. ಆ ಯುದ್ಧಗಳಲ್ಲೆಲ್ಲಾ ಅಬ್ದುಲ್ಲಾ ಬಿನ್ ಮಸ್‌ವೂದ್ ವೀರಾವೇಶದಿಂದ ಹೋರಾಡಿದರು. ಇಸ್ಲಾಮಿಗಾಗಿ ತನ್ನ ಜೀವ-ಸೊತ್ತನ್ನು ಅರ್ಪಿಸಲು ಹಿಂಜರಿಯಲಿಲ್ಲ.

ಅಬ್ದುಲ್ಲಾ ಬಿನ್ ಮಸ್‌ವೂದ್ ಕೇವಲ ಓರ್ವ ಧೀರ ಪರಾಕ್ರಮಿ ಮಾತ್ರವಾಗಿರಲಿಲ್ಲ. ಅವರೋರ್ವ ಧೀಮಂತ ವಿದ್ವಾಂಸರೂ ಆಗಿದ್ದರು. ಸದಾ ಪ್ರವಾದಿವರ್ಯರ(ಸ) ಜೊತೆಗಿದ್ದು ಕುರ್‌ಆನಿನ ಅಗಾಧ ಜ್ಞಾನವನ್ನು ಕರಗತ ಮಾಡಿಕೊಂಡಿದ್ದರು. ಸ್ಥಾನಮಾನ ಮತ್ತು ಜ್ಞಾನದಲ್ಲಿ ಮೇರು ವ್ಯಕ್ತಿತ್ವವಾಗಿ ಮೆರೆದರು. ಖಿಲಾಫಾವು ರ್‍ರಾಶಿದಃ(ನಾಲ್ವರು ಖಲೀಫರು)ರ ಆಡಳಿತದಲ್ಲಿ ಬಹಳ ಕಾಲದ ವರೆಗೆ ಕಾಝಿ(ನ್ಯಾಯಾಧೀಶ)ಯ ಸ್ಥಾನ ವಹಿಸಿದರು. ದೇವಭಯವಿರಿಸಿಕೊಂಡೇ ತೀರ್ಪು ನೀಡುತ್ತಿದ್ದರು. ಎಷ್ಟೇ ದೊಡ್ಡ ಅಧಿಕಾರಿಯಾಗಿದ್ದರೂ ನ್ಯಾಯಪಾಲನೆಯ ವೇಳೆ ಕಿಂಚಿತ್ತೂ ರಿಯಾಯಿತಿ ತೋರುತ್ತಿರಲಿಲ್ಲ. ಹ.ಉಸ್ಮಾನ್‌ರ ಕಾಲದಲ್ಲಿ 60ನೆಯ ವರ್ಷ ಪ್ರಾಯದಲ್ಲಿ ಈ ಲೋಕಕ್ಕೆ ವಿದಾಯ ಕೋರಿದರು. ಕೊನೆಯ ಕ್ಷಣಗಳಲ್ಲಿ ಉಸ್ಮಾನ್‌ರೊಡನೆ ನಡೆಸಿದ ಸಂಭಾಷಣೆಯು ಪಾಠ ಬೋಧಕವಾಗಿದೆ.

ಉಸ್ಮಾನ್: ನಿಮ್ಮ ಕಾಯಿಲೆ ಯಾವುದು?

ಅಬ್ದುಲ್ಲಾ: ನನ್ನ ಪಾಪಗಳೇ ನನ್ನ ಕಾಯಿಲೆ.

ಉಸ್ಮಾನ್: ಈಗೇನು ಬಯಸುತ್ತೀರಿ.

ಅಬ್ದುಲ್ಲಾ: ದೇವ ಕಾರುಣ್ಯ

ಉಸ್ಮಾನ್: ವೈದ್ಯರನ್ನು ಕರೆಸಲೇ!

ಅಬ್ದುಲ್ಲಾ: ವೈದ್ಯರೇ ನನ್ನನ್ನು ರೋಗಿಯಾಗಿಸಿದರು.

ಉಸ್ಮಾನ್: ನಿಮಗಾಗಿ ವೇತನ ನಿಶ್ಚಯಿಸಲೇ?

ಅಬ್ದುಲ್ಲಾ: ನನಗೆ ಅದರ ಅಗತ್ಯವಿಲ್ಲ

ಉಸ್ಮಾನ್: ನಿಮ್ಮ ಹೆಣ್ಮಕ್ಕಳ ಪ್ರಯೋಜನಕ್ಕೆ ಬರಬಹುದು.

ಅಬ್ದುಲ್ಲಾ: ನಿಮಗೆ ನನ್ನ ಹೆಣ್ಮಕ್ಕಳ ಚಿಂತೆ ಬೇಡ. ಅವರು ಇತರರ ಆಶ್ರಿತರಾಗಲಾರರು. ಪ್ರತಿ ರಾತ್ರಿ "ಅಲ್ ವಾಕಿಅ" ಅಧ್ಯಾಯ ಪಠಿಸುವಂತೆ ಅವರಿಗೆ ಹೇಳಿದ್ದೇನೆ. ಏಕೆಂದರೆ ಪ್ರವಾದಿ(ಸ) ಹೇಳಿದ್ದಾರೆ, ಪ್ರತಿ ರಾತ್ರಿ "ಅಲ್‌ವಾಕಿಅ" ಅಧ್ಯಾಯವನ್ನು ಪಠಿಸುವವನು ಎಂದೂ ಪರಾವಲಂಬಿ ಮತ್ತು ಹೊಟ್ಟೆಗಿಲ್ಲದವನಾಗಲಾರ.

ಅವರ ಪಾದ ಪಥಗಳನ್ನನುಸರಿಸಿ ನಡೆಯುವಂತೆ ಅಲ್ಲಾಹನು ನಮ್ಮನ್ನು ಅನುಗ್ರಹಿಸಲಿ.

# ಸಈದ್ ಬಿನ್ ಆಮಿರ್(ರ)

ಸಈದ್ ಬಿನ್ ಆಮಿರ್ "ಸಾಬಿಕೂನಲ್ ಅವ್ವಲೂನ್" (ಮೊತ್ತ ಮೊದಲಿಗರು) ಆಗಿಲ್ಲದಿದ್ದರೂ ಇಸ್ಲಾಮ್ ಸ್ವೀಕರಿಸಿದ ನಂತರ ಅವರು ತೋರಿದ ದೇವಭಕ್ತಿಯು ನಮ್ಮ ಜೀವನದ ಅನೇಕ ಮಗ್ಗುಲುಗಳಿಗೆ ಮಾರ್ಗದರ್ಶನ ನೀಡುತ್ತದೆ. ಇಂದು ಇಸ್ಲಾಮೀ ಆಡಳಿತವೆಂಬ ಹೆಸರಿನಲ್ಲಿ ಅದರ ಯಾವುದಾದರೊಂದು ಹುದ್ದೆ ವಹಿಸಿಕೊಂಡಿರುವ ಸರಕಾರಿ ಅಧಿಕಾರಿಗಳಿಗೆ ಮತ್ತು ಪ್ರಜಾಸತ್ತೆಯ ಜತೆಗೆ ಮಾನವ ಸಮಾನತೆಯ ದುಂದುಭಿ ಬಾರಿಸುವ ಇಸ್ಲಾಮೇತರ ರಾಷ್ಟ್ರಗಳಿಗೆ ಅವರ ಜೀವನದಲ್ಲಿ ಉತ್ತಮ ಮಾರ್ಗದರ್ಶನ ಲಭಿಸುತ್ತದೆ.

ಸಈದ್ ಬಿನ್ ಆಮಿರ್ ಖೈಬರ್ ಯುದ್ಧಕ್ಕಿಂತ ಮುಂಚೆ ಇಸ್ಲಾಮ್ ಸ್ವೀಕರಿಸಿದರು. ಅದೇ ಸಮಯದಲ್ಲಿ ಹಿಜ್ರತ್ ಕೂಡಾ ಮಾಡಿ ಮದೀನಾಕ್ಕೆ ತೆರಳಿದರು. ಮನೆಮಾರು, ಪ್ರೀತಿಯ ತಾಯ್ನಾಡು ಎಲ್ಲಕ್ಕೂ ವಿದಾಯ ಕೋರಿದರು. ಮದೀನಾದಲ್ಲಿ ನಡೆದ ಎಲ್ಲ ಯುದ್ಧಗಳಲ್ಲೂ ಪ್ರವಾದಿವರ್ಯರ(ಸ) ಜೊತೆಯಲ್ಲಿ ಭಾಗವಹಿಸಿ ತನ್ನ ಶೌರ್ಯ ಪರಾಕ್ರಮಗಳನ್ನು ಮೆರೆದರು.

ದ್ವಿತೀಯ ಖಲೀಫಾ ಉಮರ್ ಫಾರೂಕ್‌ರ ಆಡಳಿತ ಕಾಲದಲ್ಲಿ ನಡೆದ ಯರ್ಮೂಕ್ ಯುದ್ಧದ ವೇಳೆ ಸೇನಾ ನಾಯಕ ಅಬೂಉಬೈದಾರು ಸಹಾಯಕ್ಕಾಗಿ ಇನ್ನಷ್ಟು ಸೈನಿಕರನ್ನು ಕಳಿಸಬೇಕೆಂದು ವಿನಂತಿಸಿದಾಗ, ಉಮರ್ ಫಾರೂಕ್‌ರು ಸಈದ್ ಬಿನ್ ಆಮಿರ್‌ರ ನೇತೃತ್ವದಲ್ಲಿ ಒಂದು ತುಕಡಿಯನ್ನು ರವಾನಿಸಿದರು. ಆ ಯುದ್ಧದಲ್ಲಿ ಅವರು ಭಾರೀ ಲಾಭ ಗಳಿಸಿಕೊಟ್ಟರು. ಹುಮ್ಸ್‌ನ ಆಡಳಿತಾಧಿಕಾರಿಯಾಗಿದ್ದ ಅಮಾರುಥ್ ಬಿನ್ ಗನಮ್ ತೀರಿಕೊಂಡಾಗ ಖಲೀಫರು ಸಈದ್‌ರನ್ನು ಆ ಹುದ್ದೆಗೆ ನೇಮಿಸಿದರು. ಆ ದಿನಗಳಲ್ಲಿ ಯಾರೋ ಒಬ್ಬರು, ಅವರಿಗೆ ಅಪಸ್ಮಾರ ಬಾಧಿಸುತ್ತದೆ ಎಂದು ಖಲೀಫರ ಕಾರ್ಯಾಲಯಕ್ಕೆ ಸುದ್ದಿ ಮುಟ್ಟಿಸಿದರು. ಈ ಬಗ್ಗೆ ತನಿಖೆ ನಡೆಸಲು ಖಲೀಫರು ಅವರನ್ನು ತಮ್ಮ ಬಳಿಗೆ ಕರೆಸಿದರು.

ಅವರು ಖಲೀಫರನ್ನು ಭೇಟಿಯಾಗಲು ಬರುವಾಗ ಅವರ ಕೈಯಲ್ಲೊಂದು ಊರುಗೋಲು ಮತ್ತು ಒಂದು ಲೋಟ ಮಾತ್ರ ಇತ್ತು. ಹುಮ್ಸ್‌ನ ಆಡಳಿತಾಧಿಕಾರಿಯ ಒಟ್ಟು ಆಸ್ತಿಯದು.

"ನಿಮ್ಮ ಬಳಿ ಇಷ್ಟೇ ಸಾಮಾನಿರುವುದೇ?" ಉಮರ್ ಪ್ರಶ್ನಿಸಿದರು.

"ಇದಕ್ಕಿಂತ ಹೆಚ್ಚಿನ ಅಗತ್ಯವೇನಾದರೂ ಇದೆಯೇ? ಲೋಟದಲ್ಲಿ ತಿನ್ನುತ್ತೇನೆ. ಊರುಗೋಲಿನಲ್ಲಿ ಬುತ್ತಿಯನ್ನು ಕಟ್ಟುತ್ತೇನೆ."

"ನಿಮಗೆ ಅಪಸ್ಮಾರ ರೋಗವಿದೆಯೆಂದು ಕೇಳಿದೆ. ಸರಿಯೇ?"

"ಇಲ್ಲ. ನನಗೆ ಯಾವ ರೋಗವೂ ಇಲ್ಲ."

"ಹಾಗಾದರೆ ಈ ಸುದ್ದಿ ನನಗೆ ಹೇಗೆ ಮುಟ್ಟಿತು."

ಸಈದ್ ಆಮಿರ್ ಹೀಗೆ ಉತ್ತರಿಸಿದರು- "ಅಮೀರುಲ್ ಮುಅ್‌ಮಿನೀನ್! ನಾನು ಮೂರ್ಛೆ ಹೋಗುತ್ತಿರುವುದೇನೋ ಸರಿ. ಆದರೆ ನನಗೆ ಅಪಸ್ಮಾರ ರೋಗವಿಲ್ಲ. ಮೂರ್ಛೆ ಹೋಗಲು ಕಾರಣವಿದೆ. ಹಬೀಬ್ ಬಿನ್ ಅದೀಯವರನ್ನು ಕುರೈಶರು ಹಿಂಸಿಸಿ, ಹಿಂಸಿಸಿ ಕೊಲ್ಲುತ್ತಿದ್ದ ಸಂದರ್ಭದಲ್ಲಿ ನಾನೂ ಅಲ್ಲಿದ್ದೆ. ಅವರು ಕುರೈಶರಿಗೆ ಹಿಡಿ ಶಾಪ ಹಾಕುತ್ತಿದ್ದರು. ನಾನೂ ಕುರೈಶಿಯಾಗಿದ್ದೇನೆ. ಆದ್ದರಿಂದ ಅವರ ಶಾಪ ನೆನಪಾದಾಗಲೆಲ್ಲ ನಾನು ಮೂರ್ಛೆ ಹೋಗುತ್ತೇನೆ."

ಸಈದ್‌ರ ಈ ಸ್ಪಷ್ಟೀಕರಣದಿಂದ ಖಲೀಫರಿಗೆ ಸಮಾಧಾನವಾಯಿತು. ಅವರು ಪುನಃ ಅಧಿಕಾರ ವಹಿಸುವಂತೆ ಅವರಿಗೆ ಆದೇಶಿಸಿದರು. ಆದರೂ ಸಈದ್ ನಿರಾಕರಿಸಿದರು. ಕೊನೆಗೆ ಖಲೀಫರ ಒತ್ತಾಯದ ಮೇರೆಗೆ ಪುನಃ ಹುಮ್ಸ್‌ನ ಅಧಿಕಾರ ವಹಿಸಿಕೊಂಡರು.

ಒಮ್ಮೆ ಉಮರ್ ಫಾರೂಕ್‌ರು ಹುಮ್ಸ್‌ನ ಬಡವರಿಗೆ ಉಪಜೀವನ ಮಾರ್ಗದ ವ್ಯವಸ್ಥೆ ಮಾಡಲಿಕ್ಕಾಗಿ ಅಲ್ಲಿಗೆ ಹೋದರು. ಅಲ್ಲಿನ ಬಡವರ ಯಾದಿ ತಯಾರಿಸಲು ಅವರು ತಮ್ಮ ಆಳುಗಳಿಗೆ ಆದೇಶಿಸಿದರು. ಯಾದಿ ಸಮರ್ಪಿಸಲ್ಪಟ್ಟಾಗ ಅದರಲ್ಲಿ ಸಈದ್ ಬಿನ್ ಆಮಿರ್‌ರ ಹೆಸರೂ ಇತ್ತು.

"ಈ ಸಈದ್ ಬಿನ್ ಆಮಿರ್ ಯಾರು!" ಖಲೀಫಾ ವಿಚಾರಿಸಿದರು.

"ಹುಮ್ಸ್‌ನ ನಮ್ಮ ಆಡಳಿತಾಧಿಕಾರಿ."

ಉಮರ್‌ರಿಗೆ ಆಶ್ಚರ್ಯವೋ ಆಶ್ಚರ್ಯ! "ನಿಮ್ಮ ಆಡಳಿತಾಧಿಕಾರಿ ಬಡವರೇ? ಅವರು ತನ್ನ ವೇತನವನ್ನು ಏನು ಮಾಡುತ್ತಾರೆ" -ಅವರು ಪ್ರಶ್ನಿಸಿದರು.

"ಅವರು ವೇತನವನ್ನು ಮುಟ್ಟುವುದೇ ಇಲ್ಲ. ಎಲ್ಲವನ್ನೂ ಹಾಗೆಯೇ ಬಡಬಗ್ಗರಲ್ಲಿ ಹಂಚಿ ಬಿಡುತ್ತಾರೆ" -ಆಳುಗಳು ಉತ್ತರಿಸಿದರು.

ಅವರ ಈ ನಿರಪೇಕ್ಷತೆಯನ್ನು ಕಂಡು ಉಮರ್ ಫಾರೂಕ್(ರ) ಅತ್ತು ಬಿಟ್ಟರು. ಆಗಲೇ ಅವರ ಅಗತ್ಯಗಳಿಗೆಂದು ಒಂದು ಸಾವಿರ ದೀನಾರ್‌ರ ಥೈಲಿಯನ್ನು ಕಳಿಸಿಕೊಟ್ಟರು. ಸಈದ್‌ರು ಈ ಥೈಲಿಯನ್ನು ನೋಡಿದ ಕೂಡಲೇ, "ಇನ್ನಾಲಿಲ್ಲಾಹಿ...." ಪಠಿಸಿದರು. ಪತ್ನಿಯು ಓಡಿ ಬಂದು, ಏನು, ಏನಾಯಿತು. ಖಲೀಫರಿಗೇನಾದರೂ ಅವಘಡ ಸಂಭವಿಸಿತೇ" ಎಂದು ಕೇಳಿದರು.

"ಅದಕ್ಕಿಂತಲೂ ದೊಡ್ಡ ಅವಘಡವಾಗಿದೆ."

"ಏನು? ಕಿಯಾಮತ್ ಬಂದು ಬಿಟ್ಟಿತೇ"

"ಅದಕ್ಕಿಂತಲೂ ದೊಡ್ಡ ಆಘಾತ."

"ಇರಲಿ. ವಿಷಯವೇನೆಂದು ತಿಳಿಸಿರಿ."

"ಸಂಪತ್ತು ಅಗ್ನಿ ಪರೀಕ್ಷೆಯ ರೂಪದಲ್ಲಿ ನಮ್ಮ ಮುಂದೆ ಬಂದು ಬಿಟ್ಟಿದೆ."

"ಹಾಗಾದರೆ ಅದನ್ನು ತಡೆಯಿರಿ" -ಪತ್ನಿ ಸಲಹೆ ನೀಡಿದರು.

ಅವರು ಈ ನಾಣ್ಯಗಳನ್ನೆಲ್ಲ ಒಂದು ಹರಿವಾಣದಲ್ಲಿ ಹಾಕಿಟ್ಟು, ರಾತ್ರಿಯಿಡೀ ನಮಾಝ್‌ನಲ್ಲಿ ತಲ್ಲೀನರಾದರು. ಬೆಳಗಾತ ಇಸ್ಲಾಮೀ ಸೇನೆಯು ಅಲ್ಲಿಂದ ಹಾದು ಹೋಗುವಾಗ ಸೈನ್ಯದ ಅಗತ್ಯಗಳಿಗಾಗಿ ಅವೆಲ್ಲವನ್ನೂ ಕೊಟ್ಟು ಬಿಟ್ಟರು.

ಇಂತಹ ಓರ್ವ ಆಡಳಿತಾಧಿಕಾರಿಯನ್ನು ಜನರು ಪ್ರೀತಿಸದಿರುವುದಾದರೂ ಹೇಗೆ? ಪ್ರಜೆಗಳೊಂದಿಗೆ ಅವರ ಸಂಬಂಧ ಮತ್ತು ಅವರಿಗೆ ತಮ್ಮ ಆಡಳಿತಾಧಿಕಾರಿಯೊಂದಿಗೆ ಹಾರ್ದಿಕ ಸಂಬಂಧದ ವಿಷಯ ತಿಳಿದಾಗ ಹ.ಉಮರ್‌ರು ಅವರೊಂದಿಗೆ ಕೇಳಿದರು- ಸಈದ್! ಈ ಪ್ರಜೆಗಳು ನಿಮ್ಮನ್ನು ಇಷ್ಟೊಂದು ಪ್ರೀತಿಸಲು ಕಾರಣವೇನು?

"ನಾನು ಅವರ ಮೇಲ್ನೋಟ ವಹಿಸುತ್ತೇನೆ ಮತ್ತು ಅವರೊಂದಿಗೆ ಅನುಕಂಪದಿಂದ ವರ್ತಿಸುತ್ತೇನೆ"- ಸಈದ್ ಉತ್ತರಿಸಿದರು.

ಖಲೀಫರಿಗೆ ಅವರ ಉತ್ತರದಿಂದ ಬಹಳ ಸಂತೃಪ್ತಿಯಾಯಿತು. ಅವರು 10 ಸಾವಿರ ದಿರ್ಹಮನ್ನು ಅವರಿಗೆ ಉಡುಗೊರೆಯಾಗಿ ನೀಡಿದರು. ಆದರೆ ಅವರು ಅದನ್ನು ನಿರಾಕರಿಸುತ್ತಾ, "ನನಗೆ ನನ್ನ ಕುದುರೆ ಮತ್ತು ಗುಲಾಮರಿಂದ ಬರುವ ಆದಾಯವೇ ಸಾಕು. ಸಮುದಾಯದ ಕೆಲಸಗಳನ್ನು ನಾನು ಅಲ್ಲಾಹನಿಗೋಸ್ಕರವೇ ಮಾಡಬೇಕೆಂದು ಬಯಸಿದ್ದೇನೆ" ಎಂದರು.

ಉಮರ್‌ರು ಅವರನ್ನು ಒತ್ತಾಯಪಡಿಸುತ್ತಾ ಹೀಗೆಂದರು- ಇದನ್ನು ಸ್ವೀಕರಿಸಿಕೊಳ್ಳಿರಿ. ಒಮ್ಮೆ ನಾನೂ ಪ್ರವಾದಿವರ್ಯರು(ಸ) ನನಗೆ ನೀಡಿದ ಹಣವನ್ನು ಮರಳಿಸಬಯಸಿದ್ದೆ. ಆಗ ಪ್ರವಾದಿವರ್ಯರು, ಯಾರಾದರೂ ಅಪೇಕ್ಷಿಸದೆಯೇ ಏನಾದರೂ ಕೊಟ್ಟರೆ ಸ್ವೀಕರಿಸಿಕೊಳ್ಳಿ, ಅದು ಅಲ್ಲಾಹನ ವತಿಯಿಂದ ಉಡುಗೊರೆ ಎಂದಿದ್ದರು."

ಈ ಎಲ್ಲ ಘಟನೆಗಳು ಸಈದ್ ಬಿನ್ ಆಮಿರ್ ವಯೋವೃದ್ಧರಾಗಿದ್ದ ಕಾಲದ್ದಾಗಿರಬಹುದೆಂದು ಯಾರಾದರೂ ಭಾವಿಸಿದರೆ ಅಚ್ಚರಿಯಿಲ್ಲ. ಆದರೆ ವಸ್ತುಸ್ಥಿತಿ ಹಾಗಲ್ಲ. ಅವರು ನಿಧನರಾಗುವಾಗ ಅವರ ಪ್ರಾಯ ಕೇವಲ ನಲ್ವತ್ತು ವರ್ಷಗಳಾಗಿತ್ತು.

❖

# ಹ.ಅಬ್ದುರ್ರಹ್ಮಾನ್ ಬಿನ್ ಔಫ್(ರ)

ಅಬ್ದುರ್ರಹ್ಮಾನ್ ಬಿನ್ ಔಫ್(ರ) ಪ್ರವಾದಿ ಮುಹಮ್ಮದ್‌ರ(ಸ) ಆಪ್ತ ಸಂಗಾತಿಗಳಲ್ಲೋರ್ವರಾಗಿದ್ದರು. ಅತ್ಯಂತ ಸಂಪನ್ನ ವ್ಯಕ್ತಿಯಾಗಿದ್ದ ಅವರ ಆರ್ಥಿಕ ಮೂಲ ವ್ಯಾಪಾರವಾಗಿತ್ತು. ಜೊತೆಗೆ ಬೇಸಾಯವೂ ಇತ್ತು. ವಿಶಾಲವಾದ ಹೊಲಗಳಲ್ಲಿ ಒಂದೊಂದು ಸಾಲಿನಲ್ಲಿ ತಲಾ ಇಪ್ಪತ್ತು ಒಂಟೆಗಳನ್ನು ನೀರಾವರಿಯ ಕೆಲಸಕ್ಕೆ ಹಚ್ಚಲಾಗಿತ್ತು. ಮದೀನಾಕ್ಕೆ ಬಂದಾಗ ಒಂದು ದೊಡ್ಡ ಜಮೀನನ್ನು ಪ್ರವಾದಿಯವರು(ಸ) ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ನೀಡಿದ್ದರು. ಈ ಮೂರೂ ಮೂಲಗಳಿಂದ ಭಾರೀ ವರಮಾನ ಬರುತ್ತಿತ್ತು. ಅವರಿಗೆ ಅಲ್ಲಾಹನು ಬಹಳ ಸಮೃದ್ಧಿಯನ್ನು ದಯಪಾಲಿಸಿದ್ದನು. ಒಂದು ಕಲ್ಲನ್ನೆತ್ತಿದರೂ ಅದರಡಿಯಲ್ಲಿ ನನಗೆ ಚಿನ್ನ ದೊರಕುತ್ತಿತ್ತೆಂದು ಅವರು ಹೇಳುತ್ತಿದ್ದರು.

ಅಬ್ದುರ್ರಹ್ಮಾನ್ ಬಿನ್ ಔಫ್‌ರ ಸಿರಿವಂತಿಕೆಗೆ ಸಾಕ್ಷಿಯಾಗಿ ಒಂದು ಘಟನೆಯನ್ನು ಉಲ್ಲೇಖಿಸುವುದು ಸೂಕ್ತವೆನಿಸೀತು. ಒಮ್ಮೆ ಮದೀನಾಕ್ಕೆ ಅವರ ವ್ಯಾಪಾರದ ಸರಕು ಬಂತು. ಅದರಲ್ಲಿ 700 ಒಂಟೆಗಳಲ್ಲಿ ಗೋಧಿ, ಹಿಟ್ಟು ಮತ್ತಿತರ ಆಹಾರ ಸಾಮಗ್ರಿಗಳಿದ್ದುವು. ಅವರಿಗೆ ಅವರ ಸಿರಿವಂತಿಕೆಯಿಂದಾಗಿ ಇಸ್ಲಾಮಿನಲ್ಲಿ ದೊಡ್ಡ ಸ್ಥಾನ ಲಭಿಸಿದುದಲ್ಲ. ಐಶ್ವರ್ಯವು ಇಸ್ಲಾಮಿನಲ್ಲಿ ದೊಡ್ಡಸ್ತಿಕೆಯ ಮಾನದಂಡವೂ ಅಲ್ಲ ಬದಲಾಗಿ "ನಿಮ್ಮಲ್ಲಿ ದೇವಭಯವುಳ್ಳವನೇ ಶ್ರೇಷ್ಠ" ಎಂಬ ಕುರ್‌ಆನ್ ಸೂಕ್ತವೇ ಮಾನದಂಡವಾಗಿದೆ. ಈ ಸರಕು ಮದೀನಾದಲ್ಲಿ ಬಂದಿಳಿದ ವಿಷಯ ಹ.ಆಯಿಶಾರಿಗೆ ತಿಳಿದಾಗ, ಸಿರಿ, ಸಂಪತ್ತು ಹೆಚ್ಚಾಗಿ ಮಾನವನ ಸ್ಥಾನಮಾನವನ್ನು ಕುಗ್ಗಿಸುತ್ತದೆ ಎಂಬರ್ಥ ಬರುವ ಒಂದು ಪ್ರವಾದಿ ವಚನವನ್ನು ಅವರು ಹೇಳಿದರು. ಅಬ್ದುರ್ರಹ್ಮಾನ್ ಬಿನ್ ಔಫ್ ದೊಡ್ಡ ಐಶ್ವರ್ಯವಂತರಾಗಿದ್ದರು. ಅವರಲ್ಲಿ ಅದು ಬಂಡವಾಳಶಾಹಿ ಮನೋಭಾವವನ್ನು ಉಂಟು ಮಾಡಿರಲಿಲ್ಲ. ಆಯಿಶಾರು ಹೇಳಿದ ಪ್ರವಾದಿವಚನದ ಸುದ್ದಿ ತಿಳಿದಾಗ ಅವರು ಆಯಿಶಾರ ಬಳಿಗೆ ಓಡೋಡಿ ಬಂದರು. ಆಯಿಶಾರನ್ನು ಸಾಕ್ಷಿಯಾಗಿರಿಸಿ ಹೀಗೆ ಘೋಷಿಸಿದರು. ನಾನು ಈ ಎಲ್ಲಾ ಸರಕುಗಳನ್ನು ಒಂಟೆಗಳ ಸಮೇತ ಅಲ್ಲಾಹನ ಮಾರ್ಗದಲ್ಲಿ ದಾನ ಮಾಡಿದ್ದೇನೆ.

ಅಬ್ದುರ್ರಹ್ಮಾನ್ ಬಿನ್ ಔಫ್‌ರ ಬದುಕಿನಲ್ಲಿ ಇದೊಂದೇ ಘಟನೆಯಲ್ಲ. ಅವರ ಇಡೀ ಜೀವನವೇ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದರಲ್ಲಿ ಕಳೆಯಿತು. ಅಗತ್ಯದ ಸಂದರ್ಭಗಳಲ್ಲೂ ಅಲ್ಲದ ವೇಳೆಯೂ ಅವರು ಮನಬಿಚ್ಚಿ ಖರ್ಚು ಮಾಡುತ್ತಿದ್ದರು. ಅತ್ತೌಬಾ ಅಧ್ಯಾಯ ಅವತೀರ್ಣಗೊಂಡು, ಸಹಾಬಿಗಳಿಗೆ ದಾನಧರ್ಮಗಳನ್ನು ಮಾಡುವಂತೆ ಪ್ರೇರಣೆ ನೀಡಲಾದಾಗ ಅಬ್ದುರ್ರಹ್ಮಾನ್ ಬಿನ್ ಔಫ್ ತನ್ನ ಅರ್ಧ ಸಂಪತ್ತನ್ನು ಧಾರೆಯೆರೆದರು. ಅದರಿಂದಲೂ ಸಮಾಧಾನವಾಗದಿದ್ದಾಗ ಪುನಃ 40 ಸಾವಿರ ದೀನಾರಗಳನ್ನು ನೀಡಿದರು. ಅನಂತರ ಜಿಹಾದ್‌ನ ಸಂದರ್ಭ ಬಂದಾಗ 500 ಕುದುರೆ ಮತ್ತು 500 ಒಂಟೆಗಳನ್ನು ಕೊಟ್ಟರು. ದಿನವೊಂದರ ಮೂವತ್ತು ಗುಲಾಮರನ್ನು ವಿಮೋಚನೆಗೊಳಿಸುವಂತಹ ದೊಡ್ಡ ಉದಾರಿಯಾಗಿದ್ದರು. ಒಮ್ಮೆ 40 ಸಾವಿರ ದೀನಾರ್‌ಗಳಿಗೆ ಒಂದು ಜಾಗವನ್ನು ಮಾರಿ ಆ ಎಲ್ಲ ಹಣವನ್ನು ದೇವ ಮಾರ್ಗದಲ್ಲಿ ಅರ್ಪಿಸಿದರು. ಇಷ್ಟೆಲ್ಲ ಸಿರಿ ಸಂಪತ್ತಿದ್ದೂ, ಇಷ್ಟು ದೊಡ್ಡ ಉದಾರಿಯಾಗಿದ್ದೂ ತನ್ನ ಈ ಸಿರಿ ಸಂಪತ್ತು ಪರಲೋಕದಲ್ಲಿ ತನ್ನ ಪಾಲಿಗೆ ನಷ್ಟದಾಯಕವಾದೀತೋ ಎಂದು ಭಯ ಪಡುತ್ತಿದ್ದರು. ಇದೇ ಭಯದಿಂದಾಗಿ ಒಮ್ಮೆ ಅವರು ಉಮ್ಮುಸಲಮರ(ರ) ಬಳಿಗೆ ಹೋಗಿ, ತಾಯಿ! ನನ್ನ ಸಂಪತ್ತಿನ ಆಧಿಕ್ಯವು ನನ್ನನ್ನು ನಿರ್ನಾಮ ಮಾಡೀತೋ ಎಂಬ ಭಯ ನನಗಾಗುತ್ತಿದೆ ಎಂದು ಹೇಳಿದರು. ಉಮ್ಮು ಸಲಮ ಹೀಗೆ ಉಪದೇಶಿಸಿದರು- "ಹೆಚ್ಚಿನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸಿರಿ."

ಅಬ್ದುರ್ರಹ್ಮಾನ್ ಬಿನ್ ಔಫ್‌ರಲ್ಲಿ ಅಮಿತವಾದ ದೇವಭಯವಿತ್ತು. ಎಂದಾದರೂ ಉತ್ತಮ ಆಹಾರವನ್ನು ಅವರಿಗೆ ನೀಡಲಾದಾಗ, ಮುಸ್ಲಿಮರು ಬಡತನದ ಬೇಗೆಯಲ್ಲಿ ದಿನ ದೂಡುತ್ತಿದ್ದ ಆ ದಿನಗಳನ್ನು ನೆನೆದು ಅತ್ತು ಬಿಡುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು- ಮುಸ್‌ಅಬ್ ನನಗಿಂತ ಉತ್ತಮ ವ್ಯಕ್ತಿಯಾಗಿದ್ದರು. ಅವರು ಹುತಾತ್ಮರಾದಾಗ ಅವರ ಮೃತದೇಹಕ್ಕೆ ಕಫನ್ ತೊಡಿಸಲು ಕೇವಲ ಒಂದು ಚದ್ದರವಿತ್ತು. ಅದು ಕೂಡಾ ತಲೆಯ ಭಾಗವನ್ನು ಮರೆಸಿದರೆ ಕಾಲಿನ ಭಾಗ ಹೊರ ಬರುತ್ತಿತ್ತು. ಕಾಲಿನ ಭಾಗ ಮುಚ್ಚಿದರೆ ತಲೆಯ ಭಾಗ ಕಾಣುತ್ತಿತ್ತು. ಕೊನೆಗೆ ಕಾಲಿಗೆ ಹುಲ್ಲು ಹೊದ್ದು ಅವರನ್ನು ದಫನ ಮಾಡಲಾಗಿತ್ತು. ಅದೇ ರೀತಿಯಲ್ಲಿ ಹುತಾತ್ಮರಾದ ಹಮ್‌ಝಾ(ರ) ಕೂಡಾ ನನಗಿಂತ ಎಷ್ಟೋ ಉತ್ತಮ ವ್ಯಕ್ತಿ. ಈಗಂತೂ ನಮಗೆ ಇಹಲೋಕದಲ್ಲಿ ಅಪಾರ ಸಂಪತ್ತು ನಮ್ಮ ಕೈಸೇರಿದೆ. ಆದರೆ ಇದೆಲ್ಲವೂ ಬಹುಶಃ ನಮ್ಮ ಪುಣ್ಯಗಳಿಗೆ ಇದೇ ಲೋಕದಲ್ಲಿ ಸಿಕ್ಕಿದ ಪ್ರತಿಫಲವೋ ಎಂದು ಭಯವಾಗುತ್ತದೆ" ಅನಂತರ ಊಟ ಮಾಡದೆ ಕೈ ತೊಳೆದುಕೊಂಡು ಚೆನ್ನಾಗಿ ಅಳುತ್ತಿದ್ದರು.

ದೇವಭಯ ಮತ್ತು ಪರಲೋಕ ಚಿಂತೆಯು ಅವರಲ್ಲಿ ಅತ್ಯುತ್ತಮ ಗುಣ ಸ್ವಭಾವಗಳನ್ನು ಸೃಷ್ಟಿಸಿತ್ತು. ಮನೆತನ ಮತ್ತು ವಂಶ ಹಿರಿಮೆಯನ್ನು ಅವರು ತುಚ್ಛವಾಗಿ ಭಾವಿಸುತ್ತಿದ್ದರು. 30ರ ತುಂಬು ಯೌವನದಲ್ಲಿ ಅವರು ಇಸ್ಲಾಮ್ ಸ್ವೀಕರಿಸಿದರು. ನಿಜ ನಾಮ ಅಬ್ದುಅಮ್ರ್ ಎಂದಾಗಿತ್ತು. ಇಸ್ಲಾಮಿನ ಪ್ರಕಾರ ಪ್ರತಿಯೊಬ್ಬ ಮಾನವನೂ ಅಲ್ಲಾಹನ ದಾಸನಾಗಿದ್ದಾನೆ, ಇತರ ಯಾರದೇ ದಾಸನಲ್ಲ. ಇತರರ ಸೃಷ್ಟಿಯಲ್ಲ. ಆದ್ದರಿಂದ ಪ್ರವಾದಿವರ್ಯರು(ಸ) ಅವರ ಹೆಸರನ್ನು

ಅಬ್ದುರ್ರಹ್ಮಾನ್ ಎಂದು ಬದಲಾಯಿಸಿದರು. ಮದೀನಾಕ್ಕೆ ಹಿಜ್ರತ್ ಮಾಡಬೇಕೆಂಬ ಆಜ್ಞೆಯಾದಾಗ ಮಕ್ಕಾದಲ್ಲಿದ್ದ ತನ್ನ ಮನೆಯವರ ಪ್ರೀತಿಯಾಗಲಿ, ತಾಯಿನಾಡ ಪ್ರೇಮವಾಗಲಿ ಅವರಿಗೆ ಅಡ್ಡಿಯಾಗಲಿಲ್ಲ. ಮದೀನಾಕ್ಕೆ ತಲುಪಿದಾಗ, ಪ್ರವಾದಿವರ್ಯರು(ಸ) ಮದೀನಾದ ಅತ್ಯಂತ ಸಂಪನ್ನ ಹಾಗೂ ದಾನಶೂರರಾಗಿದ್ದ ಸಅದ್ ಬಿನ್ ರಬೀಅ್‌ರನ್ನು ಅವರ ಸಹೋದರನಾಗಿ ಮಾಡಿದರು. ಅವರು ತನ್ನ ಮಹಾಜಿರ್(ಹಿಜ್ರತ್ ಮಾಡಿಬಂದ) ಸಹೋದರರನ್ನು ಮನೆಗೆ ಕರೆದುಕೊಂಡು ಹೋಗಿ, "ನಾನಿದೋ ನನ್ನ ಎಲ್ಲ ಸಂಪತ್ತಿನ ಅರ್ಧ ಭಾಗವನ್ನು ನಿಮಗೆ ನೀಡುತ್ತೇನೆ" ಎಂದರು.

ಸಾಮಾನ್ಯವಾಗಿ ಐಶ್ವರ್ಯವಂತರು ತುಂಬಾ ಹೇಡಿಗಳು, ಲೋಭಿಗಳು, ಲೋಕ ಪ್ರಿಯರು ಮತ್ತು ಸಂದರ್ಭ ಸಾಧಕರಾಗಿರುತ್ತಾರೆ. ಆದರೆ ಅಬ್ದುರ್ರಹ್ಮಾನ್ ಬಿನ್ ಔಫ್‌ರ ಮನಸ್ಸು ದೇವಭಯ ಮತ್ತು ಪರಲೋಕ ಚಿಂತೆಯಿಂದ ತುಂಬಿ ತುಳುಕುತ್ತಿತ್ತು. ಅದರಲ್ಲಿ ಯಾವುದೇ ಕಳಂಕ ಉಳಿದಿರಲಿಲ್ಲ. ಅಷ್ಟೊಂದು ಸ್ವಚ್ಛವಾಗಿತ್ತದು. ಜಿಹಾದ್‌ನಲ್ಲಿ ಜೀವನದ ಹಂಗು ತೊರೆದು ಹೋರಾಡುತ್ತಿದ್ದರು. ಎಲ್ಲ ಯುದ್ಧಗಳಲ್ಲೂ ಪ್ರವಾದಿವರ್ಯರ(ಸ) ಜೊತೆಗೂಡಿ ವೀರಾವೇಶದಿಂದ ಹೋರಾಡುತ್ತಿದ್ದರು. ಬದ್ರ್ ಯುದ್ಧದಲ್ಲಿ ಅಬೂಜಹಲನನ್ನು ವಧಿಸಲಿಕ್ಕಾಗಿ ಆ ಬಾಲಕರಿಗೆ ತೋರಿಸಿಕೊಟ್ಟವರು ಇವರೇ ಆಗಿದ್ದರು. ಉಹುದ್ ಯುದ್ಧದಲ್ಲಿ 20ಕ್ಕಿಂತಲೂ ಅಧಿಕ ಗಾಯಗಳಾಗಿದ್ದುವು. ಕಾಲಿನ ತೀವ್ರ ಗಾಯದಿಂದಾಗಿ, ಗುಣಮುಖವಾದ ಬಳಿಕವೂ ಊನವಾಗಿಯೇ ನಡೆಯುತ್ತಿದ್ದರು. ಹಿ.ಶ. 6ರಲ್ಲಿ ದೂಮತುಲ್ ಜಂದಲ್ ಕಾರ್ಯಾಚರಣೆಗೆ ಹೊರಡುವಾಗ ಪ್ರವಾದಿವರ್ಯರೇ(ಸ) ತಮ್ಮ ಕೈಯಾರೆ ಅವರ ತಲೆಗೆ ಪೇಟ ಕಟ್ಟಿದ್ದರು. ಅದರ ತುದಿಯನ್ನು ಹಿಂದೆ ಇಳಿ ಬಿಟ್ಟಿದ್ದರು. ಧ್ವಜ ಕೈಯಲ್ಲಿ ಕೊಟ್ಟು ಈ ರೀತಿ ಹೇಳಿದರು. ಅಲ್ಲಾಹನ ಮಾರ್ಗದಲ್ಲಿ ಹೋರಾಡಲು ಹೊರಡುತ್ತಿರುವಿರಿ. ದೇವಧಿಕ್ಕಾರಿಗಳು ಮತ್ತು ಪಾಪಿಗಳೊಂದಿಗೆ ಯುದ್ಧ ಮಾಡಿರಿ. ಆದರೆ ಯಾರನ್ನೂ ವಂಚಿಸದಿರಿ, ಮೋಸ ಮಾಡದಿರಿ. ಮಕ್ಕಳಿಗೆ ಹೊಡೆಯದಿರಿ. ಕೊನೆಯಲ್ಲಿ ದೂಮತುಲ್ ಜಂದಲ್‌ಗೆ ತಲಪಿ ಕಲ್ಬ್ ಗೋತ್ರದ ಜನರಿಗೆ ಇಸ್ಲಾಮಿನ ಸಂದೇಶ ನೀಡಿರಿ. ಅವರು ಇಸ್ಲಾಮ್ ಸ್ವೀಕರಿಸಿದರೆ ಅವರ ಆಡಳಿತಾಧಿಕಾರಿಯ ಮಗಳನ್ನು ವಿವಾಹವಾಗಿರಿ.

ಪ್ರವಾದಿಯವರ(ಸ) ಹೇಳಿಕೆಯ ಪ್ರಕಾರ, ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅಲ್ಲಿಗೆ ತಲಪಿ ಅತ್ಯುತ್ತಮ ರೀತಿಯಲ್ಲಿ ಸಂದೇಶ ಪ್ರಚಾರ ಕಾರ್ಯ ನಿರ್ವಹಿಸಿದರು. ಅದರ ಪರಿಣಾಮವಾಗಿ ಮೂರೇ ದಿವಸದಲ್ಲಿ ಅಲ್ಲಿನವರೆಲ್ಲರೂ ಇಸ್ಲಾಮ್ ಸ್ವೀಕರಿಸಿದರು. ಆದ್ದರಿಂದ ಅವರು ಅಲ್ಲಿನ ಗೋತ್ರದ ಸರದಾರನ ಪುತ್ರಿಯನ್ನು ವಿವಾಹವಾದರು.

ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ಅಲ್ಲಾಹನು ಅಪಾರ ಐಶ್ವರ್ಯ, ಔದಾರ್ಯ, ಶೌರ್ಯ, ಧೈರ್ಯಗಳಂತೆಯೇ ಅಪಾರ ಬುದ್ಧಿ ಮತ್ತೆಯನ್ನೂ ನೀಡಿದ್ದನು. ಇಸ್ಲಾಮೀ ಚಟುವಟಿಕೆಗಳ ವೇಳೆ ನೀಡುತ್ತಿದ್ದ ಸಲಹೆ-ಸೂಚನೆಗಳು ಅಪ್ರತಿಮವಾಗಿರುತ್ತಿತ್ತು. ಪ್ರವಾದಿವರ್ಯರ(ಸ) ನಿಧನದ ಬಳಿಕ ಖಿಲಾಫತ್‌ನ ಪ್ರಶ್ನೆ ಎದ್ದಾಗ ಅದನ್ನು ಬಗೆಹರಿಸುವುದರಲ್ಲಿ ಅವರೂ ಸೇರಿದ್ದರು. ಅಬೂಬಕರ್ ಸಿದ್ದೀಕರು(ರ) ಅವರನ್ನು ತನ್ನ ಪ್ರಾಮಾಣಿಕ ಸಲಹೆಗಾರನಾಗಿ ಮಾಡಿ ಅವರಿಂದ ಮಾರ್ಗದರ್ಶನ

ಪಡೆಯುತ್ತಿದ್ದರು. ದ್ವಿತೀಯ ಖಲೀಫರ ಆಯ್ಕೆಯ ಸಂದರ್ಭದಲ್ಲಿ ಅಬೂಬಕರ್‌ರಿಗೆ ಸಲಹೆ ನೀಡಿದ ಹಿರಿಯ ಸಹಾಬಿಗಳ ಪೈಕಿ ಅಬ್ದುರ್ರಹ್ಮಾನ್ ಬಿನ್ ಔಫ್ ಕೂಡಾ ಒಬ್ಬರಾಗಿದ್ದರು. ಖಲೀಫಾ ಉಮರ್‌ರ ಆಡಳಿತ ಕಾಲದಲ್ಲಿ ಆಡಳಿತ ನಿರ್ವಹಣೆಯ ಕುರಿತಂತೆ ರೂಪಿಸಿದ ಸಲಹಾ ಸಮಿತಿಯ ಸಮಿತಿಯಲ್ಲಿ ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನು ಒಬ್ಬ ಸದಸ್ಯರಾಗಿ ನೇಮಿಸಲಾಗಿತ್ತು. ಅವರ ಸಲಹೆಗಳು ಅತ್ಯಂತ ಪ್ರಾಮಾಣಿಕವಾಗಿರುತ್ತಿತ್ತು. ಹೆಚ್ಚಿನ ವೇಳೆಗಳಲ್ಲಿ ಅವರ ಬುದ್ಧಿವಂತಿಕೆಯಿಂದಲೇ ಘನ ಕಾರ್ಯಗಳನ್ನು ಸಾಧಿಸಲಾಗುತ್ತಿತ್ತು.

ಇರಾಕ್‌ನಲ್ಲಿ ಸೇನಾ ಕಾರ್ಯಾಚರಣೆ, ನಹಾವಂದ್‌ನ ಕಾರ್ಯಾಚರಣೆ, ಇರಾನ್ ವಿಜಯವೇ ಮೊದಲಾದ ಸಂದರ್ಭಗಳಲ್ಲಿ ಅವರು ಸೂಕ್ತವಾದ ಸಲಹೆಗಳನ್ನು ನೀಡಿದ್ದರು. ಸಹಾಬಿಗಳ ಒಮ್ಮತದ ಅಭಿಪ್ರಾಯಗಳೂ ಅವರ ಪರವಾಗಿತ್ತು. ಮೂರನೆಯ ಖಲೀಫರ ಆಯ್ಕೆಗೆ ಉಮರ್‌ರವರು ಇವರ ಹೆಸರನ್ನು ಸೂಚಿಸಿದ್ದರು. ಆದರೆ ಅವರು ತಮ್ಮನ್ನು ಅದರಿಂದ ದೂರವೇ ಇರಿಸಿದರು. ತರುವಾಯ ಅವರೇ ಉಸ್ಮಾನ್‌ರ ಹೆಸರನ್ನು ಸೂಚಿಸಿದಾಗ ಎಲ್ಲ ಸಹಾಬಿಗಳೂ ಒಕ್ಕೊರಲಿನಿಂದ ಅದನ್ನು ಅನುಮೋದಿಸಿದರು. ಒಟ್ಟಿನಲ್ಲಿ ಜೀವನದಾದ್ಯಂತ ಬಹಳ ಪ್ರಾಮಾಣಿಕತೆ ಮತ್ತು ತ್ಯಾಗ ಮನೋಭಾವದೊಂದಿಗೆ ಕೆಲಸ ಮಾಡಿದ ಕೀರ್ತಿ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ಸಲ್ಲುತ್ತದೆ.

75ನೆಯ ವಯಸ್ಸಿನಲ್ಲಿ ನಿಧನರಾದಾಗ ಅವರ ಚಾರಿತ್ರ್ಯದ ಕುರಿತು ಜನರು ಈ ರೀತಿ ಗುಣಗಾನ ಮಾಡಿದರು. "ಓ ಅಬ್ದುರ್ರಹ್ಮಾನ್ ಬಿನ್ ಔಫ್! ನೀವು ಈ ಲೋಕದ ಶುದ್ಧ ನೀರು ಕುಡಿದವರಾಗಿದ್ದೀರಿ ಮತ್ತು ಮಲೀನವಾದುದನ್ನು ತೊರೆದವರಾಗಿದ್ದೀರಿ." ಸಈದ್ ಬಿನ್ ಅಬೀ ವಕ್ಕಾಸ್‌ರವರು ಅತ್ಯಂತ ದುಃಖಿತರಾಗಿ, "ಈ ಮಹಾಪರ್ವತವೂ ಸರಿದು ಹೋಯಿತಲ್ಲ" ಎಂದು ಹೇಳಿದರು.

ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನು ಪ್ರವಾದಿ(ಸ) ಕೂಡಾ ತುಂಬಾ ಗೌರವದಿಂದ ಕಾಣುತ್ತಿದ್ದರು. ಒಮ್ಮೆ ಸೇನಾಪತಿಯಾಗಿದ್ದ ಖಾಲೀದ್ ಬಿನ್ ವಲೀದ್‌ರಿಗೆ ಅವರೊಂದಿಗೆ ಜಗಳವಾಯಿತು. ಆಗ ಪ್ರವಾದಿವರ್ಯರು(ಸ) ಖಾಲಿದ್‌ರನ್ನುದ್ದೇಶಿಸಿ ಹೀಗೆಂದರು. "ಖಾಲಿದ್! ನನ್ನ ಸಹಾಬಿಯನ್ನು ಬಿಟ್ಟು ಬಿಡಿ. ನೀವು ದೇವಮಾರ್ಗದಲ್ಲಿ ಉಹುದ್ ಬೆಟ್ಟದಷ್ಟು ಚಿನ್ನ ವ್ಯಯಿಸಿದರೂ ಅವರಿಗೆ ಸಮಾನವಾಗಲಾರಿರಿ."

ಜ್ಞಾನ, ಸತ್ಯಸಂಧತೆ ಮತ್ತು ದೇವಭಯ ಅಪ್ರತಿಮವಾಗಿತ್ತು. ದೊಡ್ಡ ದೊಡ್ಡ ಕರ್ಮಶಾಸ್ತ್ರ ಸಂಬಂಧಿ ವಿಷಯಗಳಲ್ಲಿ ಇಸ್ಲಾಮಿನ ಸ್ಪಷ್ಟವಾದ ನಿಲುವನ್ನು ಪ್ರಸ್ತುತಪಡಿಸುತ್ತಿದ್ದರು. ಇದು ಇಸ್ಲಾಮಿನ ಸ್ಫೂರ್ತಿಗೆ ಅನುಗುಣವಾಗಿರುತ್ತಿತ್ತು. ವಾರೀಸು ಸೊತ್ತು ವಿತರಣೆ, ದಿಮ್ಮಿಗಳೊಂದಿಗೆ ವರ್ತನೆ ಇತ್ಯಾದಿ ವಿಷಯಗಳಲ್ಲಿ ಇವರ ಅಭಿಪ್ರಾಯವನ್ನು ಎಲ್ಲ ಸಹಾಬಿಗಳೂ ಒಪ್ಪಿಕೊಂಡಿದ್ದರು. ಹ.ಉಸ್ಮಾನ್‌ರ ಖಿಲಾಫತ್‌ನ ಕಾಲದಲ್ಲಿ ಝುಬೈರ್‌ರು ಅಬ್ದುರ್ರಹ್ಮಾನ್ ಬಿನ್ ಔಫ್‌ರ ವಿರುದ್ಧ ದಾವೆ ಹೂಡಿದಾಗ ಖಲೀಫಾರು ಅದರ ತೀರ್ಪುಗಾರನಾಗಿ ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನೇ ಮಾಡಿದರು. ಪ್ರವಾದಿಯವರ(ಸ) ವಿಯೋಗಾನಂತರ ಅವರ ಪಾವನ ಪತ್ನಿಯರಾದ ಸತ್ಯವಿಶ್ವಾಸಿಗಳ

ಮಾತೆಯರ ಮೇಲ್ನೋಟದ ಹೊಣೆಗಾರಿಕೆ ಅಬ್ದುರ್ರಹ್ಮಾನ್ ಬಿನ್ ಔಫ್‌ರ ಮೇಲೆ ಬಂತು. ಇದರಿಂದ ಸಹಾಬಿಗಳ ಪೈಕಿ ಅವರ ಸ್ಥಾನಮಾನವೇನೆಂದು ಗ್ರಹಿಸಬಹುದು. ಅಷ್ಟೇ ಅಲ್ಲ ಅವರ ಸ್ಥಾನಮಾನವನ್ನು ಪ್ರವಾದಿವರ್ಯರು(ಸ) ಅವರು ತಮ್ಮ ಜೀವನ ಕಾಲದಲ್ಲಿಯೇ ಸ್ವರ್ಗದ ಸುವಾರ್ತೆ ನೀಡಿದುದರಿಂದ ಇನ್ನೂ ಹೆಚ್ಚಾಗುತ್ತದೆ. ಇದು ಆಗದಿರಲು ಹೇಗೆ ಸಾಧ್ಯ? ಅಲ್ಲಾಹನು ನೀಡಿದ್ದ ಪ್ರತಿಭೆಗಳನ್ನು ಅವನ ಮಾರ್ಗದಲ್ಲೇ ವ್ಯಯಿಸಿದರು. ಅವರಿಗೆ ಅಲ್ಲಾಹನು ಜ್ಞಾನ, ಜಾಣ್ಮೆ, ಐಶ್ವರ್ಯ ನೀಡಿದ್ದರೆ ಅದೆಲ್ಲವನ್ನೂ ಅಲ್ಲಾಹನ ಧರ್ಮದ ಉತ್ತುಂಗತೆಗಾಗಿ ಅರ್ಪಿಸಿದರು. ಅವರಿಗೆ ಸ್ವಾಭಿಮಾನವನ್ನು ನೀಡಿದ್ದರೆ, ಅದಕ್ಕಿಂತಲೂ ಹೆಚ್ಚಿನ ತ್ಯಾಗ ಬಲಿದಾನಗಳನ್ನು ನೀಡಿದರು. ಅತ್ಯಂತ ಐಶ್ವರ್ಯವಂತನಾಗಿದ್ದರೂ ತನ್ನ ಪಾಲಿಗೆ ಸಾದಾ ಆಹಾರವನ್ನೇ ಇಷ್ಟಪಟ್ಟರು.

❖

# ಸಈದ್ ಬಿನ್ ಝೈದ್(ರ)

ಇಸ್ಲಾಮಿನ ಆರಂಭ ಕಾಲದಲ್ಲಿ ಅದನ್ನು ಸ್ವೀಕರಿಸಿದ ಭಾಗ್ಯಶಾಲಿಗಳಲ್ಲಿ ಸಈದ್ ಬಿನ್ ಝೈದ್ ಒಬ್ಬರಾಗಿದ್ದಾರೆ. ಅವರ ತಂದೆ ಝೈದ್ ಮಕ್ಕಾದಲ್ಲಿ ಇಸ್ಲಾಮಿನ ಕರೆ ಮೊಳಗುವುದಕ್ಕಿಂತ ಮುಂಚೆಯೇ ಶಿರ್ಕ್(ಬಹುದೇವತ್ವ) ಮತ್ತು ಕಂದಾಚಾರಗಳ ಬಗ್ಗೆ ತಿರಸ್ಕಾರ ಹೊಂದಿದವರಾಗಿದ್ದರು. ಅವರು ತುಂಬಾ ಧರ್ಮಭೀರುವಾಗಿದ್ದರು. ಯಾರಾದರೂ ಮೂರ್ತಿಗಳಿಗೆ ಅರ್ಪಿಸಿದ ನೈವೇದ್ಯಗಳನ್ನು, ಮಾಂಸವನ್ನು ನೀಡಿದರೆ, ನಿಮ್ಮ ಮೂರ್ತಿಗಳಿಗೆ ಅರ್ಪಿಸಿದ ಹರಕೆಯ ಮಾಂಸವನ್ನು ನಾನು ತಿನ್ನುವುದಿಲ್ಲ ಎಂದು ಮುಲಾಜಿಲ್ಲದೆ ಹೇಳಿ ಬಿಡುತ್ತಿದ್ದರು. ಆದರೆ ಒಂದು ಸಮಸ್ಯೆ ಸದಾ ಕಾಡುತ್ತಿತ್ತು. ಶಿರ್ಕನ್ನಂತೂ ತ್ಯಜಿಸಿ ಆಗಿದೆ. ಇನ್ನೂ ತೌಹೀದ್(ಏಕದೇವತ್ವ)ನ ಧರ್ಮ ಎಲ್ಲಿ ಸಿಗಬಹುದೆಂದು ಹುಡುಕಾಡುತ್ತಿದ್ದರು. ತೌಹೀದ್‌ನ ಅನ್ವೇಷಣೆಯಲ್ಲಿ ಅವರು ದೂರದೂರದ ದೇಶಗಳಿಗೆ ಪ್ರಮಾಣ ಬೆಳೆಸಿದರು. ಅನೇಕ ಯಹೂದಿ ವಿದ್ವಾಂಸರನ್ನು ಭೇಟಿಯಾಗಿ ತನ್ನ ಮನದಿಂಗಿತವನ್ನು ಅವರ ಮುಂದಿಟ್ಟರು. ಅಪ್ಪಟ ತೌಹೀದ್ ದೀನೆ ಹನೀಫ್(ಶಿರ್ಕ್‌ನ ಕಲಬೆರಕೆಯಿಲ್ಲದ ಶುದ್ಧ ಧರ್ಮ)ನಲ್ಲಿ ಸಿಗುವುದೆಂದು ಆ ವಿದ್ವಾಂಸರು ತಿಳಿಸಿದರು. ಹಾಗೆಂದರೇನೆಂದು ಅವರು ಪ್ರಶ್ನಿಸಿದರು. ಅದು ಇಬ್ರಾಹೀಮರ(ಅ) ಧರ್ಮವೆಂದು ಅವರು ಉತ್ತರಿಸಿದರು. ಅದಕ್ಕಿಂತ ಹೆಚ್ಚಿನ ಉತ್ತರ ಅವರ ಬಳಿ ಇರಲಿಲ್ಲ. ಅವರು ಇಬ್ರಾಹೀಮರ ಧರ್ಮದ ಹೆಸರು ಕೇಳಿ ಅದರ ಆಸಕ್ತಿಯೊಂದಿಗೆ ಮರಳಿ ಮಕ್ಕಾಕ್ಕೆ ಬಂದರು. ಅವರು ಕಅಬಾ ಭವನದ ಗೋಡೆಗೊರಗಿ ನಿಂತು, "ಖುರೈಶರೇ, ದೇವನಾಣೆ! ನನ್ನ ಹೊರತು ನಿಮ್ಮಲ್ಲಿ ಯಾರೂ ಇಬ್ರಾಹೀಮರ ಧರ್ಮದಲ್ಲಿಲ್ಲ" ಎಂದು ಹೇಳುತ್ತಿದ್ದರೆಂದು ಜನರಾಡಿಕೊಳ್ಳುತ್ತಿದ್ದರು.

ಆದರೆ ವಯೋವೃದ್ಧರಾದ ಝೈದ್ ದೀನೆ ಹನೀಫರನ್ನು ಅದರ ಪೂರ್ಣ ಸ್ವರೂಪದಲ್ಲಿ ಕಾಣುವ ಆಸೆ ಹೊತ್ತುಕೊಂಡೇ ಈ ಲೋಕದಿಂದ ನಿರ್ಗಮಿಸಿದರು. ಪ್ರವಾದಿ ಮುಹಮ್ಮದ್(ಸ) ಮಕ್ಕಾದಲ್ಲಿ ಇಬ್ರಾಹೀಮರ(ಇಸ್ಲಾಮ್) ಧರ್ಮವನ್ನು ಅದರ ಪೂರ್ಣ ರೂಪದಲ್ಲಿ ಜನರ ಮುಂದಿಟ್ಟಾಗ ಝೈದ್‌ರ ಭಾಗ್ಯಶಾಲಿ ಪುತ್ರ ಸಈದ್ ಅದನ್ನು ಕೂಡಲೇ ಅಪ್ಪಿಕೊಂಡರು. ಏಕೆಂದರೆ ತೌಹೀದ್ ಅವರಿಗೆ ಅಪರಿಚಿತವಾಗಿರಲಿಲ್ಲ. ಅವರ ಪ್ರಿಯಪತ್ನಿ ಕೂಡಾ ಪತಿಯನ್ನು ಅನುಸರಿಸಿ ಇಸ್ಲಾಮ್ ಸ್ವೀಕರಿಸಿದರು. ಅದು, ಇಸ್ಲಾಮ್ ಸ್ವೀಕರಿಸುವವರನ್ನು ಮಕ್ಕಾದ ಬಹುದೇವಾರಾಧಕರು

ಯಾವ ರೀತಿಯಿಂದಲೂ ಸಹಿಸಲು ಸಿದ್ಧರಿಲ್ಲದ ಕಾಲವಾಗಿತ್ತು. ಒಂದು ಮನೆಯ ಯಾರಾದರೂ ಇಸ್ಲಾಮ್ ಸ್ವೀಕರಿಸಿದರೆ ಅವನ ಮನೆಯವರು ತಮ್ಮ ಮಟ್ಟದವರ ಮುಂದೆ ತಮಗೆ ಅವಮಾನವಾಯಿತೆಂದು ಭಾವಿಸಿ ಅವನ ಮೇಲೆ ದೌರ್ಜನ್ಯವೆಸಗುತ್ತಿದ್ದರು. ಈ ದೈಹಿಕ ಪೀಡನೆ ನೀಡುವವರು ಬೇರೆ ಯಾರೂ ಆಗಿರುತ್ತಿರಲಿಲ್ಲ. ಅವನದೇ ಕುಟುಂಬ ದವರಾಗಿರುತ್ತಿದ್ದರು. ವಿಶೇಷವಾಗಿ ತಂದೆ, ಸಹೋದರ ಅಥವಾ ಇತರ ಸಂಬಂಧಿಕರು.

ಸಈದ್ ಬಿನ್ ಝ್ಯೈದ್‌ರ ಪತ್ನಿ ಫಾತಿಮಾ ಖತ್ತಾಬ್‌ರ ಪುತ್ರಿ ಮತ್ತು ಇಸ್ಲಾಮಿನ ದ್ವಿತೀಯ ಖಲೀಫ ಉಮರ್‌ರ ಸಹೋದರಿಯಾಗಿದ್ದರು. ಅವರಿಗೆ ಪತಿಯ ಉಪದೇಶ ಪ್ರೇರಣೆಗಳಿಂದ ಸತ್ಯವಿಶ್ವಾಸ ಸ್ವೀಕರಿಸುವ ಸೌಭಾಗ್ಯ ದೊರೆಯಿತು. ಆದರೆ ಉಮರ್‌ರಿಗೆ ತನ್ನ ಸಹೋದರಿಯ ಮೂಲಕ ಮುಸ್ಲಿಮ್ ಆಗಬೇಕಾಗಿತ್ತು. ಅದೊಂದು ಅಪೂರ್ವ ಪಾಠಬೋಧಕ ಘಟನೆ.

ಮಕ್ಕಾದ ಸತ್ಯನಿಷೇಧಿಗಳು ಪ್ರವಾದಿವರ್ಯರ(ಸ) ಕಥೆ ಮುಗಿಸಲಿಕ್ಕಾಗಿ ಉಮರ್‌ರನ್ನು ಸಿದ್ಧಪಡಿಸಿದರು. ಅವರು ಪ್ರವಾದಿವರ್ಯರನ್ನು(ಸ) ಹುಡುಕುತ್ತಾ ಖಡ್ಗ ಹಿಡಿದು ನಡೆದರು. ದಾರಿಮಧ್ಯೆ ಓರ್ವ ಆಪ್ತ ಮಿತ್ರ ಕೇಳಿದರು- "ಉಮರ್! ಎಲ್ಲಿಗೆ ಈ ನಡಿಗೆ!"

"ಮುಹಮ್ಮದ್‌ನನ್ನು(ಸ) ಮುಗಿಸಲು ಹೊರಟಿರುವೆನು" ಉಮರ್ ಉತ್ತರಿಸಿದರು.

ಆ ಮಿತ್ರ ನಿಸ್ಸಂಕೋಚವಾಗಿ- "ಮುಹಮ್ಮದ್‌ರನ್ನು ಮತ್ತೆ ಕೊಲ್ಲುವಿರಂತೆ. ಮೊದಲು ನಿಮ್ಮ ಸಹೋದರಿ ಮತ್ತು ಭಾವನನ್ನು ನೋಡಿಕೊಳ್ಳಿರಿ. ಅವರಿಬ್ಬರೂ ಮುಸ್ಲಿಮರಾಗಿ ಬಿಟ್ಟಿದ್ದಾರೆ" ಎಂದರು. ಅವರ ಈ ಮಾತು ಉಮರ್‌ರಿಗೆ ಬೆಂಕಿಗೆ ತುಪ್ಪ ಸುರಿದಂತಾಯಿತು. ಅವರು ಕೋಪೋದ್ರಿಕ್ತರಾಗಿ ಅವುಡು ಕಚ್ಚುತ್ತಾ ಸಹೋದರಿಯ ಮನೆಯತ್ತ ನಡೆದರು. ಮನೆಯಲ್ಲಿ ಎದುರಿಗೆ ಸಿಕ್ಕಿದ ಭಾವನನ್ನು ಚೆನ್ನಾಗಿ ಥಳಿಸಿದರು. ಫಾತಿಮಾ, ಸಹೋದರನ ಕಿರಾತತನವನ್ನು ನೋಡಿದರು. ಪತಿಯ ಸ್ಥಿರತೆಯನ್ನು ನೋಡಿ ಅವರನ್ನು ರಕ್ಷಿಸಲು ಮುಂದಾದರು. ಉಮರ್‌ರ ಕೋಪ ಇನ್ನಷ್ಟು ಹೆಚ್ಚಿತು. ಸಹೋದರಿಯನ್ನೂ ಚೆನ್ನಾಗಿ ಥಳಿಸಿ ಗಾಯಗೊಳಿಸಿದರು. ಆದರೆ ಸ್ಥಿರಚಿತ್ತರಾದ ಪತಿ-ಪತ್ನಿಯರನ್ನು ಇಸ್ಲಾಮಿನಿಂದ ಒಂದಿಷ್ಟಾದರೂ ಸರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಸಹೋದರಿಯು ಧೈರ್ಯದಿಂದ ಸ್ಪಷ್ಟವಾಗಿ ಹೀಗೆ ಹೇಳಿಬಿಟ್ಟರು- "ಅಣ್ಣಾ! ಬೇಕಾದರೆ ನಮ್ಮ ಜೀವ ತೆಗೆಯಿರಿ. ಆದರೆ ನಮ್ಮ ಹೃದಯದಿಂದ ಇಸ್ಲಾಮನ್ನು ಅಳಿಸಲಾರಿರಿ. ನೀವು ಸತ್ಯ ಸ್ವೀಕಾರ ಮಾಡದೆ ಇದ್ದರೆ ನಿಮ್ಮ ಪ್ರಭು ನಿಮ್ಮೊಂದಿಗೆ ಪ್ರತೀಕಾರ ತೀರಿಸದೆ ಇರಲಾರ."

ಸಹೋದರಿ ಮತ್ತು ಭಾವನ ದೃಢವಿಶ್ವಾಸ ಮತ್ತು ದಿಟ್ಟ ನಿಲುವು ನೋಡಿ ಉಮರ್‌ರಿಗೆ ರೋಮಾಂಚನವಾಯಿತು. ಜೊತೆಗೆ ಸಹೋದರಿಯ ಮಾತುಗಳು ಹೃದಯದೊಳಕ್ಕೆ ನಾಟಿ ಪ್ರಭಾವ ಬೀರಿತು. ಸ್ವಲ್ಪ ಹೊತ್ತು ಅಲ್ಲಿ ಮೌನ ಆವರಿಸಿತು. ಅನಂತರ ಉಮರ್, "ಸರಿ, ಹಾಗಾದರೆ ನೀವು ಓದುತ್ತಿರುವುದನ್ನು ನನಗೂ ಕೇಳಿಸಿರಿ" ಎಂದರು. ಸಈದ್ ಬಿನ್ ಝ್ಯೈದ್ ಕೆಲವು ಕುರ್‌ಆನ್ ಸೂಕ್ತಗಳನ್ನು ಓದಿ ಕೇಳಿಸಿದರು. ಸಮಯ ಕೂಡಿ ಬಂದಿತ್ತು. ಇಸ್ಲಾಮಿನ ಸಂದೇಶವನ್ನು ಹೊತ್ತು ತಂದವರನ್ನೇ ಮುಗಿಸಿ ಬಿಡಲು ಹೊರಟಿದ್ದರು! ಆದರೆ ಆದದ್ದು ಬೇರೆಯೇ. ಸಹೋದರಿಯ ಮನೆಯಿಂದ ಹೊರಡುವಾಗ ಇಸ್ಲಾಮಿನ ಒಂದೊಂದು ಮಾತೂ ಸತ್ಯವಾಗಿ ಮುಂದೆ ಬಂದಿತ್ತು.

ಪರಿಣಾಮವಾಗಿ ಅಲ್ಲಿಂದ ಪ್ರವಾದಿವರ್ಯರ(ಸ) ಸನ್ನಿಧಿಗೆ ತಲುಪುತ್ತಲೇ ಸತ್ಯವಚನ ಉಚ್ಚರಿಸಿ ಮುಸ್ಲಿಮರಾದರು. ಈ ರೀತಿ ಉಮರ್ ಫಾರೂಕ್‌ರ ಇಸ್ಲಾಮ್ ಸ್ವೀಕಾರದಲ್ಲಿ ಅಲ್ಲಾಹನು ಸಈದ್‌ರನ್ನು ಮಧ್ಯವರ್ತಿಯನ್ನಾಗಿ ಮಾಡಿದನು.

ಸಈದ್ ಬಿನ್ ಝೈದ್ ತನ್ನ ಜೀವಮಾನದಲ್ಲೆಂದೂ ಅಲ್ಲಾಹನ ಮತ್ತು ಪ್ರವಾದಿಯವರ(ಸ) ಮೆಚ್ಚುಗೆಗೆ ವಿರುದ್ಧವಾದ ಯಾವ ಕಾರ್ಯವನ್ನೂ ಮಾಡಲಿಲ್ಲ. ಇತಿಹಾಸಕಾರರು ಅವರ ಬಗ್ಗೆ ಅರ್ಥಪೂರ್ಣವಾದ ಮಾತೊಂದನ್ನು ಉಲ್ಲೇಖಿಸಿದ್ದಾರೆ. "ಅವರು ಯುದ್ಧಗಳ ವೇಳೆ ಪ್ರವಾದಿವರ್ಯರ(ಸ) ಮುಂದೆ ಮುಂದೆ ಇರುತ್ತಿದ್ದರು. ನಮಾಝ್‌ನಲ್ಲಿ ಅವರ ಹಿಂದೆಯೂ." ಪ್ರವಾದಿವರ್ಯರ(ಸ) ವಿಯೋಗಾನಂತರ ನಡೆದ ದೊಡ್ಡ ದೊಡ್ಡ ಯುದ್ಧಗಳಲ್ಲಿ ಅವರು ಕೇವಲ ಇಸ್ಲಾಮಿಗಾಗಿ ಭಾಗವಹಿಸಿ ವೀರಾವೇಶದಿಂದ ಹೋರಾಡಿದ್ದರು. ಅವರ ಪರಾಕ್ರಮ ಮತ್ತು ಆಡಳಿತ ನೈಪುಣ್ಯವನ್ನು ನೋಡಿ ಅವರಿಗೆ ರಾಜ್ಯಪಾಲರ ಹುದ್ದೆಯನ್ನು ನೀಡಲಾಯಿತು. ಆದರೆ ಅವರು ಅದನ್ನು ಅಂಗೀಕರಿಸಲಿಲ್ಲ.

ಒಮ್ಮೆ ಒತ್ತಾಯಪೂರ್ವಕವಾಗಿ ಅವರನ್ನು ಡೆಮಾಸ್ಕಸ್‌ನ ಆಡಳಿತಾಧಿಕಾರಿಯಾಗಿ ನೇಮಿಸಲಾದಾಗ ಅಬೂಉಬೈದಾರಿಗೆ ಹೀಗೆ ಬರೆದರು- ನೀವು ಯುದ್ಧ ಮಾಡುವುದು ಮತ್ತು ನಾನು ಆ ಪುಣ್ಯದಿಂದ ವಂಚಿತನಾಗುವುದು! ಇಷ್ಟು ದೊಡ್ಡ ತ್ಯಾಗ ಮಾಡುವುದು ನನ್ನಿಂದ ಸಾಧ್ಯವಿಲ್ಲ. ಆದ್ದರಿಂದ ಈ ಪತ್ರ ಸಿಕ್ಕಿದ ಕೂಡಲೇ, ನನ್ನ ಹುದ್ದೆಯನ್ನು ವಹಿಸಲಿಕ್ಕಾಗಿ ಯಾರನ್ನಾದರೂ ಕಳಿಸಿಕೊಡಿ. ನಾನು ಶೀಘ್ರವೇ ನಿಮ್ಮ ಬಳಿಗೆ ತಲುಪುವೆನು." ಅನಂತರ ಇಸ್ಲಾಮಿನ ಮಾರ್ಗದಲ್ಲಿ ಎಲ್ಲ ಯುದ್ಧಗಳಲ್ಲಿಯೂ ಓರ್ವ ಸಾಮಾನ್ಯ ಯೋಧನಾಗಿ ತನ್ನ ಕರ್ತವ್ಯ ನಿರ್ವಹಿಸಿದರು. ಉಳಿದ ಜೀವನವನ್ನು ನೆಮ್ಮದಿಯಿಂದ ಕಳೆದರು. ಅಲ್ಲಾಹನು ಅವರ ಹೃದಯವನ್ನು ನಿರಪೇಕ್ಷವಾಗಿ ಮಾಡಿದ್ದನು. ಯಾವ ಲೌಕಿಕ ಆಸಕ್ತಿಯೂ ಅವರಿಗಿರಲಿಲ್ಲ. ಆಣೆ ಹಾಕುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಒಂದು ಪ್ರಕರಣದಲ್ಲಿ ಅವರಿಗೆ ಒಮ್ಮೆ ನ್ಯಾಯಾಲಯಕ್ಕೆ ಹೋಗಬೇಕಾಗಿ ಬಂತು. ಕಾಝಿ(ನ್ಯಾಯಾಧೀಶ)ಯವರು ಅವರೊಂದಿಗೆ ಆಣೆ ಹಾಕಲು ಹೇಳಿದಾಗ ಅದಕ್ಕೆ ಒಪ್ಪದೆ ತನ್ನ ಹಕ್ಕನ್ನು ಬಿಟ್ಟುಕೊಟ್ಟರು. ಅವರ ಧರ್ಮಭೀರುತ್ವ, ಅಲ್ಲಾಹನ ಭಯ ಮತ್ತು ಇಸ್ಲಾಮಿಗಾಗಿ ಅವರು ಪಟ್ಟ ಶ್ರಮಗಳನ್ನು ನೋಡಿ ಪ್ರವಾದಿವರ್ಯರು(ಸ) ಅವರಿಗೆ ಈ ಲೋಕದಲ್ಲೇ ಸ್ವರ್ಗದ ಸುವಾರ್ತೆ ನೀಡಿದರು. ತನ್ನ ಸಂಪೂರ್ಣ ಜೀವನವನ್ನು ದೇವ ಸಂಪ್ರೀತಿಗಾಗಿ ಸವೆಸಿ 70ನೆಯ ವಯಸ್ಸಿನಲ್ಲಿ ಈ ಲೋಕಕ್ಕೆ ವಿದಾಯ ಕೋರಿದರು.

——— ❖ ———

# ಝೈದ್ ಬಿನ್ ಹಾರಿಸ(ರ)

ಝೈದ್‌ರ ತಂದೆ ಹಾರಿಸ(ರ) ಯಮನ್‌ನವರಾಗಿದ್ದರು. ಝೈದ್ ಅಲ್ಲೇ ಹುಟ್ಟಿದರು. ಸಣ್ಣ ಮಗುವಾಗಿದ್ದಾಗ ಅವರ ತಾಯಿಯು ಅವರನ್ನು ತನ್ನ ತವರಿಗೆ ಕರಕೊಂಡು ಹೋಗುತ್ತಿದ್ದರು. ದಾರಿ ಮಧ್ಯೆ ಕೆಲವು ಡಕಾಯಿತರು ಅವರನ್ನು ತಾಯಿಯ ಕೈಯಿಂದ ಬಲವಂತನಾಗಿ ಕಿತ್ತು ಕೊಂಡು ಹೋಗಿ ಒಂದು ಪೇಟೆಯಲ್ಲಿ ಮಾರಿಬಿಟ್ಟರು.

ಮಗುವಿನ ಅದೃಷ್ಟ. ಮಗು ದೊಡ್ಡ ಮನುಷ್ಯನಾಗಬೇಕಿತ್ತು. ಪ್ರವಾದಿವರ್ಯರ(ಸ) ಕಣ್ಮಣಿಯಾಗಬೇಕಿತ್ತು. ಅಲ್ಲಾಹನ ಅನುಗ್ರಹವೂ ಜೊತೆಗಿತ್ತು. ಝೈದ್‌ರನ್ನು ಪೇಟೆಯಲ್ಲಿ ಹಕೀಮ್ ಬೀನ್ ಹಿಝಾಮ್ ಖರೀದಿಸಿ ಅತ್ತೆ ಖದೀಜಾರಿಗೆ ಉಡುಗೊರೆಯಾಗಿ ನೀಡಿವರು. ಅವರು ಝೈದ್‌ರನ್ನು ಪ್ರವಾದಿವರ್ಯರಿಗೆ(ಸ) ನೀಡಿದರು.

ಅಲ್ಲಾಹನ ವಿಧಿಯನ್ನು ಮಾನವ ಗ್ರಹಿಸುವುದಿಲ್ಲ. ಆದ ಕಾರಣ ಸಹನೆ ವಹಿಸುವುದಿಲ್ಲ. ಇಲ್ಲಿ ಮಗುವಿಗೆ ಅಲ್ಲಾಹನ ಪ್ರವಾದಿಯ ಸೇವಕನ ಸ್ಥಾನ ದೊರಕುತ್ತದೆ. ಮುಂದೆ ಅವರು ಏನೋ ಆಗಬೇಕಿತ್ತು. ಗಣ್ಯ ವ್ಯಕ್ತಿಗಳೂ ಅವರನ್ನು ನೋಡಿ ಈರ್ಷ್ಯೆ ಪಡಬೇಕಾಗಿತ್ತು. ಆದರೆ ಅವರ ತಂದೆ ತಾಯಿಗಾದರೋ ಮಗುವಿನ ಅಗಲುವಿಕೆಯ ಬಳಿಕ ಒಂದು ಕ್ಷಣದ ಮಟ್ಟಿಗೂ ನೆಮ್ಮದಿಯಿರಲಿಲ್ಲ. ದೇವನ ಇಚ್ಛೆಯೇನೆಂದು ಪಾಪ, ಅವರಿಗೇನು ಗೊತ್ತು. ಅವರು ರಾತ್ರಿ ಹಗಲು ತಮ್ಮ ಮಗನಿಗಾಗಿ ಕಂಬನಿ ಸುರಿಸುತ್ತಿದ್ದರು. ನಾಲ್ಕೂ ದಿಕ್ಕುಗಳಲ್ಲಿ ಹುಡುಕಾಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಹೀಗೆ ದಿನಗಳು, ತಿಂಗಳುಗಳು ಮತ್ತು ವರ್ಷಗಳೂ ಉರುಳತೊಡಗಿದುವು.

ಒಮ್ಮೆ ಹಜ್ಜ್ ನಿರ್ವಹಿಸಲಿಕ್ಕಾಗಿ ಯಮನ್‌ನ ಕೆಲವು ಮಂದಿ ಮಕ್ಕಾಕ್ಕೆ ಬಂದರು. ಅಲ್ಲಿ ಅವರು ಝೈದ್‌ರನ್ನು ಕಂಡು ಕೂಡಲೇ ಗುರುತು ಹಿಡಿದರು. ಯಮನ್‌ಗೆ ಮರಳಿ ಅವರ ತಂದೆ ತಾಯಿಗಳಿಗೆ ವಿಷಯ ತಿಳಿಸಿದರು. ಈ ಶುಭ ಸುದ್ದಿ ಸಿಕ್ಕಿದ ಕೂಡಲೇ ಸಂತೋಷಗೊಂಡ ಹಾರಿಸರು ತನ್ನ ಸಹೋದರನೊಂದಿಗೆ ಮಕ್ಕಾಗೆ ಪ್ರಯಾಣ ಬೆಳೆಸಿದರು. ಹೋಗುವಾಗ ಕೆಲವು ಉಡುಗೊರೆ ಸಾಮಾನುಗಳನ್ನೂ ಒಯ್ದಿದ್ದರು. ಅವರು ಪ್ರವಾದಿ(ಸ)ಯವರನ್ನು ಭೇಟಿಯಾಗಿ ದಯನೀಯವಾಗಿ

ಹೀಗೆ ಬಿನ್ನವಿಸಿದರು. "ಅಬ್ದುಲ್ಲಾರ ಸಜ್ಜನ ಪುತ್ರರೇ! ಅಬ್ದುಲ್ ಮುತ್ತಲಿಬರ ಸಜ್ಜನ ಮೊಮ್ಮಗನೇ! ನಿಮ್ಮ ಜನಾಂಗದ ಅತ್ಯಂತ ಗೌರವಾರ್ಹ ಸುಪುತ್ರರೇ! ನೀವು ಹರಮ್‌ನವರು. ಹರಮ್‌ನ ಮೇಲ್ವಿಚಾರಣೆ ನಡೆಸುವವರು. ನೀವು ಸಂಕಷ್ಟದಲ್ಲಿ ಸಿಲುಕಿರುವವರಿಗೆ ಸಹಾಯ ಮಾಡುತ್ತೀರಿ. ಕೈದಿಗಳಿಗೆ ಉಣಿಸುತ್ತೀರಿ. ನಮ್ಮ ಪುತ್ರ ನಿಮ್ಮ ಗುಲಾಮನಾಗಿ ನಿಮ್ಮ ಬಳಿಯಲ್ಲಿದ್ದಾನೆಂದು ನಮಗೆ ತಿಳಿಯಿತು. ನಾವು ಬಂದಿರುವುದು ಆತನನ್ನು ವಿಮೋಚಿಸಲು. ಅದಕ್ಕೆ ಎಷ್ಟು ಪರಿಹಾರ ನೀಡಬೇಕೋ ಹೇಳಿರಿ. ನಾವು ಪಾವತಿಸಲು ಸಿದ್ಧರಿದ್ದೇವೆ."

ಹಾರಿಸರ ಮಾತುಗಳನ್ನು ಕೇಳಿದ ಪ್ರವಾದಿವರ್ಯರು(ಸ), ನೀವು ಯಾರ ಬಗ್ಗೆ ಹೇಳುತ್ತಿದ್ದೀರೆಂದು ಪ್ರಶ್ನಿಸಿದರು. ಝೈದ್‌ರ ಕುರಿತೆಂದು ಅವರು ಹೇಳಿದಾಗ ಪ್ರವಾದಿ ವರ್ಯರು(ಸ) ಚಿಂತೆಗೊಳಗಾದರು. ಏಕೆಂದರೆ ಪ್ರವಾದಿ(ಸ) ಝೈದ್‌ರನ್ನು ತಮ್ಮ ಪುತ್ರನಂತೆ ಅತ್ಯಂತ ಪ್ರೀತಿ ವಾತ್ಸಲ್ಯದಿಂದ ಸಾಕುತ್ತಿದ್ದರು. ಪ್ರವಾದಿವರ್ಯರು(ಸ) ಹಾರಿಸರೊಡನೆ, ನಿಮ್ಮ ಈ ಬೇಡಿಕೆಯ ಹೊರತಾದ ಬೇರೇನಾದರೂ ಭಿನ್ನಹವಿದೆಯೇ ಎಂದು ಕೇಳಿದಾಗ ಅವರು ಇಲ್ಲವೆಂದರು. "ಹಾಗಾದರೆ ಕೇಳಿ" ಪ್ರವಾದಿ(ಸ) ಹೇಳಿದರು. ಝೈದ್‌ನನ್ನು ಕರೆಯುತ್ತೇನೆ. ಆಯ್ಕೆಯ ಸ್ವಾತಂತ್ರ್ಯವನ್ನು ಅವನಿಗೇ ನೀಡಿರಿ. ಆತ ನಿಮ್ಮನ್ನು ಇಷ್ಟಪಟ್ಟರೆ, ದೇವನಾಣೆ! ಆತನ ಇಷ್ಟವನ್ನು ನಾನು ತಿರಸ್ಕರಿಸುವವನಲ್ಲ.

ಈ ಶರತ್ತನ್ನು ಹಾರಿಸ ಒಪ್ಪಿದರು. ಅವರ ಲೆಕ್ಕದಲ್ಲಿ ಝೈದ್ ಓರ್ವ ಗುಲಾಮ. ಗುಲಾಮರ ಪರಿಸ್ಥಿತಿ ಆ ಕಾಲದಲ್ಲಿ ಹೇಗಿರಬಹುದೆಂಬುದನ್ನು ಎಲ್ಲರೂ ಬಲ್ಲರು. ಅದರ ಕಲ್ಪನೆಯಿಂದಲೇ ಜನರು ಕಂಪಿಸುತ್ತಿದ್ದರು. ತನ್ನ ಪುತ್ರ ಗುಲಾಮಗಿರಿಯ ಎಲ್ಲ ಸಂಕಷ್ಟಗಳನ್ನೂ ಅನುಭವಿಸುತ್ತಿರಬಹುದೆಂದು ಅವರು ಭಾವಿಸಿದ್ದರು. ಗುಲಾಮರನ್ನು ಒಡೆಯರಿಗಿಂತಲೂ ಶ್ರೇಷ್ಠರಾಗಿಸಲು ಮತ್ತು ಅವರನ್ನು ಮಾನವತೆಯ ಉನ್ನತ ಮಟ್ಟಕ್ಕೇರಿಸಲು ಬಂದಿದ್ದ ಮಹಾ ಅನುಗ್ರಹದಾತನ(ಸ) ಗುಲಾಮನಾಗಿದ್ದಾನೆ ಝೈದ್ ಎಂಬುದು ಅವರಿಗೇನು ಗೊತ್ತು! ಪ್ರವಾದಿವರ್ಯರು(ಸ) ಝೈದ್‌ರನ್ನು ಕರೆಸಿ, ಇವರಿಬ್ಬರ ಪರಿಚಯವಿದೆಯೇ ಎಂದು ಕೇಳಿದರು. ಝೈದ್ ಹೇಳಿದರು- ಹೌದು! ಇದು ನನ್ನ ತಂದೆ ಮತ್ತು ಅದು ನನ್ನ ಚಿಕ್ಕಪ್ಪ. ಪ್ರವಾದಿ(ಸ) ಅವರಿಬ್ಬರೂ ಬಂದಿದ್ದ ಉದ್ದೇಶವನ್ನು ತಿಳಿಸಿದ ನಂತರ ಝೈದ್‌ರಲ್ಲಿ ಹೀಗೆಂದರು- ನಿನಗೆ ನಾನು ಯಾರೆಂದು ಗೊತ್ತು. ನನ್ನೊಂದಿಗೆ ನೀನು ಹೇಗೆ ಇದ್ದಿ ಎಂಬುದೂ ಗೊತ್ತು. ಈಗ ಆಯ್ಕೆ ನಿನ್ನದು. ನೀನು ಬೇಕಾದರೆ ನನ್ನೊಂದಿಗೆ ಇರಬಹುದು. ಇಲ್ಲವೆ ನಿನ್ನ ತಂದೆ ಮತ್ತು ಚಿಕ್ಕಪ್ಪನೊಂದಿಗೆ ಹೋಗಬಹುದು.

ಪ್ರವಾದಿಯವರ(ಸ) ಬಳಿ ತನಗೆ ಸಿಕ್ಕಿದ ಸೌಭಾಗ್ಯವನ್ನು ಝೈದ್ ಚೆನ್ನಾಗಿ ಅರಿತಿದ್ದರು. ಪ್ರವಾದಿಯವರ(ಸ) ಶಿಕ್ಷಣ ತರಬೇತಿಯಿಂದ ಮುಂದೆ ತಾನೇನಾಗಲಿದ್ದೇನೆಂಬುದರ ಅರಿವೂ ಅವರಿಗಿತ್ತು. ಆದ್ದರಿಂದ ಅವರು ಸ್ಪಷ್ಟವಾಗಿ, "ನನ್ನ ತಂದೆಯೂ ತಾಯಿಯೂ ತಾವೇ ಆಗಿದ್ದೀರಿ" ಎಂದು ಹೇಳಿಬಿಟ್ಟರು. ಈ ಉತ್ತರವನ್ನು ಕೇಳಿ ಅವರ ತಂದೆ ಮತ್ತು ಚಿಕ್ಕಪ್ಪ ದಂಗಾಗಿ ಬಿಟ್ಟರು. ಅವರು ಆಶ್ಚರ್ಯಚಕಿತರಾಗಿ, ಮಗನೇ ನೀನು ಗುಲಾಮಗಿರಿಯನ್ನೇ ಇಷ್ಟಪಡುವೆಯಾ? ನಿನಗೆ

ಸ್ವಾತಂತ್ರ್ಯ, ತಂದೆ-ತಾಯಿ, ಕುಟುಂಬ ಯಾವುದೂ ಇಷ್ಟವಲ್ಲವೆ ಎಂದು ಕೇಳಿದರು. ಆಗ ಝೈದ್ ಹೀಗೆ ಉತ್ತರ ಕೊಟ್ಟರು. "ನಾನು ಈ ಮಹಾನ್ ಪಾವನ ವ್ಯಕ್ತಿಯಲ್ಲಿ ಕಂಡ ಸದ್ಗುಣಗಳಿಂದಾಗಿ, ಅವರಿಗಿಂತ ಹೆಚ್ಚಾಗಿ ಇನ್ನು ಯಾರನ್ನೂ ಕಾಣಲಾರೆ."

ಝೈದ್‌ರ ಈ ನುಡಿಗಳು ಅವರ ಮೇಲಿನ ಪ್ರವಾದಿವರ್ಯರ(ಸ) ಪ್ರೀತಿಯನ್ನು ಇಮ್ಮಡಿಗೊಳಿಸಿತು. ಅವರು ಝೈದ್‌ರ ಕೈ ಹಿಡಿದುಕೊಂಡು ಹೋಗಿ ಕಅಬಾ ಭವನದಲ್ಲಿ ಈ ರೀತಿ ಘೋಷಿಸಿದರು. "ಇಂದಿನಿಂದ ಝೈದ್ ನನ್ನ ಪುತ್ರ; ಅವನು ನನ್ನ ವಾರೀಸುದಾರನು ಮತ್ತು ನಾನು ಅವನ ವಾರೀಸುದಾರನಾಗಿರುವೆನು." ಈ ಘೋಷಣೆಯು ಝೈದ್‌ರ ತಂದೆ ಮತ್ತು ಚಿಕ್ಕಪ್ಪನನ್ನು ಬಹಳ ಸಂತುಷ್ಟಗೊಳಿಸಿತು. ಅವರನ್ನು ಪ್ರವಾದಿವರ್ಯರ(ಸ) ಬಳಿಯಲ್ಲೇ ಬಿಟ್ಟು ಅವರು ಯಮನ್‌ಗೆ ಮರಳಿದರು.

ಅದಾದ ಕೆಲವೇ ದಿವಸಗಳ ಬಳಿಕ ಮುಹಮ್ಮದ್‌ರನ್ನು(ಸ) ಅಲ್ಲಾಹನು ಪ್ರವಾದಿಯಾಗಿ ನೇಮಿಸಿದನು. ಅವರು ಅಲ್ಲಾಹನ ಸಂದೇಶವನ್ನು ಜನರ ಮುಂದಿಟ್ಟಾಗ ಮೊತ್ತಮೊದಲು ಇಸ್ಲಾಮ್ ಸ್ವೀಕರಿಸಿದ ನಾಲ್ಕು ಮಂದಿಯಲ್ಲಿ ಝೈದ್ ಕೂಡಾ ಒಬ್ಬರಾಗಿದ್ದರು. ಉಳಿದ ಮೂವರೆಂದರೆ ಖದೀಜಾ, ಅಬೂಬಕರ್ ಮತ್ತು ಅಲೀ(ರ), ತರುವಾಯ ಪ್ರವಾದಿಯ ಚಿಕ್ಕಪ್ಪ ಹಂಝಾರವರು ಇಸ್ಲಾಮ್ ಸ್ವೀಕರಿಸಿದಾಗ, ಅವರನ್ನು ಪ್ರವಾದಿವರ್ಯರು(ಸ). ಝೈದ್‌ರ ಸಹೋದರನಾಗಿ ಮಾಡಿದರು. ಇಸ್ಲಾಮಿನ ಪ್ರಭಾವದಿಂದಾಗಿ ಹಂಝಾ ಮತ್ತು ಝೈದ್‌ರ ಸ್ನೇಹ ಸಂಬಂಧವು ಅತ್ಯಂತ ಗಾಢವಾಗಿತ್ತು. ಹಂಝಾರಿಗೆ ಎಲ್ಲಿಗಾದರೂ ಹೋಗಬೇಕಾಗಿ ಬಂದಾಗ ತನ್ನೆಲ್ಲ ವ್ಯವಹಾರಗಳನ್ನು ಝೈದ್‌ರಿಗೆ ಒಪ್ಪಿಸಿ ಹೋಗುತ್ತಿದ್ದರು. ಝೈದ್‌ರ ವ್ಯಕ್ತಿತ್ವ ಅಷ್ಟಕ್ಕೇ ಸೀಮಿತಗೊಳ್ಳಲಿಲ್ಲ. ಅದು ಇನ್ನೂ ಮೇಲೇರಬೇಕಾಗಿತ್ತು. ಪ್ರವಾದಿವರ್ಯರು(ಸ) ತಮ್ಮ ಪರಿಚಾರಿಕೆ ಉಮ್ಮು ಐಮನ್‌ರನ್ನು, ತರುವಾಯ ತಮ್ಮ ಚಿಕ್ಕಪ್ಪನ ಪುತ್ರಿ ಝೈನಬ್‌ರನ್ನು ಝೈದ್‌ರಿಗೆ ವಿವಾಹ ಮಾಡಿಕೊಟ್ಟರು. ಉಮ್ಮು ಐಮನ್‌ರ ಕುರಿತು ಪ್ರವಾದಿ(ಸ) ಹೇಳುತ್ತಿದ್ದರು. "ಸ್ವರ್ಗದ ಕನ್ಯೆಯನ್ನು ವಿವಾಹವಾಗಬಯಸುವವನು ಉಮ್ಮು ಐಮನ್‌ಳನ್ನು ವಿವಾಹವಾಗಲಿ." ಈ ಅವಕಾಶವನ್ನು ಝೈದ್ ಕೈ ಬಿಡುವುದಾದರೂ ಹೇಗೆ? ಅವರು ಕೂಡಲೇ ಒಪ್ಪಿಕೊಂಡರು. ವಸ್ತುತಃ ಉಮ್ಮು ಐಮನ್ ಝೈದ್‌ರಿಗಿಂತ ಪ್ರಾಯದಲ್ಲಿ ದೊಡ್ಡವರಾಗಿದ್ದರು. ಝೈದ್ ಬಿನ್ ಹಾರಿಸ ಎಲ್ಲವನ್ನೂ ತೊರೆದು ಮದೀನಾಕ್ಕೆ ವಲಸೆ ಹೋದಾಗ ಅಲ್ಲಿನ ಓರ್ವ ಶ್ರೀಮಂತರಾದ ಉಸ್ಯೆದ್ ಬಿನ್ ಜಲ್‌ಘರ್ ಅನ್ಸಾರಿಯವರನ್ನು ಅವರ ಸೋದರನಾಗಿ ಮಾಡಲಾಯಿತು. ಗುಲಾಮನಾಗಿದ್ದ ಓರ್ವ ವ್ಯಕ್ತಿಯ ಸ್ಥಾನಮಾನ ಇಸ್ಲಾಮಿನ ಆಶ್ರಯದಲ್ಲಿ ಎಷ್ಟು ಉನ್ನತಿಗೇರಿತು! ಆಯಿಶಾ ಹೇಳುತ್ತಾರೆ- ಪ್ರವಾದಿವರ್ಯರು(ಸ) ಯಾವುದಾದರೂ ಸೇನೆಯನ್ನು ಕಾರ್ಯಾಚರಣೆಗಾಗಿ ರವಾನಿಸುವಾಗ, ಅದರಲ್ಲಿ ಝೈದ್ ಇದ್ದರೆ ಅವರನ್ನೇ ಸೇನಾಪತಿಯಾಗಿ ನೇಮಿಸುತ್ತಿದ್ದರು. ಈ ರೀತಿ ಅವರು 9 ಬಾರಿ ಸೇನಾಪತಿಯಾದರು. ಅಬೂಬಕರ್, ಉಮರ್‌ರಂತಹ ಹಿರಿಯ ಸಹಾಬಿಗಳೂ ಝೈದ್‌ರ ಅಧೀನದಲ್ಲಿ ಸೈನಿಕರಾಗಿರುತ್ತಿದ್ದರು. ಪ್ರವಾದಿವರ್ಯರ(ಸ) ಶಿಕ್ಷಣ-ತರಬೇತಿಯಿಂದ ಅವರು ಪುಟಕ್ಕಿಟ್ಟ ಚಿನ್ನದಂತಾಗಿ ಬಿಟ್ಟಿದ್ದರು. ಪ್ರವಾದಿವರ್ಯರಿಗೆ(ಸ) ಅವರ ಹೊರತು ಯಾರೂ ಸರಿ

ಹೊಂದುತ್ತಿರಲಿಲ್ಲ. ಬಾಣ ಎಸೆಯುವುದರಲ್ಲಿ ಅವರದು ಪಳಗಿದ ಕೈಯಾಗಿತ್ತು. ಅವರನ್ನು ಮೀರಿಸುವವರು ಯಾರೂ ಇರಲಿಲ್ಲ. ಶೌರ್ಯ ಪರಾಕ್ರಮಗಳಲ್ಲೂ ಅವರು ಬಹಳ ಮುಂದಿದ್ದರು. ಯಾವ ಯುದ್ಧದಲ್ಲೂ ಅವರು ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಹಾಕುತ್ತಿರಲಿಲ್ಲ. ಎಂದೂ ಅವರ ಪಾದಗಳು ಕದಲಲಿಲ್ಲ. ಪ್ರವಾದಿವರ್ಯರು(ಸ) ಮದೀನಾದಿಂದ ಹೊರಗೆ ಎಲ್ಲಿಗಾದರೂ ಹೋಗುವುದಿದ್ದರೆ ಝೈದ್‌ರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸುತ್ತಿದ್ದರು. ತಮ್ಮ ದೌತ್ಯವನ್ನು ಅವರು ಚೆನ್ನಾಗಿಯೇ ನಿರ್ವಹಿಸುತ್ತಿದ್ದರು.

ಪ್ರವಾದಿವರ್ಯರ(ಸ) ಜೀವಿತ ಕಾಲದಲ್ಲಿ ನಡೆದ ಯುದ್ಧಗಳ ಪೈಕಿ ಮೂತಾಯುದ್ಧವು ಬಹಳ ಪ್ರಮುಖವಾಗಿತ್ತು. ಅದರ ಸೇನೆ ಸಜ್ಜುಗೊಳ್ಳುತ್ತಿದ್ದಾಗ ಅಲ್ಲಿ ಅಬೂಬಕರ್, ಉಮರ್, ಜಲ್‌ಫರ್ ಹಾಗೂ ಇನ್ನಿತರ ಹಿರಿಯ ಸಹಾಬಿಗಳಿದ್ದರು. ಆದರೆ ಪ್ರವಾದಿಯವರು(ಸ) ಝೈದ್‌ರನ್ನು ಸೇನಾಪತಿಯಾಗಿ ನೇಮಿಸಿದರು. ಯುದ್ಧದಲ್ಲಿ ಝೈದ್ ಮಡಿದಾಗ ಅವರ ಮೇಲಿನ ಪ್ರೀತಿಯಿಂದಾಗಿ ಪ್ರವಾದಿವರ್ಯರು(ಸ) ಅತ್ತುಬಿಟ್ಟರು. ಸೇನೆಯನ್ನು ಪುನಃ ಸಜ್ಜುಗೊಳಿಸಿದಾಗ ಅವರ ಪುತ್ರ ಉಸಾಮರನ್ನು ಸೇನಾಪತಿಯಾಗಿ ಮಾಡಿದರು.

ಝೈದ್ ತನ್ನ ಸಂಪೂರ್ಣ ಜೀವನವನ್ನು ಅಲ್ಲಾಹನ ಸಂಪ್ರೀತಿ ಮತ್ತು ಪ್ರವಾದಿಯ ಪ್ರಸನ್ನತೆಯಲ್ಲಿ ಕಳೆದರು. ಅದರಿಂದಾಗಿ ಅಲ್ಲಾಹ್ ಮತ್ತು ಪ್ರವಾದಿಯ ದೃಷ್ಟಿಯಲ್ಲಿ ಅವರ ಸ್ಥಾನಮಾನವೂ ಅತ್ಯುನ್ನತವಾಯಿತು. ಪ್ರವಾದಿವರ್ಯರ(ಸ) ವಿಯೋಗಾನಂತರ ಆಯಿಶಾ ಹೇಳಿದರು- "ಝೈದ್ ಜೀವಿಸಿರುತ್ತಿದ್ದರೆ ಪ್ರವಾದಿವರ್ಯರು(ಸ) ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸುತ್ತಿದ್ದರು."

ಅಲ್ಲಾಹನ ಅನುಗ್ರಹಗಳನ್ನು ಝೈದ್‌ರ ಮೇಲೆ ಸುರಿಯಲಿ ಮತ್ತು ಅವರ ಪಾದಪಥಗಳನ್ನನುಸರಿಸಿ ನಡೆಯುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ. ವಾಸ್ತವದಲ್ಲಿ ಅಲ್ಲಾಹನ ಪ್ರವಾದಿಯ ಬಳಿಕ ಇಂತಹ ಹಿರಿಯ ವ್ಯಕ್ತಿಗಳೇ ನಮಗೆ ಆದರ್ಶವಾಗಿದ್ದಾರೆ.

# ಸುಹೈಬ್ ರೂಮಿ(ರ)

**ಸು**ಹೈಬ್ ರೂಮಿಯವರ(ರ) ಕುರಿತು ಪ್ರವಾದಿ ಮುಹಮ್ಮದ್(ಸ) ಹೀಗೆ ಹೇಳಿದ್ದಾರೆ- "ಸುಹೈಬ್ ರೋಮ್‌ನ ಪ್ರಪ್ರಥಮ ಫಲವಾಗಿದ್ದಾರೆ." ಅಂದರೆ ರೋಮನ್ನರ ಪೈಕಿ ಪ್ರಪ್ರಥಮ ವಾಗಿ ಇಸ್ಲಾಮ್ ಸ್ವೀಕರಿಸಿದ ವ್ಯಕ್ತಿ.

ಯೂಫ್ರಟಿಸ್ ನದೀ ತೀರದ ಮೌಸಲ್‌ನಗರದ ಹತ್ತಿರದ ಒಂದು ಕುಗ್ರಾಮದಲ್ಲಿ ಸುಹೈಬ್ ಜನಿಸಿದರು. ಅವರ ತಂದೆ ಇರಾನ್‌ನ ಚಕ್ರವರ್ತಿಯ ವತಿಯಿಂದ ಉಬಲ್ಲದ ಆಡಳಿತಾಧಿಕಾರಿಯಾಗಿದ್ದರು. ರೋಮನ್ ಸೈನ್ಯದೊಂದಿಗೆ ಇರಾನಿಯರು ಆಗಾಗ ಸಂಘರ್ಷಿಸುತ್ತಿದ್ದರು. ಒಮ್ಮೆ ರೋಮನ್ನರು ಉಬಲ್ಲದ ಮೇಲೆ ಹಠಾತ್ ದಾಳಿ ನಡೆಸಿದರು. ಉಬಲ್ಲದವರು ಸಾಕಷ್ಟು ಪ್ರತಿರೋಧಿಸಿದರು. ಆದರೆ ಈ ಸಂಘರ್ಷದ ವೇಳೆ ಇನ್ನೂ ಮಗುವಾಗಿದ್ದ ಸುಹೈಬ್ ರೋಮನ್ನರ ಕೈಗೆ ಸಿಕ್ಕಿದರು. ಅವರು ಲೂಟಿಗೈದ ವಸ್ತುಗಳ ಜೊತೆ ಸುಹೈಬ್‌ರನ್ನೂ ಕೊಂಡೊಯ್ದರು. ಅವರ ತಂದೆ ಎಲ್ಲೆಲ್ಲೂ ಹುಡುಕಾಡಿದರು. ಆದರೆ ಎಲ್ಲೂ ಪತ್ತೆಯಾಗಲಿಲ್ಲ. ಕೊನೆಗೆ ತಲೆಗೆ ಕೈ ಹೊತ್ತು ಕುಳಿತು ಬಿಟ್ಟರು.

ಸುಹೈಬ್ ರೋಮನ್ನರ ಮಧ್ಯೆ ಬೆಳೆದು ದೊಡ್ಡವರಾದರು. ಅನಂತರ ರೋಮನ್ನರು ಅವರನ್ನು ಓರ್ವ ವ್ಯಕ್ತಿಗೆ ಮಾರಿಬಿಟ್ಟರು. ಆ ವ್ಯಕ್ತಿ ಅವರನ್ನು ಗುಲಾಮನಾಗಿ ಮಕ್ಕಾಕ್ಕೆ ತಲುಪಿಸಿದರು. ಅಲ್ಲಿ ಅವರ ಯಜಮಾನನು ಅವರ ಯಾವುದೋ ಒಂದು ವಿಷಯದಿಂದ ಸಂತೋಷಗೊಂಡು ಅವರನ್ನು ಸ್ವತಂತ್ರಗೊಳಿಸಿದನು. ಮಕ್ಕಾದಲ್ಲಿ ಅವರು ಓರ್ವ ಪರದೇಸಿಯಂತೆ ಜೀವನ ಸಾಗಿಸುತ್ತಿದ್ದರು. ಓರ್ವ ವ್ಯಕ್ತಿಯೊಂದಿಗೆ ಪಾಲುದಾರಿಕೆಯಲ್ಲಿ ವ್ಯಾಪಾರ ಆರಂಭಿಸಿದರು. ಬಹಳ ಸಂಪಾದಿಸಿದರು. ಜೊತೆಗೆ ನಯವಿನಯ ಮತ್ತು ಸದಾ ಹಸನ್ಮುಖಿಯಾಗಿರುತ್ತಿದ್ದರು. ರಸಿಕರೂ ಆಗಿದ್ದ ಅವರು ಯಾವ ಸಭೆಯಲ್ಲಿ ಕುಳಿತರೂ ಸಭಿಕರನ್ನು ನಗೆಗಡಲಲ್ಲಿ ತೇಲಿಸಿಬಿಡುತ್ತಿದ್ದರು. ಪ್ರವಾದಿವರ್ಯರ(ಸ) ಪರಿಚಯ ಮೊದಲಿನಿಂದಲೇ ಇತ್ತು. ಆಗಾಗ ಭೇಟಿಯಾಗುತ್ತಿದ್ದರು. ಪರಸ್ಪರ ಮಾತುಕತೆ, ವಿಚಾರ ವಿನಿಮಯ ನಡೆಯುತ್ತಲಿತ್ತು. ಪ್ರವಾದಿವರ್ಯರ(ಸ) ವ್ಯಕ್ತಿತ್ವದಿಂದ ಮೊದಲೇ ಪ್ರಭಾವಿತರಾಗಿದ್ದರು. ಪ್ರವಾದಿವರ್ಯರ(ಸ) ಅನೇಕ ಸದ್ಗುಣಗಳನ್ನು ತನ್ನ ಜೀವನದಲ್ಲಿ ಮೈಗೂಡಿಸಿಕೊಂಡಿದ್ದರು.

ಮಕ್ಕಾದ ಬೀದಿಗಳಲ್ಲಿ ತೌಹೀದ್ ಮತ್ತು ರಿಸಾಲತ್ (ಏಕದೇವತ್ವ ಮತ್ತು ಪ್ರವಾದಿತ್ವ)ನ ಧ್ವನಿ ಮೊಳಗಿದಾಗ ಹಿಂದು ಮುಂದು ನೋಡದೆ ಇಸ್ಲಾಮನ್ನು ಅಪ್ಪಿಕೊಂಡರು. ಮಕ್ಕಾದಲ್ಲಿ ತನ್ನ ಕುಟುಂಬಿಕರೋ ಸಂಬಂಧಿಕರೋ ಯಾರೂ ಇರಲಿಲ್ಲ. ಆದ್ದರಿಂದ ಮುಸ್ಲಿಮ್ ಆದ ಅಪರಾಧಕ್ಕಾಗಿ ಕುರೈಶರು ತುಂಬಾ ಪೀಡಿಸಿದರು. ಮಕ್ಕಾದವರು ತಮ್ಮವರನ್ನೇ ಬಿಡಲಿಲ್ಲವೆಂದ ಮೇಲೆ ಪರದೇಸಿಯಾದವನನ್ನು ಹೇಗೆ ತಾನೇ ಕ್ಷಮಿಸಿಯಾರು! ಹೊರನಾಡಿನವನೆಂದು ತರತರವಾಗಿ ಹಿಂಸಿಸಿದರು. ಆದರೆ ಸತ್ಯಮಾರ್ಗದಿಂದ ಕಿಂಚಿತ್ತಾದರೂ ಸರಿಸಲು ಆ ಸತ್ಯನಿಷೇಧಿಗಳಿಂದ ಸಾಧ್ಯವಾಗಲಿಲ್ಲ. ಕೊನೆಗೂ ಮುಸ್ಲಿಮರು ಮಕ್ಕಾದಿಂದ ಮದೀನಾಕ್ಕೆ ಹಿಜ್ರತ್ ಮಾಡಬೇಕೆಂಬ ಆಜ್ಞೆ ಬಂತು.

ಸುಹೈಬ್‌ರ ಹಿಜ್ರತ್‌ನಲ್ಲಿ ಕೂಡಾ ತೌಹೀದ್‌ನ ವಾಹಕರಿಗೆ ಅತ್ಯುತ್ತಮ ಪಾಠವಿದೆ. ಅವರು ತನ್ನ ಸರಕು ಸರಂಜಾಮುಗಳೊಂದಿಗೆ ಹೊರಡಲು ಸಿದ್ಧತೆ ನಡೆಸುತ್ತಿದ್ದಾಗ ಈ ಸುದ್ದಿ ಹೇಗೋ ಮಕ್ಕಾದ ಮುಶ್ರಿಕರ ಕಿವಿಗೆ ಬಿತ್ತು. ಅವರು ಓಡೋಡಿ ಬಂದು ಅವರನ್ನು ತಡೆಗಟ್ಟಿದರು. "ನೀನು ಇಲ್ಲಿಗೆ ದರಿದ್ರನಾಗಿ ಕಂಗಾಲಾಗಿರುವ ಸ್ಥಿತಿಯಲ್ಲಿ ಬಂದಿದ್ದೆ. ಇಲ್ಲಿ ಬಹಳಷ್ಟು ಸಂಪಾದಿಸಿ ಶ್ರೀಮಂತನಾದೆ. ಈಗ ಅದನ್ನೆಲ್ಲ ಸಾಗಿಸಲು ಬಯಸುತ್ತೀಯಾ. ಖಂಡಿತ ನಾವು ಬಿಡಲಾರೆವು" ಎಂದು ಹೇಳಿದರು. ಸುಹೈಬ್ ಆ ಸಂದರ್ಭದಲ್ಲಿ ಬಹಳ ಧೈರ್ಯ ಸ್ಥೈರ್ಯ ಪ್ರದರ್ಶಿಸಿದರು. ಅವರು ಹೇಳಿದರು- ಓ ಕುರೈಶ್ ಬಾಂಧವರೇ! ಎಚ್ಚರಿಕೆ! ನಾನು ಬಾಣ ಎಸೆಯುವುದರಲ್ಲಿ ಮತ್ತು ಸರಿಯಾಗಿ ಗುರಿಗೆ ಹೊಡೆಯುವುದರಲ್ಲಿ ನಿಮ್ಮೆಲ್ಲರಿಗಿಂತ ನಿಪುಣನಾಗಿದ್ದೇನೆಂದು ನೀವು ಚೆನ್ನಾಗಿ ಬಲ್ಲಿರಿ. ದೇವನಾಣೆ! ನನ್ನ ಬತ್ತಳಿಕೆಯಲ್ಲಿರುವ ಬಾಣಗಳೆಲ್ಲ ಸಂಪೂರ್ಣವಾಗಿ ಮುಗಿಯುವ ವರೆಗೂ ನಿಮ್ಮನ್ನು ನನ್ನ ಹತ್ತಿರಕ್ಕೆ ಬರಲು ಬಿಡಲಾರೆ. ಬಾಣಗಳು ಮುಗಿದರೆ ಖಡ್ಗದಿಂದ ಹೋರಾಡುವೆನು. ಇನ್ನು ಕೇಳಿರಿ, ನೀವು ಕೇಳುವಂತೆ, ಒಂದು ವೇಳೆ ನನ್ನ ಸಂಪತ್ತೆಲ್ಲವನ್ನೂ ನಿಮಗೆ ಕೊಡುವುದಾದರೆ ನೀವು ನನ್ನನ್ನು ಹೋಗಲು ಬಿಡುವಿರಾ?" ಕುರೈಶರು ಅದಕ್ಕೆ ಒಪ್ಪಿದರು. ಸುಹೈಬರು ತನ್ನ ಎಲ್ಲ ಸಂಪತ್ತನ್ನೂ ತೊರೆದು ಬರಿಗೈಯಲ್ಲಿ ಮದೀನಾಕ್ಕೆ ತೆರಳಿದರು. ಸಕಲ ಸಿರಿ ಸಂಪತ್ತುಗಳಿಗಿಂತ ಅವರಿಗೆ ಅಲ್ಲಾಹನ ಮತ್ತು ಪ್ರವಾದಿಯ ಆಜ್ಞೆಯೇ ಮುಖ್ಯವಾಗಿತ್ತು.

ಸುಹೈಬರು ಮದೀನಾಕ್ಕೆ ತಲುಪಿದಾಗ ತುಂಬಾ ಬಳಲಿದ್ದರು. ಹಸಿವೂ ಚೆನ್ನಾಗಿತ್ತು. ಅಲ್ಲದೆ ಒಂದು ಕಣ್ಣಿನಲ್ಲಿ ನೋವು ಕಾಣಿಸಿಕೊಂಡಿತ್ತು. ಪ್ರವಾದಿಯವರು(ಸ) ಸಹಾಬಿಗಳ ಜೊತೆ ಖರ್ಜೂರ ತಿನ್ನುತ್ತಿದ್ದರು. ಸುಹೈಬರಿಗೆ ಹಸಿವು ತಡೆಯಲಾಗಲಿಲ್ಲ. ಖರ್ಜೂರಕ್ಕೆ ಕೈ ಹಾಕಿ ತಿನ್ನ ತೊಡಗಿದರು. ಆಗ ಉಮರ್‌ರವರು ಪ್ರವಾದಿಯವರನ್ನುದ್ದೇಶಿಸಿ, ಪ್ರವಾದಿವರ್ಯರೇ, ಸುಹೈಬರನ್ನು ನೋಡಿ. ಅವರ ಕಣ್ಣಲ್ಲಿ ನೋವುಂಟಾಗಿದೆ. ಅವರು ಖರ್ಜೂರ ತಿನ್ನುತ್ತಿದ್ದಾರೆ ಎಂದರು. ಸುಹೈಬ್ ತುಂಬಾ ರಸಿಕರಾಗಿದ್ದರಷ್ಟೆ. ಅವರು ಕೂಡಲೇ, ನಾನು ನನ್ನ ಆರೋಗ್ಯವಂತ ಕಣ್ಣಿನ ಕಡೆಯಿಂದ ತಿನ್ನುತ್ತಿದ್ದೇನೆ ಎಂದು ಬಿಟ್ಟರು. ಅವರ ಈ ಹಠಾತ್ ಉತ್ತರದಿಂದ ಪ್ರವಾದಿ(ಸ) ನಕ್ಕು ಬಿಟ್ಟರು. ಖರ್ಜೂರ ತಿಂದಾದ ಬಳಿಕ ಅವರು ತನ್ನ ಆತ್ಮಕತೆಯನ್ನು ಹೇಳ ತೊಡಗಿದರು. "ಕುರೈಶರು ನನ್ನನ್ನು

ಒಂಟಿಯೆಂದು ಭಾವಿಸಿ ತಡೆದಿರಿಸಿದ್ದರು. ನಾನು ನನ್ನ ಸಂಪತ್ತನ್ನೆಲ್ಲ ಬಿಟ್ಟುಕೊಟ್ಟು ಪಾರಾಗಿ ಬಂದೆ" ಎಂದಾಗ ಪ್ರವಾದಿ(ಸ) ಹೇಳಿದರು- "ನಿಮ್ಮ ಈ ವ್ಯಾಪಾರ ಬಹಳ ಲಾಭದಾಯಕವಾಗಿದೆ." ಆ ಸಂದರ್ಭದಲ್ಲಿ ಕುರ್‌ಆನಿನ ಈ ವಚನಗಳು ಅವತೀರ್ಣಗೊಂಡವು.

**"ಅಲ್ಲಾಹನ ಸಂಪ್ರೀತಿಯ ಆಕಾಂಕ್ಷೆಯಲ್ಲಿ ತನ್ನ ದೇಹವನ್ನು ಸವೆಸುವವರೂ ಇದ್ದಾರೆ. ಅಂತಹ ದಾಸರ ಮೇಲೆ ಅಲ್ಲಾಹ್ ಅತ್ಯಂತ ಕೃಪಾಳುವಾಗಿದ್ದಾನೆ." (ಪವಿತ್ರ ಕುರ್‌ಆನ್, 2:207)**

ವಾಸ್ತವದಲ್ಲಿ ಅಲ್ಲಾಹನ ಸಂಪ್ರೀತಿ ಮತ್ತು ಪ್ರವಾದಿಯ ಅನುಸರಣೆಯು ಸುಹೈಬ್‌ರ ಅತಿ ದೊಡ್ಡ ಬಂಡವಾಳವಾಗಿತ್ತು. ಆದ್ದರಿಂದಲೇ ತನ್ನ ಎರಡನೇ ವಾಸಸ್ಥಳವಾದ ಮಕ್ಕಾ ನಗರವನ್ನು ಅದಕ್ಕಾಗಿ ತೊರೆದರು. ಜೀವಮಾನದ ಆದಾಯವನ್ನು ಅದಕ್ಕಾಗಿಯೇ ಧಾರೆಯೆರೆದರು. ಘನ ಘೋರ ಯುದ್ಧಗಳಲ್ಲಿ ಜೀವದ ಹಂಗು ತೊರೆದು ಹೋರಾಡಿದರು. ಇಸ್ಲಾಮಿನ ಹಾದಿಯಲ್ಲಿ ನಡೆದ ಯುದ್ಧಗಳಲ್ಲೆಲ್ಲಾ ಪ್ರವಾದಿಯ ಜೊತೆಯಲ್ಲೇ ಇದ್ದರು. ಬಹಳ ಧೈರ್ಯದಿಂದ ಬಾಣಗಳನ್ನೆಸೆದು ತನ್ನ ಶೌರ್ಯ ಪ್ರದರ್ಶಿಸುತ್ತಿದ್ದರು. ವೃದ್ಧಾಪ್ಯದಲ್ಲಿ ಜನರನ್ನು ಸೇರಿಸಿ ತನ್ನ ಯುದ್ಧ ಕೌಶಲ್ಯಗಳನ್ನು ಅತ್ಯುತ್ಸಾಹದಿಂದ ವಿವರಿಸಿ ಹೇಳುತ್ತಿದ್ದರು. ನೀತಿ ನಡವಳಿಕೆಯಲ್ಲಿ ಪ್ರವಾದಿವರ್ಯರನ್ನು(ಸ) ಪೂರ್ಣವಾಗಿ ಅನುಕರಿಸುತ್ತಿದ್ದರು. ಬಡವರಿಗೆ ಸಹಾಯ ಮಾಡುವುದನ್ನು ಮತ್ತು ಅತಿಥಿ ಸತ್ಕಾರ ಮಾಡುವುದನ್ನು ನೋಡುವಾಗ ಅವರು ದುಂದುವೆಚ್ಚ ಮಾಡುತ್ತಿದ್ದಾರೋ ಎಂದು ಜನರು ಸಂಶಯ ತಾಳುವಷ್ಟು ಉದಾರಿಯಾಗಿದ್ದರು. ಒಮ್ಮೆ ಉಮರ್(ರ) ಟೀಕಿಸಿದಾಗ ಪ್ರವಾದಿವರ್ಯರ(ಸ) ಒಂದು ಮಾತನ್ನು ಅವರಿಗೆ ನೆನಪಿಸಿದರು- ನಿಮ್ಮ ಪೈಕಿ ಜನರಿಗೆ ಉಣಿಸುವವರು ಮತ್ತು ಸಲಾಮ್‌ಗೆ ಉತ್ತರಿಸುವವರೇ ಅತ್ಯುತ್ತಮರು."

ಸುಹೈಬರನ್ನು ಎಲ್ಲ ಸಹಾಬಿಗಳು ಬಹಳ ಗೌರವಾದರಗಳಿಂದ ಕಾಣುತ್ತಿದ್ದರು. ವಿಶೇಷವಾಗಿ ಉಮರ್‌ರವರಿಗೆ(ರ) ಅವರ ಬಗ್ಗೆ ಅಪಾರ ಗೌರವ ಭಾವನೆಯಿತ್ತು. ಅವರು ತನ್ನ ಮರಣದ ವೇಳೆ ಹೀಗೆ ಅಂತ್ಯೋಪದೇಶ ಮಾಡಿದರು. "ನನ್ನ ಜನಾಝಾ ನಮಾಝನ್ನು ಸುಹೈಬರೇ ನಿರ್ವಹಿಸಬೇಕು. ಯಾರಾದರೂ ಖಲೀಫರಾಗಿ ಆಯ್ಕೆಯಾಗುವ ವರೆಗೆ ಖಿಲಾಫತ್ ಮತ್ತು ಇಮಾಮತ್‌ನ ಹೊಣೆಯನ್ನು ಅವರೇ ವಹಿಸಲಿ." ಸುಹೈಬರು ಮೂರು ದಿನಗಳ ಕಾಲ ಈ ಹೊಣೆಗಾರಿಕೆಯನ್ನು ಸುಸೂತ್ರವಾಗಿ ನಿರ್ವಹಿಸಿದರು. ಅಲ್ಲಾಹನು ಅವರ ಮೇಲೆ ಕರುಣೆ ತೋರಲಿ ಮತ್ತು ಅವರ ಪಾದಪಥಗಳನ್ನು ಅನುಸರಿಸಿ ಜೀವಿಸುವ ಸೌಭಾಗ್ಯವನ್ನು ದಯಪಾಲಿಸಲಿ.

# ಜಅ್‌ಫರ್ ತಯ್ಯಾರ್(ರ)

ಅಬೂತಾಲಿಬ್‌ರ ಪುತ್ರ ಜಅ್‌ಫರ್ ತಯ್ಯಾರ್(ರ) ಅಲೀಯವರ ನೇರ ಸಹೋದರ ರಾಗಿದ್ದರು. ಪ್ರವಾದಿ ಮುಹಮ್ಮದ್‌ರವರ(ಸ) ಪಿತೃಸಹೋದರ ಪುತ್ರ. ಪ್ರವಾದಿವರ್ಯರು(ಸ) ತಂದೆ ತಾಯಿ ಹಾಗೂ ಪಿತಾಮಹ ಅಬ್ದುಲ್ ಮುತ್ತಲಿಬ್‌ರ ಮರಣದ ಬಳಿಕ ಚಿಕ್ಕಪ್ಪ ಅಬೂತಾಲಿಬರ ಮನೆಯಲ್ಲೇ ವಾಸವಾಗಿದ್ದರು. ಆದ್ದರಿಂದ ಪ್ರವಾದಿವರ್ಯರೊಂದಿಗೆ(ಸ) ಅಲೀ ಮತ್ತು ಜಅ್‌ಫರ್‌ರಿಗೂ ಪ್ರವಾದಿವರ್ಯರಿಗೆ(ಸ) ಇವರೊಂದಿಗೂ ಬಹಳ ಪ್ರೀತಿಯಿತ್ತು. ಯಾವಾಗಲೂ ಒಟ್ಟೊಟ್ಟಿಗೇ ಇರುತ್ತಿದ್ದರು. ಅದರಿಂದಾಗಿ ಪರಸ್ಪರ ಗುಣ ಸ್ವಭಾವಗಳನ್ನು ಚೆನ್ನಾಗಿ ಅರಿತಿದ್ದರು. ಜಅ್‌ಫರ್‌ರ ಒಳ್ಳೆಯ ಗುಣಗಳಿಂದಾಗಿ ಪ್ರವಾದಿವರ್ಯರು(ಸ) ಅವರನ್ನು ತುಂಬಾ ಪ್ರೀತಿಸುತ್ತಿದ್ದರು. ಕೇವಲ ಚಿಕ್ಕಪ್ಪನ ಪುತ್ರ ಎಂಬ ಕಾರಣಕ್ಕೆ ಆಗಿರಲಿಲ್ಲ.

ಪ್ರವಾದಿ(ಸ) ಇಸ್ಲಾಮಿನ ಸಂದೇಶವನ್ನು ಪ್ರಥಮ ಬಾರಿ ಕುಟುಂಬದವರ ಮುಂದಿಟ್ಟಾಗ ಅದೇ ಸಭೆಯಲ್ಲಿ ಅಲೀಯವರು ಇಸ್ಲಾಮ್ ಸ್ವೀಕರಿಸಿದರು. ಒಂದು ದಿನ ಅಲೀಯವರು ಪ್ರವಾದಿಯವರೊಂದಿಗೆ(ಸ) ಆರಾಧನೆಯಲ್ಲಿ ನಿರತರಾಗಿದ್ದಾಗ, ಅಬೂತಾಲಿಬರು ಜಅ್‌ಫರ್ ರೊಂದಿಗೆ ಆ ಕಡೆ ಬಂದರು. ಪುತ್ರ ಮತ್ತು ಭ್ರಾತೃಜ(ಸ) ಭಯಭಕ್ತಿಯೊಂದಿಗೆ ಆರಾಧಿಸುವುದನ್ನು ಕಂಡು ಬಹಳ ಪ್ರಭಾವಿತರಾದರು. ಅವರು ಜಅ್‌ಫರ್‌ರೊಡನೆ, ನೀನೂ ಹೋಗಿ ಸೇರಿಕೋ ಎಂದು ಹೇಳಿದರು. ಇದನ್ನು ಕೇಳಿದ ಕೂಡಲೇ ಅವರು ಪ್ರವಾದಿವರ್ಯರ(ಸ) ಎಡಭಾಗದಲ್ಲಿ ನಿಂತು ಆರಾಧನೆಗೆ ತೊಡಗಿದರು. ಪ್ರಥಮ ಬಾರಿಯ ಆರಾಧನೆಯಲ್ಲೇ ಅವರ ಆಸಕ್ತಿ ಕೆರಳಿತು. ಅನಂತರ ತನ್ನ ಹಿಂದಿನ ಬದುಕಿನತ್ತ ತಿರುಗಿಯೂ ನೋಡಲಿಲ್ಲ. ಅಲ್ಲಾಹನ ಏಕತೆ ಮತ್ತು ಪ್ರವಾದಿಯವರ ಸಂದೇಶ ವಾಹಕತ್ವವನ್ನು ಮನಸಾರೆ ಅಂಗೀಕರಿಸಿದರು.

ಆ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸುವುದು ಬಹಳ ಅಪಾಯಕಾರಿಯಾಗಿತ್ತು. ಮಕ್ಕಾದ ಸತ್ಯನಿಷೇಧಿಗಳು ಇಸ್ಲಾಮ್ ಸ್ವೀಕರಿಸಿದ "ಅಪರಾಧ"ಕ್ಕಾಗಿ ದೊಡ್ಡ ದೊಡ್ಡ ವ್ಯಕ್ತಿಗಳನ್ನು ಬಿಡದೆ ಹಿಂಸಿಸುತ್ತಿದ್ದರು. ಅಬೂತಾಲಿಬ್ ಬದುಕಿದ್ದಷ್ಟು ಕಾಲ ತನ್ನ ಮೃದು ನೀತಿ ಮತ್ತು ವ್ಯಕ್ತಿ ಪ್ರಭಾವದಿಂದಾಗಿ ಕುರೈಶರ ವಿರೋಧವನ್ನು ತಡೆಗಟ್ಟುತ್ತಿದ್ದರು. ಆದರೆ ಅವರ ಮರಣದ ನಂತರ

ಕುರೈಶರಿಗೆ ಯಾರ ಭಯವೂ ಇರಲಿಲ್ಲ. ಅವರು ಹಿಂಸೆ-ದೌರ್ಜನ್ಯಗಳನ್ನು ಇಮ್ಮಡಿಗೊಳಿಸಿದರು. ಜಲ್‌ಫರ್ ಕೂಡಾ ಅವರಿಂದ ಪಾರಾಗಲಿಲ್ಲ. ಕುರೈಶರ ಅತಿರೇಕಗಳು ಮಿತಿ ಮೀರುವುದನ್ನು ಕಂಡ ಪ್ರವಾದಿಯವರು(ಸ), ಮುಸ್ಲಿಮರಿಗೆ ಅಬಿಸೀನಿಯಾಕ್ಕೆ ಹಿಜ್ರತ್ ಮಾಡಲು (ವಲಸೆ ಹೋಗಲು) ಆದೇಶಿಸಿದರು. ಆ ಪ್ರಕಾರ ಮುಸ್ಲಿಮರ ಒಂದು ತಂಡವು ಅಬಿಸೀನಿಯಾಕ್ಕೆ ವಲಸೆ ಹೋಯಿತು. ಜಲ್‌ಫರ್ ಕೂಡಾ ಆ ತಂಡದಲ್ಲಿದ್ದರು.

ಈ ತಂಡ ಅಬಿಸಿನೀಯಾಕ್ಕೆ ತಲಪಿದ ಕೂಡಲೇ ಅವರ ಹಿಂದಿನಿಂದ ಕುರೈಶರ ತಂಡವೊಂದು ಅಲ್ಲಿಗೆ ತಲಪಿತು. ಅವರ ಉದ್ದೇಶ ಹಿಜ್ರತ್ ಮಾಡಿ ಬಂದವರನ್ನು ಮರಳಿ ಕೊಂಡೊಯ್ಯುವುದಾಗಿತ್ತು. ಸಾಕಷ್ಟು ಹಿಂಸೆ ನೀಡಿ ತಮ್ಮ ತೀಟೆಯನ್ನು ತೀರಿಸುವುದಾಗಿತ್ತು. ಅವರು ಅಲ್ಲಿನ ರಾಜ ನಜ್ಜಾಶಿಯ ಆಸ್ಥಾನಕ್ಕೆ ತೆರಳಿ ಆತನ ಮುಂದೆ ಹೀಗೆ ಬಿನ್ನವಿಸಿದರು. "ಓ ರಾಜರೇ! ನಮ್ಮ ನಾಡಿನ ಕೆಲವು ಬುದ್ಧಿಹೀನ ಯುವಕರು ತಮ್ಮ ಹಿರಿಯರ ಪರಂಪರಾಗತ ಧರ್ಮವನ್ನು ತೊರೆದು ಬೇರೆಯೇ ಧರ್ಮವನ್ನು ಸ್ವೀಕರಿಸಿದ್ದಾರೆ. ಅವರು ನಮ್ಮಲ್ಲಿಂದ ಪಲಾಯನ ಮಾಡಿ ಬಂದು ನಿಮ್ಮ ಆಶ್ರಯದಲ್ಲಿದ್ದಾರೆಂದು ತಿಳಿಯಿತು. ಅವರ ಹಿರಿಯರು ಮತ್ತು ಕುಟುಂಬಸ್ಥರು ಅವರನ್ನು ಮರಳಿ ಕರೆ ತರಬೇಕೆಂದು ನಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ. ಅವರನ್ನು ಕರೆದುಕೊಂಡು ಹೋಗಲು ತಾವು ದಯವಿಟ್ಟು ಅನುಮತಿ ನೀಡಬೇಕು."

ನಜ್ಜಾಶಿ ಬಹಳ ಧೀಮಂತ ಹಾಗೂ ಸದ್ಗುಣ ಸಂಪನ್ನ ವ್ಯಕ್ತಿಯಾಗಿದ್ದ. ಪ್ರಕರಣದ ಸಂಪೂರ್ಣ ತನಿಖೆ ನಡೆಸದೆ ಅವರನ್ನು ಮರಳಿಸುವುದು ಉಚಿತವಲ್ಲವೆಂದು ಆತ ಭಾವಿಸಿದ. ಆದ್ದರಿಂದ ಮುಸ್ಲಿಮರನ್ನು ತನ್ನ ಆಸ್ಥಾನಕ್ಕೆ ಕರೆಸಿದ. "ನೀವು ನಿಮ್ಮ ಹಿರಿಯರ ಧರ್ಮವನ್ನು ತೊರೆದು ಈಗ ಸ್ವೀಕರಿಸಿರುವ ಆ ಧರ್ಮ ಯಾವುದು" ಎಂದು ಆತ ಮುಸ್ಲಿಮರಲ್ಲಿ ವಿಚಾರಿಸಿದ. ಈ ಪ್ರಶ್ನೆಗೆ ಉತ್ತರಿಸಲು ಮುಸ್ಲಿಮರು ಜಲ್‌ಫರ್‌ರನ್ನು ತಮ್ಮ ಪ್ರತಿನಿಧಿಯಾಗಿ ಮಾಡಿದರು. ಜಲ್‌ಫರ್‌ರವರು ಮುಸ್ಲಿಮೇತರ ಬಾಂಧವರೇ ಇದ್ದ ಆ ತುಂಬಿದ ದರಬಾರಿನಲ್ಲಿ ಒಂದು ಭಾಷಣವನ್ನೇ ಮಾಡಿದರು. ಅದರಲ್ಲಿ ಅಂದಿನ ಸಮಾಜದ ಕುರಿತು ಅತ್ಯುತ್ತಮ ವಿಮರ್ಶೆ ಇತ್ತು. ಇಸ್ಲಾಮ್ ಎಂದರೇನು, ಅದರ ಬೇಡಿಕೆಗಳು ಯಾವುವು ಎಂಬುದೂ ಆ ಭಾಷಣದಿಂದ ವ್ಯಕ್ತವಾಗುತ್ತಿತ್ತು. ಭಾಷಣವು ಸಂಕ್ಷಿಪ್ತವಾಗಿದ್ದರೂ ಸಮಗ್ರವಾಗಿತ್ತು. ಅವರು ಹೀಗೆಂದರು-

ಮಹಾರಾಜಾ! ನಾವು ಬಹಳ ಅಜ್ಞಾನಿಗಳಾಗಿದ್ದೆವು. ವಿಗ್ರಹಗಳನ್ನು ಪೂಜಿಸುತ್ತಿದ್ದೆವು. ಸತ್ತ ಪ್ರಾಣಿಗಳನ್ನು ತಿನ್ನುತ್ತಿದ್ದೆವು. ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದೆವು. ನೆರೆಹೊರೆಯವರಿಗೆ ಕಿರುಕುಳ ಕೊಡುತ್ತಿದ್ದೆವು. ನಮ್ಮಲ್ಲಿನ ಬಲಾಢ್ಯರು ದುರ್ಬಲರನ್ನು ಶೋಷಿಸುತ್ತಿದ್ದರು. ನಮ್ಮ ಸಂಬಂಧಿಕರ ಹಕ್ಕುಗಳನ್ನು ಕಬಳಿಸುತ್ತಿದ್ದೆವು. ಈ ಎಲ್ಲ ಅಪರಾಧಗಳನ್ನು ನಾವು ಹಗಲಿರುಳೆನ್ನದೆ ಮಾಡುತ್ತಿದ್ದೆವು. ಹೀಗಿರುವಾಗ, ಅಲ್ಲಾಹನು ನಮ್ಮ ಪೈಕಿಯವರೇ ಆದ ಒಬ್ಬ ವ್ಯಕ್ತಿಯನ್ನು ತನ್ನ ಸಂದೇಶವಾಹಕರಾಗಿ ಮಾಡಿ ನಮ್ಮ ಬಳಿಗೆ ಕಳಿಸಿದನು. ಅವರನ್ನು ನಾವು ಹಿಂದಿನಿಂದಲೂ ಬಲ್ಲವರಾಗಿದ್ದೆವು. ಅವರ ಸಂಪೂರ್ಣ ಬದುಕು ಮತ್ತು ಅವರ ಎಲ್ಲಾ ಚಲನವಲನಗಳು ನಮ್ಮ ಮುಂದಿದ್ದುವು. ಅವರು ಅತ್ಯಂತ ಪ್ರಾಮಾಣಿಕರೂ ಸತ್ಯಸಂಧರೂ ಆಗಿದ್ದರು. ಸಚ್ಚಾರಿತ್ರ್ಯವಂತರೂ

ಸದಾಚಾರಿಯೂ ಆಗಿದ್ದರು. ಜೀವಮಾನದಲ್ಲೆಂದೂ ಸುಳ್ಳು ಹೇಳಿದವರಲ್ಲ. ಅವರ ಗೌರವವನ್ನು ನಾವು ಚೆನ್ನಾಗಿ ಬಲ್ಲವರಾಗಿದ್ದೆವು. ಅವರು ನಮಗೆ ಒಳ್ಳೊಳ್ಳೆಯ ವಿಷಯಗಳನ್ನು ಬೋಧಿಸಿದರು. ಸೃಷ್ಟಿ ಪೂಜೆಯಿಂದ ತಡೆದರು. ತೌಹೀದ್(ಏಕದೇವತ್ವ)ನ ಶಿಕ್ಷಣ ನೀಡಿದರು. ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ಪಾಠ ಕಲಿಸಿದರು. ನೆರೆಹೊರೆಯವರನ್ನೂ ಸಂಬಂಧಿಕರನ್ನೂ ಪ್ರೀತಿಸಲು ಕಲಿಸಿದರು. ಸುಳ್ಳು ಹೇಳಬಾರದು, ನಿರಪರಾಧಿಗಳ ರಕ್ತ ಹರಿಸಬಾರದು, ಅನಾಥರ ಸೊತ್ತು ತಿನ್ನಬಾರದು. ಸಚ್ಚರಿತ ಹೆಂಗಸರ ಮೇಲೆ ವ್ಯಭಿಚಾರದ ಆರೋಪ ಹೊರಿಸಬಾರದು, ಮೂರ್ತಿ ಪೂಜೆಯನ್ನು ತೊರೆಯಬೇಕು. ಏಕದೇವನ ಮೇಲೆ ವಿಶ್ವಾಸವಿರಿಸಬೇಕು. ನಮಾಝ್ ಮಾಡಬೇಕು, ಝಕಾತ್ ಕೊಡಬೇಕು ಎಂಬಿತ್ಯಾದಿ ವಿಷಯಗಳನ್ನು ಅವರು ನಮಗೆ ಬೋಧಿಸಿದರು.

ನಾವು ಅವರ ಮೇಲೆ ವಿಶ್ವಾಸವಿರಿಸಿದೆವು. ಅವರ ಬೋಧನೆಯಂತೆ ನಡೆದೆವು. ಸೃಷ್ಟಿ ಪೂಜೆಯನ್ನು ತೊರೆದೆವು. ಕೇವಲ ಏಕದೇವನನ್ನು ಆರಾಧಿಸತೊಡಗಿದೆವು. ಹಲಾಲ್ ಹರಾಮ್ (ಧರ್ಮಬದ್ಧ-ನಿಷಿದ್ಧ)ನ ವ್ಯತ್ಯಾಸವನ್ನು ತಿಳಿದುಕೊಂಡೆವು. ಅದರಿಂದಾಗಿ ನಮ್ಮ ಜನಾಂಗದವರು ನಮ್ಮ ವೈರಿಗಳಾದರು. ಅವರು ನಮ್ಮನ್ನು ತರತರವಾಗಿ ಪೀಡಿಸಿದರು, ಹಿಂಸಿಸಿದರು. ನಾವು ಪುನಃ ಅದೇ ಸೃಷ್ಟಿ ಪೂಜೆ ಮತ್ತು ಅಜ್ಞಾನ ಕಾಲದ ದುಷ್ಕೃತ್ಯಗಳ ಕಡೆಗೆ ಮರಳಬೇಕೆಂದು ಒತ್ತಾಯಿಸಿದರು. ಅವರ ಹಿಂಸೆ-ದೌರ್ಜನ್ಯಗಳು ಮಿತಿ ಮೀರಿದಾಗ ನಾವು ನಮ್ಮ ಪ್ರವಾದಿ ಹಾಗೂ ಸಂದೇಶವಾಹಕರ ಅಪ್ಪಣೆಯಂತೆ ತಮ್ಮ ಆಶ್ರಯದಲ್ಲಿ ಜೀವಿಸುವಂತಾಗಲು ಇಲ್ಲಿಗೆ ಬಂದೆವು.

ಈ ಭಾಷಣ ಕೇಳಿ ನಜ್ಜಾಶಿಯು, ನಿಮ್ಮ ಪ್ರವಾದಿಯ ಮೇಲೆ ಅವತೀರ್ಣಗೊಂಡಿರುವ ಗ್ರಂಥದಿಂದ ಸ್ವಲ್ಪ ಓದಿ ಕೇಳಿಸಿರಿ ಎಂದನು. ಜಅ್‌ಫರ್‌ರು ಕುರ್‌ಆನಿನ ಮರ್ಯಮ್ ಅಧ್ಯಾಯದ ಕೆಲವು ವಚನಗಳನ್ನು ಪಠಿಸಿದರು. ಅದನ್ನು ಆಲಿಸಿದ ನಜ್ಜಾಶಿ ತುಂಬಾ ಪ್ರಭಾವಿತನಾದ. "ದೇವನಾಣೆ! ಈ ವಾಣಿಯೂ ತೌರಾತ್‌ನ ವಚನಗಳೂ ಒಂದೇ ದೀಪದ ಬೆಳಕಾಗಿವೆ" ಎಂದು ಆತ ಉದ್ಗರಿಸಿದನು. ತರುವಾಯ ಕುರೈಶರೊಂದಿಗೆ, ದೇವನಾಣೆಗೂ ಇವರನ್ನು ನಾನು ನಿಮ್ಮ ವಶಕ್ಕೆ ಒಪ್ಪಿಸಲಾರೆ ಎಂದು ಬಿಟ್ಟನು.

ಈ ತಂತ್ರ ಫಲಿಸದೆ ಇದ್ದಾಗ ಕುರೈಶರು ಇನ್ನೊಂದು ಕುತಂತ್ರವನ್ನು ಹೂಡಿದರು. ಅವರು ಪುನಃ ರಾಜನ ಆಸ್ಥಾನಕ್ಕೆ ತೆರಳಿ, "ಮಹಾಪ್ರಭೂ! ಇವರು ಈಸಾರ ಬಗ್ಗೆ ಏನು ಹೇಳುತ್ತಿದ್ದಾರೆಂದು ನಿಮಗೆ ತಿಳಿದಿದೆಯೇ" ಎಂದು ಕೇಳಿದರು. ಈ ಪ್ರಶ್ನೆಗೆ ಉತ್ತರಿಸುವುದಕ್ಕೆ ಮುಂಚೆ ನಜ್ಜಾಶಿಯು ಮುಸ್ಲಿಮರನ್ನು ಪುನಃ ಆಸ್ಥಾನಕ್ಕೆ ಕರೆಸಿದನು. ಈ ಸಂದಿಗ್ಧ ಪರಿಸ್ಥಿತಿಯನ್ನು ಹೇಗೆ ಎದುರಿಸುವುದೆಂದು ಮುಸ್ಲಿಮರು ಆತಂಕಪಟ್ಟರು. ಏಕೆಂದರೆ ಕ್ರೈಸ್ತರು ಈಸಾರನ್ನು ದೇವಪುತ್ರನೆಂದು ನಂಬುತ್ತಾರೆ, ಆದರೆ ಇಸ್ಲಾಮ್ ಈ ನಂಬಿಕೆಯನ್ನು ಖಂಡಿಸುತ್ತದೆ. ಆದ್ದರಿಂದ ಸತ್ಯ ಹೇಳಿದರೆ ನಜ್ಜಾಶಿ ಎಲ್ಲಿ ಕೋಪಗೊಳ್ಳುವನೋ ಎಂದವರು ಭಯಪಟ್ಟರು. ಆದರೆ, ಏನೇ ಆಗಲಿ, ವಾಸ್ತವವನ್ನು ಇದ್ದಕ್ಕಿದ್ದಂತೆ ಪ್ರಸ್ತುತಪಡಿಸುವೆವು. ಈ ವಿಷಯದಲ್ಲೂ ಇಸ್ಲಾಮಿನ ನೈಜ ನಂಬಿಕೆಯನ್ನು ಜನರ ಮುಂದಿಡುವೆವು ಎಂದು ಜಅ್‌ಫರ್‌ರವರು ದಿಟ್ಟ ನಿರ್ಧಾರವನ್ನು ತಳೆದರು. ಅದರಂತೆ ಅವರು ಹೀಗೆ ಹೇಳಿದರು- "ನಾವು ಈಸಾರನ್ನು ದೇವನ ದಾಸ, ಆತನ

ಪ್ರವಾದಿ ಮತ್ತು ಅವನ ಆತ್ಮವೆಂದು ನಂಬುತ್ತೇವೆ." ಇದನ್ನು ಕೇಳಿದಾಗ ನಜ್ಜಾಶಿಯು ನೆಲದಿಂದ ಒಂದು ಹುಲ್ಲುಕಡ್ಡಿಯನ್ನು ಎತ್ತಿ ಹಿಡಿದು, ದೇವನಾಣೆ! ಈಸಾರ ಬಗ್ಗೆ ನೀವು ಏನು ಹೇಳಿದಿರೋ, ಈಸಾ ಈ ಹುಲ್ಲುಕಡ್ಡಿಯಷ್ಟೂ ಹೆಚ್ಚಿಲ್ಲ" ಎಂದು ಹೇಳಿದನು.

ಕುರೈಶರು ಪೆಚ್ಚು ಮೋರೆ ಹಾಕಿಕೊಂಡು ಮರಳಿದರು. ಜಲ್‌ಫರ್ ಇತರ ಮುಸ್ಲಿಮ ರೊಂದಿಗೆ ಅಬಿಸೀನಿಯಾದಲ್ಲೇ ಉಳಿದರು. ಅತ್ತ ಪ್ರವಾದಿವರ್ಯರು(ಸ) ಮಕ್ಕಾದಿಂದ ಮದೀನಾಕ್ಕೆ ಹಿಜ್ರತ್ ಮಾಡಿ ಹೋದರು. ಹಿ.ಶ. 7ರಲ್ಲಿ ಖೈಬರ್ ವಿಜಯವಾಯಿತು. ಆ ಸಂದರ್ಭದಲ್ಲಿ ಅಬಿಸೀನಿಯಾದಲ್ಲಿದ್ದ ಮುಸ್ಲಿಮ್ ತಂಡದವರೆಲ್ಲರೂ ಮದೀನಾಕ್ಕೆ ತೆರಳಿದರು. ಜಲ್‌ಫರ್‌ರನ್ನು ಕಂಡಾಗ ಪ್ರವಾದಿವರ್ಯರು(ಸ) ಅವರನ್ನು ಆಲಿಂಗಿಸಿದರು. ಅವರ ಹಣೆಯನ್ನು ಚುಂಬಿಸಿದರು. ಖೈಬರ್‌ನ ವಿಜಯಕ್ಕಿಂತಲೂ ಜಲ್‌ಫರ್‌ರ ಆಗಮನದಿಂದ ನನಗೆ ಸಂತೋಷ ವಾಗಿದೆಯೆಂದು ಪ್ರವಾದಿ(ಸ) ಹೇಳಿದರು. ಇದರಿಂದ ಪ್ರವಾದಿವರ್ಯರು(ಸ) ಜಲ್‌ಫರ್‌ರನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತಿದ್ದರೆಂದು ವ್ಯಕ್ತವಾಗುತ್ತದೆ.

ತರುವಾಯ ಹಿ.ಶ. 8ರಲ್ಲಿ ಮೂತಾ ಯುದ್ಧ ನಡೆಯಿತು. ಅದರಲ್ಲಿ ಮೂರು ಸಾವಿರ ಮುಸ್ಲಿಮ್ ಯೋಧರು ಒಂದು ಲಕ್ಷದಷ್ಟು ರೋಮನರನ್ನು ಎದುರಿಸಬೇಕಾಗಿತ್ತು. ಝೈದ್ ಬಿನ್ ಹಾರಿಸ ಸೇನಾಧಿಪತಿಯಾಗಿದ್ದರು. ಜಲ್‌ಫರ್ ಕೂಡಾ ಯುದ್ಧದಲ್ಲಿ ಭಾಗವಹಿಸಿದರು. ಝೈದ್ ಬಿನ್ ಹಾರಿಸ ಹುತಾತ್ಮರಾದಾಗ ಸೇನಾಧಿಪತಿಯ ಹೊಣೆಯನ್ನು ತಾನೇ ವಹಿಸಿದರು. ಇಸ್ಲಾಮಿ ಧ್ವಜವನ್ನು ಎತ್ತಿ ಹಿಡಿದು ಗನೀಮ್‌ನ ಪಂಕ್ತಿಗಳಿಗೆ ನುಗ್ಗಿ ಅವರನ್ನು ಬಹುದೂರ ತಳ್ಳಿ ಬಿಡುತ್ತಿದ್ದರು. ಆದರೆ ಕಾಲಾಳು ಪಡೆಯ ವೈರಿಗಳು ನಾಲ್ಕೂ ಕಡೆಯಿಂದ ಸುತ್ತುವರಿದರು. ಶರೀರವಿಡೀ ಗಾಯಗಳಿಂದ ಜರ್ಝರಿತವಾಗಿತ್ತು. ಎರಡೂ ಕೈಗಳು ಕಡಿದು ಬಿದ್ದಿದ್ದುವು. ಒಂದು ಕೈ ಕಡಿಯಲ್ಪಟ್ಟಾಗ ಧ್ವಜವನ್ನು ಇನ್ನೊಂದು ಕೈಯಲ್ಲಿ ಹಿಡಿದರು. ಆ ಕೈಯೂ ತುಂಡಾಗಿ ಬಿದ್ದಾಗ ಎದೆಗುಂದದೆ ಧ್ವಜವನ್ನು ಎದೆಗೆ ಆನಿಸಿ ಹಿಡಿದು ಶೌರ್ಯ ಪ್ರದರ್ಶನ ಮಾಡಿದರು. ಅದೇ ಸ್ಥಿತಿಯಲ್ಲಿ ರೋಮನ್ನರು ಅವರನ್ನು ವಧಿಸಿದರು. ಆ ಯುದ್ಧದಲ್ಲಿ ಪಾಲ್ಗೊಂಡಿದ್ದ ಅಬ್ದುಲ್ಲಾ ಬಿನ್ ಉಮರ್ ಹೇಳುತ್ತಾರೆ. ನಾನು ಜಲ್‌ಫರ್‌ರ ಮೃತದೇಹವನ್ನು ಹುಡುಕಿದೆ. ಅವರ ದೇಹದ ಮುಂಭಾಗದಲ್ಲಿ 50 ಗಾಯಗಳಿದ್ದವು. ಇಡೀ ಶರೀರದಲ್ಲಿ 90 ಗಾಯಗಳಿರುವುದು ಕಂಡು ಬಂತು. ಆದರೆ ಅವರ ಬೆನ್ನಿನ ಭಾಗದಲ್ಲಿ ಒಂದು ಗಾಯವೂ ಇರಲಿಲ್ಲ.

ಪ್ರವಾದಿವರ್ಯರಿಗೆ(ಸ) ಈ ಯುದ್ಧದ ವೃತ್ತಾಂತವನ್ನು ಜಿಬ್ರೀಲ್(ಅ) ಮುಟ್ಟಿಸಿದರು. ಪ್ರವಾದಿವರ್ಯರ(ಸ) ಕಣ್ಣುಗಳಿಂದ ಅಶ್ರುಧಾರೆ ಹರಿಯಿತು. ಅಲ್ಲಾಹನು ಜಲ್‌ಫರ್‌ರ ಕಡಿದ ಎರಡು ತೋಳುಗಳ ಬದಲಿಗೆ ಹೊಸ ತೋಳುಗಳನ್ನು ಪ್ರದಾನ ಮಾಡಿದನೆಂದೂ ಅವುಗಳ ಮೂಲಕ ಅವರು ದೇವಚರರ ಜೊತೆಯಲ್ಲಿ ಸ್ವರ್ಗದಲ್ಲಿ ಹಾರಾಡುತ್ತಾ ಇದ್ದಾರೆಂದೂ ಜಿಬ್ರೀಲ್ ತಿಳಿಸಿದರು. ಹಾರಾಡುವವರನ್ನು ಅರಬಿ ಭಾಷೆಯಲ್ಲಿ "ತಯ್ಯಾರ್" ಎಂದು ಕರೆಯುತ್ತಾರೆ. ಅದರಿಂದಾಗಿಯೇ ಅವರಿಗೆ "ಜಲ್‌ಫರ್ ತಯ್ಯಾರ್" ಎಂಬ ಬಿರುದು ಲಭಿಸಿದ್ದು. ಅದೇ ಹೆಸರಿನಿಂದ ಅವರು ಪ್ರಸಿದ್ಧರಾದರು.

ಜಲ್‌ಫರ್‌ರಲ್ಲಿ ಶೌರ್ಯ, ಪರಾಕ್ರಮಗಳಲ್ಲದೆ ಇನ್ನೂ ಅನೇಕ ಬಗೆಯ ಒಳ್ಳೆಯ ಗುಣಗಳಿದ್ದುವು. ಬಾಲ್ಯದಿಂದಲೇ ಪ್ರವಾದಿವರ್ಯರ(ಸ) ಒಡನಾಟದಲ್ಲಿದ್ದುದರಿಂದ ಇಸ್ಲಾಮಿನ ಎಲ್ಲ ಬೇಡಿಕೆಗಳನ್ನು ಅರಿತಿದ್ದರು. ಬದುಕಿನ ಎಲ್ಲ ರಂಗಗಳಲ್ಲೂ ಎಲ್ಲ ವಿಷಯಗಳಲ್ಲೂ ಅವರು ಅಲ್ಲಾಹನ ಮತ್ತು ಪ್ರವಾದಿಯ ಅನುಸರಣೆಗೆ ಆದ್ಯತೆ ನೀಡುತ್ತಿದ್ದರು. ಆದ್ದರಿಂದಲೇ ಅವರು ಹಿರಿಯ ಸಹಾಬಿಗಳ ಸಾಲಿನಲ್ಲಿ ಸೇರಿದ್ದಾರೆ. ಅಬೂಹುರೈರಾ (ರ) ಹೇಳುತ್ತಾರೆ. ನಾನು ಹಸಿವಿನ ಬೇಗೆಯಿಂದಾಗಿ ಹೆಚ್ಚಾಗಿ ಹೊಟ್ಟೆಗೆ ಕಲ್ಲು ಕಟ್ಟುತ್ತಿದ್ದೆ. ಕುರ್‌ಆನ್ ಕಂಠಪಾಠವಿದ್ದರೂ ನನ್ನನ್ನು ಯಾರಾದರೂ ಮನೆಗೆ ಕೊಂಡು ಹೋಗಿ ಉಪಚರಿಸಲೆಂದು ಜನರಲ್ಲಿ ಕುರ್‌ಆನಿನ ಬಗ್ಗೆ ಕೇಳುತ್ತಾ ನಡೆಯುತ್ತಿದ್ದೆ. ಆದರೆ ಬಡವರ ಪಾಲಿಗೆ ಜಲ್‌ಫರ್‌ರಿಗಿಂತ ಉತ್ತಮ ವ್ಯಕ್ತಿ ಬೇರಾರೂ ಇರಲಿಲ್ಲ. ಅವರು ನಮ್ಮನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಏನಿರುತ್ತಿತ್ತೋ ಅದನ್ನು ಬಡಿಸುತ್ತಿದ್ದರು. ಅದರಲ್ಲೇನೂ ಸಂಕೋಚ ತೋರುತ್ತಿರಲಿಲ್ಲ. ಕೆಲವೊಮ್ಮೆ ತುಪ್ಪ ಅಥವಾ ಜೇನಿನ ಖಾಲಿ ಚೀಲಗಳನ್ನೇ ತಂದಿಡುತ್ತಿದ್ದರು. ನಾವು ಆ ಚೀಲಗಳನ್ನು ಹರಿದು ಅದನ್ನು ನೆಕ್ಕುತ್ತಿದ್ದೆವು. ಅವರು ಎಷ್ಟು ದೊಡ್ಡ ಉದಾರಿಯಾಗಿದ್ದರೆಂದು ಇದರಿಂದ ತಿಳಿಯಬಹುದು. ಅವರನ್ನು ಪ್ರವಾದಿ ವರ್ಯರು(ಸ) ಅಬುಲ್ ಮಸಾಕೀನ್ (ಬಡವರ ತಂದೆ) ಎಂದು ಕರೆಯುತ್ತಿದ್ದರು. ರೂಪ ಮತ್ತು ಗುಣಗಳಲ್ಲಿ ಜಲ್‌ಫರ್ ತಮ್ಮನ್ನು ಹೋಲುವುದಾಗಿಯೂ ಪ್ರವಾದಿ(ಸ) ಹೇಳುತ್ತಿದ್ದರು.

ಜಲ್‌ಫರ್‌ರ ಈ ಗುಣಗಳಿಂದಾಗಿಯೇ ಪ್ರವಾದಿವರ್ಯರು(ಸ) ಅವರನ್ನು ತಮ್ಮ 14 ಮಂದಿ ವಿಶಿಷ್ಟ ಸಹಾಬಿಗಳಲ್ಲೊಬ್ಬರಾಗಿ ಪರಿಗಣಿಸಿದ್ದರು. ಜಲ್‌ಫರ್‌ರ ಪುತ್ರ ಅಬ್ದುಲ್ಲಾ ಹೇಳುತ್ತಾರೆ. ನಾನು ಕೆಲವೊಮ್ಮೆ ನನ್ನ ಚಿಕ್ಕಪ್ಪ ಅಲೀಯವರಲ್ಲಿ ಏನಾದರೂ ಕೇಳಿದರೆ ಅವರು ಕೊಡುತ್ತಿರಲಿಲ್ಲ. ಆದರೆ ತಂದೆಯ ಹೆಸರು ಹೇಳಿ ಕೇಳಿದರೆ ಕೂಡಲೇ ಕೊಡುತ್ತಿದ್ದರು. ನಿರಾಕರಿಸುತ್ತಿರಲಿಲ್ಲ. ಜಲ್‌ಫರ್‌ರ ಜೀವನದಲ್ಲಿ ಅಲ್ಲಾಹನ ದಾಸರಿಗೆ ಅತ್ಯುತ್ತಮ ಪಾಠಗಳಿವೆ.

# ಅಬೂ ಉಬೈದಾ ಬಿನ್ ಜರ್ರಾಹ್(ರ)

ಅಬೂ ಉಬೈದಾ ಬಿನ್ ಜರ್ರಾಹ್(ರ) ಪ್ರವಾದಿಯವರಿಂದ(ಸ) ಈ ಲೋಕದಲ್ಲೇ ಸ್ವರ್ಗದ ಸುವಾರ್ತೆಯನ್ನು ಕೇಳಿಸಿಕೊಂಡ ಹಿರಿಯ ಸಹಾಬಿಗಳಲ್ಲೊಬ್ಬರಾಗಿದ್ದಾರೆ. ಅವರಿಗೆ ಪ್ರವಾದಿ(ಸ) ನೀಡಿದ ವಿಶೇಷತೆ, ಅವರು "ಸಮುದಾಯದ ಸಂರಕ್ಷಕ"ನೆಂದಾಗಿತ್ತು. ಅಲ್ಲಾಹ್ ಮತ್ತು ಪ್ರವಾದಿಯವರು(ಸ) ಅವರನ್ನು ಪ್ರೀತಿಸಲು ಮತ್ತು ಇಹ-ಪರಲೋಕಗಳ ವಿಜಯವು ಅವರಿಗೆ ಒಲಿಯಲು ಅವರಲ್ಲಿದ್ದ ಗುಣ ವಿಶೇಷತೆಗಳೇನೆಂಬುದನ್ನು ನೋಡೋಣ.

ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆ ಅಬೂ ಉಬೈದಾ ಅಬೂಬಕರ್‌ರವರ ಆಪ್ತ ಸ್ನೇಹಿತರಾಗಿದ್ದರು. ಅಬೂಬಕರ್‌ರಿಗೆ ಇಸ್ಲಾಮಿನ ಸೌಭಾಗ್ಯ ದೊರೆತ ಕೂಡಲೇ ಅವರು ತನ್ನ ಎಲ್ಲ ಗೆಳೆಯರಿಗೂ ಇಸ್ಲಾಮಿನ ಸಂದೇಶವನ್ನು ಮುಟ್ಟಿಸಿದರು. ಬುದ್ಧಿಶಾಲಿಗಳೂ ಪ್ರಜ್ಞಾವಂತರೂ ಆಗಿದ್ದ ಅವರ ಸ್ನೇಹಿತರ ಪೈಕಿ ಯಾರೂ ಇಸ್ಲಾಮಿನ ಅನುಗ್ರಹದಿಂದ ವಂಚಿತರಾಗಲಿಲ್ಲ. ಝುಬೈರ್, ತಲ್ಹಾರಂತಹ ಯೋಧರು, ಅಬ್ದುರ್ರಹ್ಮಾನ್ ಬಿನ್ ಔಫ್‌ರಂತಹ ಸಲಹೆಗಾರರು, ಸಅದ್ ಬಿನ್ ಅಬೀ ವಕ್ಕಾಸ್‌ರಂತಹ ಚುರುಕುಳ್ಳವರು, ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅಬೂ ಉಬೈದಾರಂತಹ ಪ್ರತಿಷ್ಠಿತರು ಅಬೂಬಕರ್‌ರ ಸಂದೇಶ ಪ್ರಚಾರದಿಂದ ಪ್ರಭಾವಿತರಾಗಿ ಇಸ್ಲಾಮ್ ಸ್ವೀಕರಿಸಿದರು. ಇಸ್ಲಾಮ್ ಸ್ವೀಕರಿಸುವವರಲ್ಲಿ ಅಬೂ ಉಬೈದಾ ಪ್ರಥಮರಲ್ಲಿ ಸೇರುತ್ತಾರೆ. ಪ್ರಥಮರೆಂದರೆ ಆರಂಭ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿ ಮಕ್ಕಾದ ಮುಶ್ರಿಕರ ನಿರ್ದಯ ಹಿಂಸೆ-ದೌರ್ಜನ್ಯಗಳನ್ನು ಸಹಿಸುತ್ತಾ ಬಂದವರು. ಅಬೂ ಉಬೈದಾ ಕೂಡಾ ಇಸ್ಲಾಮಿಗಾಗಿ ಸರ್ವ ತ್ಯಾಗಗಳನ್ನೂ ಕಷ್ಟ ನಷ್ಟಗಳನ್ನೂ ಧೈರ್ಯವಾಗಿ ಸಹಿಸುತ್ತಾ ಬಂದವರು. ಮನೆ, ಊರು, ಕುಟುಂಬ, ಸಿರಿ ಸಂಪತ್ತು ಎಲ್ಲವನ್ನೂ ಅವರಿಗೆ ಕೈಬಿಡಬೇಕಾಗಿ ಬಂತು. ಅಬಿಸೀನಿಯಾಕ್ಕೆ ಎರಡು ಬಾರಿ ಹಿಜ್ರತ್ ಮಾಡಿ ಹೋದರು. ಮೂರನೆ ಬಾರಿ ಮದೀನಾಕ್ಕೆ ವಲಸೆ ಹೋದರು.

ಮದೀನಾಕ್ಕೆ ಹೋದ ಮುಸ್ಲಿಮರನ್ನು ನೆಮ್ಮದಿಯಿಂದ ಬದುಕಲು ಮಕ್ಕಾದ ಮುಶ್ರಿಕರು ಬಿಡಲಿಲ್ಲ. ಬದ್ರ್ ಯುದ್ಧ ನಡೆದಾಗ ಅಬೂ ಉಬೈದಾ ಪ್ರವಾದಿವರ್ಯರ(ಸ) ಜತೆ ಇಸ್ಲಾಮಿ ಸೇನೆಯಲ್ಲಿದ್ದು ವೀರಾವೇಶದಿಂದ ಹೋರಾಡಿದರು. ಅವರ ತಂದೆ ಸತ್ಯನಿಷೇಧಿಗಳ ಜೊತೆಗಿದ್ದರು.

ಯುದ್ಧ ಆರಂಭವಾದಾಗ ಅವರ ತಂದೆ ಅವರ ಮೇಲೆ ಗುರಿಯಿಟ್ಟು ಬಾಣ ಎಸೆಯ ತೊಡಗಿದನು. ತಂದೆಯನ್ನು ಗೌರವಿಸಿ ಅಬೂ ಉಬೈದಾ ಸ್ವಲ್ಪ ಹೊತ್ತು ಪ್ರತಿಕ್ರಿಯಿಸದೆ ಬದಿಗೆ ಸರಿದು ನಿಂತರು. ಆದರೆ ಆತ ಹಿಂಜರಿಯುವ ಲಕ್ಷಣ ಗೋಚರಿಸದೆ ಇದ್ದಾಗ ಒಂದೇ ಏಟಿಗೆ ಅವನ ಕತೆ ಮುಗಿಸಿದರು. ಧರ್ಮದೊಂದಿಗಿನ ಸಂಬಂಧವು ತಾಯಿ, ತಂದೆ, ಸಹೋದರ-ಸಹೋದರಿಯರು, ಜನಾಂಗ, ದೇಶ ಎಂಬ ಎಲ್ಲ ಸಂಬಂಧಗಳನ್ನು ಪರಕೀಯಗೊಳಿಸುತ್ತದೆ. ಮನುಷ್ಯನು ಎಲ್ಲೆಡೆಯಿಂದಲೂ ಮುಖ ತಿರುಗಿಸಿ ಕೇವಲ ಅಲ್ಲಾಹನ ದಾಸನಾಗಿ ಬಿಡುತ್ತಾನೆ. ಅಂತಹವರ ಈಮಾನ್‌ನ ಕುರಿತೇ ಪವಿತ್ರ ಕುರ್‌ಆನ್ ಹೀಗೆ ಹೇಳಿದೆ.

**"ಅಲ್ಲಾಹ್ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸುವವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ವಿರೋಧಿಸಿದವರನ್ನು ಪ್ರೀತಿಸುವುದನ್ನು ನೀವೆಂದೂ ಕಾಣಲಾರಿರಿ. ಅಂತಹವರು ಅವರ ತಂದೆ, ಪುತ್ರರು, ಸಹೋದರರು ಮತ್ತು ಆಪ್ತ ಬಂಧುಗಳೇ ಆಗಿದ್ದರೂ ಸರಿಯೆ." (ಪವಿತ್ರ ಕುರ್‌ಆನ್, 58:22)**

ತದನಂತರ ಉಹುದ್ ಯುದ್ಧ ನಡೆಯಿತು. ಅದರಲ್ಲಿ ಪ್ರವಾದಿವರ್ಯರ(ಸ) ಮುಖಕ್ಕೆ ಪೆಟ್ಟಾಯಿತು. ಯುದ್ಧ ಕವಚದ ಎರಡು ಕೊಂಡಿಗಳು ತಲೆಗೆ ಹೊಕ್ಕಿತ್ತು. ಅಬೂ ಉಬೈದಾ ಅದನ್ನು ತನ್ನ ಹಲ್ಲಿನಿಂದ ಹಿಡಿದೆಳೆದರು. ಅವರ ಎರಡು ಹಲ್ಲುಗಳು ಕಿತ್ತು ಹೋದರೂ ಪ್ರವಾದಿಯವರ(ಸ) ಮೇಲಿನ ಅಪಾರ ಪ್ರೀತಿಯಿಂದ ತುಟಿ ಪಿಟಕ್ಕೆನ್ನಲಿಲ್ಲ. ಕೊಂಡಿಗಳನ್ನು ಹೊರ ತೆಗೆದೇ ಸುಮ್ಮನಾದರು.

ಬದ್ರ್, ಉಹುದ್ ಯುದ್ಧಗಳು ಮಾತ್ರವಲ್ಲ, ಇತರ ಎಲ್ಲ ಯುದ್ಧಗಳಲ್ಲೂ ಅವರು ಪ್ರವಾದಿವರ್ಯರ(ಸ) ಜೊತೆಯಲ್ಲೇ ಇರುತ್ತಿದ್ದರು. ಅತ್ಯಂತ ಪರಾಕ್ರಮ ಮೆರೆದು ವೈರಿಗಳ ವಿರುದ್ಧ ಹೋರಾಡಿದರು. ಯಾವೆಲ್ಲ ಕಾರ್ಯಾಚರಣೆಗಳಿಗಾಗಿ ಅವರನ್ನು ರವಾನಿಸಲಾಗುತ್ತಿತ್ತೋ ಅವೆಲ್ಲವನ್ನೂ ಅವರು ಸಸಂತೋಷ ಒಪ್ಪಿಕೊಂಡು ಬಹಳ ಚಾಣಾಕ್ಷತನದಿಂದ ಕೆಲಸ ನಿರ್ವಹಿಸುತ್ತಿದ್ದರು.

ಪ್ರವಾದಿ(ಸ) ಒಂದು ಕಾರ್ಯಾಚರಣೆಗಾಗಿ ಒಂದು ಸೇನಾ ತುಕಡಿಯನ್ನು ಅಮ್ರ್ ಬಿನ್ ಆಸ್‌ರ ನೇತೃತ್ವದಲ್ಲಿ ರವಾನಿಸಿದರು. ಅಲ್ಲಿಗೆ ತಲುಪಿದಾಗ ಅವರಿಗೆ ಹೆಚ್ಚುವರಿ ಸೈನಿಕರ ಅಗತ್ಯ ಕಂಡು ಬಂತು. ಅವರು ಪ್ರವಾದಿವರ್ಯರ(ಸ) ಸಹಾಯ ಕೇಳಿದರು. ಪ್ರವಾದಿವರ್ಯರು(ಸ) ಇನ್ನೂರು ಮಂದಿ ಯೋಧರನ್ನು ಅಬೂ ಉಬೈದಾರ ಜೊತೆಯಲ್ಲಿ ಕಳಿಸಿದರು. ಈ ಸಹಾಯಕ ಸೇನಾ ತಂಡದಲ್ಲಿ ಅಬೂಬಕರ್, ಉಮರ್‌ರಂತಹ ಹಿರಿಯ ಸಹಾಬಿಗಳೂ ಇದ್ದರು. ಈ ಸೇನೆಯು ಅಮ್ರ್ ಬಿನ್ ಆಸ್‌ರ ಸೇನೆಯೊಂದಿಗೆ ಹೋಗಿ ಸೇರಿದಾಗ ಸೇನಾ ನಾಯಕ ಯಾರಾಗ ಬೇಕೆಂಬ ಪ್ರಶ್ನೆ ಎದ್ದಿತು. ಅಬೂ ಉಬೈದಾರಿಗೆ ಹೋಲಿಸಿದರೆ ಅಮ್ರ್ ಬಿನ್ ಆಸ್ ಅದಕ್ಕೆ ಅರ್ಹರಾಗಿರಲಿಲ್ಲ. ಆದರೆ ಸಂದರ್ಭದ ಸಂಕೀರ್ಣತೆಯಿಂದಾಗಿ ಅಮ್ರ್ ಬಿನ್ ಆಸ್ ತಾನೇ ನಾಯಕನಾಗಬೇಕೆಂದು ಪಟ್ಟು ಹಿಡಿದರು. ಅಬೂ ಉಬೈದಾರವರು ಅವರ ನಾಯಕತ್ವವನ್ನು ಮನಸಾರೆ ಒಪ್ಪಿ ತನ್ನ ಉನ್ನತ ಗುಣವನ್ನು ಪ್ರದರ್ಶಿಸಿದರು.

ಪ್ರವಾದಿಯವರ(ಸ) ಸಾಂಗತ್ಯದಿಂದಾಗಿ ಅಬೂ ಉಬೈದಾ ಪುಟಕ್ಕಿಟ್ಟ ಚಿನ್ನದಂತಾದರು. ಅಬೂಬಕರ್ ಮತ್ತು ಉಮರ್‌ರ ಆಡಳಿತ ಕಾಲದಲ್ಲಿ ಅಬೂ ಉಬೈದಾ ದೊಡ್ಡ ದೊಡ್ಡ ಕಾರ್ಯಾಚರಣೆಗಳನ್ನು ಮಾಡಿ ವಿಜಯ ಸಾಧಿಸಿಕೊಟ್ಟಿದ್ದರು. ಆ ಕಾಲದಲ್ಲಿ ಸಿರಿಯಾದ ಮೇಲೆ ದಂಡೆತ್ತಿ ಹೋಗಬೇಕಾಗಿತ್ತು. ಡೆಮಾಸ್ಕಸ್, ಮಖಲ್, ಹುಮ್ಸ್, ಲಾದಕಿಯ, ಯರ್ಮೂಕ್ ಮತ್ತಿತರ ಕಡೆಗಳಲ್ಲಿ ಕ್ರೈಸ್ತ ಸೇನೆಗಳೊಂದಿಗೆ ಘನಘೋರ ಯುದ್ಧ ನಡೆಯಿತು. ಇತಿಹಾಸದ ಪುಟಗಳಲ್ಲಿ ಸುರಕ್ಷಿತವಾಗಿ ದಾಖಲಾಗಿರುವಂತೆ, ಈ ಕಾರ್ಯಾಚರಣೆಗಳಲ್ಲೆಲ್ಲ, ಅಬೂ ಉಬೈದಾ ಖಲೀಫರ ಅಪ್ಪಣೆ ಪ್ರಕಾರ ತನ್ನ ನಾಯಕತ್ವದ ಹೊಣೆಯನ್ನು ಸುಸೂತ್ರವಾಗಿ ನೆರವೇರಿಸಿದರು. ಉದಾ: ಯರ್ಮೂಕ್ ಯುದ್ಧದ ವೃತ್ತಾಂತವನ್ನು ಇಲ್ಲಿ ಕೊಡಲಾಗಿದೆ.

ಅಬೂ ಉಬೈದಾ ಕ್ರೈಸ್ತರಿಗೆ ಸೋಲಿನ ಮೇಲೆ ಸೋಲುಣಿಸುತ್ತಾ ಅವರ ಕೋಟೆ ಕೊತ್ತಳಗಳನ್ನು ವಶಪಡಿಸುತ್ತಾ ಮುಂದೆ ಸಾಗಿದರು. ರೋಮ್‌ನ ಚಕ್ರವರ್ತಿ ಹಿರ್ಕಲ್‌ನ ದೇಶದೊಳಕ್ಕೆ ನುಗ್ಗಿದಾಗ ಆತ ಎಲ್ಲ ಕ್ರೈಸ್ತ ಪ್ರಾಂತ್ಯಗಳಿಗೆ ಈ ಅಪಾಯದ ಕುರಿತು ಮುನ್ಸೂಚನೆ ನೀಡಿದ. ಆತನ ಕರೆಯಂತೆ ಎಲ್ಲ ಪ್ರಾಂತ್ಯಗಳ ಸೇನೆಗಳು ಒಂದೆಡೆ ಸೇರಿ, ಈ ಮುಸ್ಲಿಮರನ್ನು ನಮ್ಮ ದೇಶದಿಂದ ಹೊರ ಹಾಕಿಯೇ ವಿರಮಿಸುವೆವು ಎಂದು ಪ್ರತಿಜ್ಞೆ ಮಾಡಿದರು. ಈ ಸುದ್ದಿ ಅಬೂ ಉಬೈದಾರಿಗೆ ಸಿಕ್ಕಿದ ಕೂಡಲೇ ಅವರು ಹುಮ್ಸ್‌ನಲ್ಲಿ ಠಿಕಾಣಿ ಹೂಡಿ ತನ್ನ ಕೆಳ ಅಧಿಕಾರಿಗಳನ್ನು ಸೇರಿಸಿದರು. ಅನಂತರ ಸ್ಫೂರ್ತಿದಾಯಕವೂ ಆವೇಶಭರಿತವೂ ಆದ ಒಂದು ಭಾಷಣ ಮಾಡಿದರು. ತರುವಾಯ ಈ ಭಾರೀ ಸೈನ್ಯದ ವಿರುದ್ಧ ಕಾರ್ಯಾಚರಣೆ ಹೇಗೆ ಮಾಡುವುದೆಂಬ ಬಗ್ಗೆ ಸಮಾಲೋಚನೆ ನಡೆಯಿತು. ಓರ್ವ ಹಿರಿಯ ಅಧಿಕಾರಿ ಈ ರೀತಿ ಸಲಹೆ ನೀಡಿದರು. ಮಹಿಳೆಯರನ್ನು ಮಕ್ಕಳನ್ನು ನಗರದಲ್ಲಿ ಬಿಟ್ಟು ಸೇನೆಯನ್ನು ಎದುರಿಸಲು ಹೊರಡಬೇಕು. ಖಾಲಿದ್ ಬಿನ್ ವಲೀದ್ ಮತ್ತು ಅಮ್ರ್ ಬಿನ್ ಆಸ್‌ರಿಗೆ ಕೂಡಲೇ ಡೆಮಾಸ್ಕಸ್ ಮತ್ತು ಫೆಲೆಸ್ತೀನ್‌ಗೆ ತಲುಪುವಂತೆ ಪತ್ರ ಬರೆಯಬೇಕು.

ಹುಮ್ಸ್ ಆಗಷ್ಟೇ ಅಧೀನಗೊಂಡ ನಾಡಾಗಿತ್ತು. ಅಲ್ಲಿನ ಕ್ರೈಸ್ತ ಪ್ರಜೆಗಳು ಜಿಝಿಯಾ ಪಾವತಿಸಲು ಒಪ್ಪಿ ಶರಣಾಗತರಾಗಿದ್ದರು. ಆದರೆ ಯಾವ ವಿಷಯದಲ್ಲೂ ಪರಸ್ಪರರಿಗೆ ಅನುಭವವಿರಲಿಲ್ಲ. ಇನ್ನೋರ್ವ ಹಿರಿಯರ ಅಭಿಪ್ರಾಯ, ನಾವು ನಮ್ಮ ಮಕ್ಕಳು ಮರಿಗಳನ್ನು ಕ್ರೈಸ್ತರ ವಶಕ್ಕೆ ಬಿಟ್ಟು ಕೊಡಬಾರದು ಎಂದಾಗಿತ್ತು. ಆಗ ಮಹಾ ದಂಡ ನಾಯಕರಾದ ಅಬೂ ಉಬೈದಾ ಹೇಳಿದರು - "ಹಾಗಾದರೆ ನಾವು ಕ್ರೈಸ್ತರನ್ನು ಈಗಲೇ ನಮ್ಮ ನಾಡಿನಿಂದ ಹೊರ ಹಾಕೋಣ." ಇದನ್ನು ಕೇಳಿ ಶುರ್ಜೀಲ್ ಬಿನ್ ಹಸನ್ ಎದ್ದು ನಿಂತು ಹೇಳಿದರು - ದಂಡ ನಾಯಕರೇ! ಇಸ್ಲಾಮಿನ ದೃಷ್ಟಿಯಲ್ಲಿ ಇದು ಸ್ಪಷ್ಟ ವಚನೋಲ್ಲಂಘನೆಯಾಗಿದೆ. ಅದರ ಅಧಿಕಾರ ನಿಮಗಿಲ್ಲ."

ಈ ಅಪಾಯಕಾರಿ ಘಟ್ಟದಲ್ಲೂ ಸಮುದಾಯ ಸಂರಕ್ಷಕರಾದ ಅಬೂ ಉಬೈದಾ ಇಸ್ಲಾಮೀ ನಿಯಮಗಳಿಂದ ಎಳ್ಳಷ್ಟೂ ಸರಿಯಲಿಲ್ಲ. ತನ್ನ ತಪ್ಪನ್ನು ಒಪ್ಪಿಕೊಂಡರು. ಪರಸ್ಪರ ಸಮಾಲೋಚನೆಯ ಬಳಿಕ ಜಿಝಿಯಾದಿಂದ ಪಡೆದ ಎಲ್ಲ ಹಣವನ್ನೂ ನಗರದ ಕ್ರೈಸ್ತರಿಗೆ

ಮರಳಿಸುತ್ತಾ, "ಇದು ನಿಮ್ಮ ರಕ್ಷಣೆಗಾಗಿ ನಾವು ನಿಮ್ಮಿಂದ ಪಡೆದುದಾಗಿತ್ತು. ಆದರೆ ಈಗ ನಾವು ನಿಮ್ಮನ್ನು ರಕ್ಷಿಸುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಅದನ್ನು ಉಪಯೋಗಿಸುವ ಹಕ್ಕು ನಮಗಿಲ್ಲ" ಎಂದು ಹೇಳಿದರು. ವಿಜೇತ ಮುಸ್ಲಿಮರ ಸತ್ಯಸಂಧತೆ ಮತ್ತು ನ್ಯಾಯ ಪ್ರಿಯತೆಯನ್ನು ಕಂಡು ಹುಮ್ಸ್‌ನ ಕ್ರೈಸ್ತರು ಬಹಳ ಪ್ರಭಾವಿತರಾದರು. ಅವರು ಗೋಳಿಡುತ್ತಾ, "ದೇವನು ನಿಮ್ಮನ್ನು ನಮ್ಮಲ್ಲಿಗೆ ಮರಳಿ ತರಿಸಲಿ" ಎಂದು ಹೇಳಿದರು.

ಹುಮ್ಸ್ ಬಿಡುವ ಸುದ್ದಿ ಹಿರ್ಕಲ್ ಚಕ್ರವರ್ತಿಗೆ ತಲಪಿತು. ಇದರಿಂದ ರೋಮನ್ನರ ಧೈರ್ಯ ಇಮ್ಮಡಿಯಾಯಿತು. ಅವರು ಬಹು ದೊಡ್ಡ ಸೇನೆಯೊಂದಿಗೆ ಯರ್ಮೂಕ್‌ನಲ್ಲಿ ಜಮಾಯಿಸಿದರು. ಮುಸ್ಲಿಮರನ್ನು ಸಂಪೂರ್ಣವಾಗಿ ಸೋಲಿಸಿ ಅಪಾಯವನ್ನು ಎಂದೆಂದಿಗೂ ಕೊನೆಗೊಳಿಸುವುದು ಆತನ ಉದ್ದೇಶವಾಗಿತ್ತು. ಆದರೆ ಇಸ್ಲಾಮಿನ ಚಾರಿತ್ರ್ಯ ಮತ್ತು ಹೊಳೆಯುತ್ತಿದ್ದ ಮುಸ್ಲಿಮರ ಖಡ್ಗಗಳನ್ನು ಕಂಡಿದ್ದ ರೋಮನ್ನರು ಹೇಗಾದರೂ ಶಾಂತಿ ಸಂಧಾನ ವಾದರೆ ಚೆನ್ನಾಗಿತ್ತೆಂದು ಬಯಸಿದ್ದರು. ಅವರ ಪ್ರಯತ್ನಗಳಿಂದಾಗಿ ಜಾರ್ಜ್ ಎಂಬ ರೋಮನ್ ದೂತನೋರ್ವನು ಮಾತುಕತೆಗಾಗಿ ಇಸ್ಲಾಮೀ ಸೇನೆಯ ಬಳಿ ಬಂದನು. ಆತ ಮುಸ್ಲಿಮರನ್ನು ಹತ್ತಿರದಿಂದ ನೋಡಿದ. ಅಬೂ ಉಬೈದಾರನ್ನು ಭೇಟಿಯಾದ. ಸಂಧಾನದ ಮಾತುಕತೆಯ ವೇಳೆ ಧರ್ಮದ ಕುರಿತೂ ವಿಚಾರ ವಿನಿಮಯ ನಡೆಯಿತು. ಆತನಿಗೆ ಇಸ್ಲಾಮಿನ ಸತ್ಯತೆ ಮನವರಿಕೆ ಯಾಯಿತು. ಆತ ಮುಸ್ಲಿಮನಾದ. ಮುಸ್ಲಿಮನಾದ ಬಳಿಕ ಆತ ರೋಮನ್ ಸೇನೆಯ ಕಡೆಗೆ ಮರಳಲು ಸಿದ್ಧನಾಗಲಿಲ್ಲ. ಆದರೆ ದೂತನು ಮರಳಿ ಹೋಗದೆ ಇದ್ದರೆ ರೋಮನ್ನರು ತಪ್ಪು ತಿಳಿದುಕೊಳ್ಳುವ ಸಾಧ್ಯತೆಯಿತ್ತು. ಆದ್ದರಿಂದ ಅಬೂ ಉಬೈದಾ ಹೇಳಿದರು- "ಇಂದು ನೀವು ಮರಳಬೇಕು. ನಾಳೆ ನಮ್ಮ ಕಡೆಯಿಂದ ಜನರು ನಿಮ್ಮ ಸೇನೆಗೆ ಬಂದರೆ ಅವರ ಜೊತೆಯಲ್ಲಿ ಬನ್ನಿ."

ಮಾರನೆಯ ದಿನ ಇಸ್ಲಾಮೀ ಸೇನೆಯಿಂದಲೂ ಕೆಲವರು ರೋಮನ್ ಸೇನೆಯ ಬಳಿಗೆ ಹೋದರು. ಆದರೆ ಸಂಧಾನದ ಶರತ್ತುಗಳು ನಿರ್ಣಯಗೊಳ್ಳಲಿಲ್ಲ. ಪರಿಣಾಮವಾಗಿ ಯುದ್ಧ ಅನಿವಾರ್ಯವಾಯಿತು. ವೈರಿಗಳು ಲಕ್ಷಗಟ್ಟಳೆ ಇದ್ದರು. ಮುಸ್ಲಿಮ್ ಯೋಧರು ಕೇವಲ 30-32 ಸಾವಿರ ಇದ್ದರು. ಆದರೆ ದಂಡ ನಾಯಕ ಅಬೂ ಉಬೈದಾರ ಚತುರ ಕಾರ್ಯಾಚರಣೆಯಿಂದಾಗಿ ವೈರಿ ಸೇನೆ ಸಂಪೂರ್ಣ ಸೋತು ಹೋಯಿತು. ಅದರ ಎಪ್ಪತ್ತು ಸಾವಿರ ಯೋಧರು ಸಾವನ್ನಪ್ಪಿದರು. ಈ ಯುದ್ಧದ ಬಳಿಕ ಉಳಿದೆಲ್ಲ ಕೋಟೆಗಳು ಸುಲಭದಲ್ಲಿ ವಶವಾದುವು.

ಅಬೂ ಉಬೈದಾರ ಯುದ್ಧ ನೈಪುಣ್ಯತೆಗಳು ಒಂದು ಕಡೆಯಾದರೆ ಅವರ ಚಾರಿತ್ರ್ಯವು ಅಷ್ಟೇ ಉನ್ನತವಾಗಿದ್ದುವು. ಮಕ್ಕಾದ ಮುಶ್ರಿಕರ ಮತ್ತು ಪ್ರವಾದಿಯವರ(ಸ) ಮಧ್ಯೆ ನಡೆದ ಸಂಧಾನಕ್ಕೆ ಅವರು ಸಾಕ್ಷಿ ಹಾಕಿದ್ದರು. ಹಿ.ಶ. 9ರಲ್ಲಿ ನಜ್ರಾನ್‌ನವರು ಪ್ರವಾದಿಯವರ(ಸ) ಸನ್ನಿಧಿಗೆ ಬಂದು, ತಮಗೆ ಧರ್ಮವನ್ನು ಕಲಿಸಲು ಓರ್ವ ವಿದ್ವಾಂಸರನ್ನು ಕಳಿಸಬೇಕೆಂದು ವಿನಂತಿಸಿದಾಗ ಪ್ರವಾದಿವರ್ಯರು(ಸ) ಅಬೂ ಉಬೈದಾರನ್ನು ಕಳಿಸಿದರು. ಅವರನ್ನು ಆ ತಂಡಕ್ಕೆ ಪರಿಚಯಿಸುತ್ತಾ ಪ್ರವಾದಿಯವರು, ಇವರು ಸಮುದಾಯದ ಸಂರಕ್ಷಕರಾಗಿದ್ದಾರೆ. ಇವರನ್ನು ನಿಮ್ಮೊಂದಿಗೆ ಕಳಿಸುತ್ತೇನೆ ಎಂದರು.

ಪ್ರವಾದಿವರ್ಯರು(ಸ) ನಿಧನ ಹೊಂದಿದಾಗ ಖಿಲಾಫತ್‌ಗಾಗಿ ಸೂಕ್ತ ವ್ಯಕ್ತಿಯ ಆಯ್ಕೆಯ ಬಗ್ಗೆ ಸಹಾಬಿಗಳು ಚರ್ಚಿಸಿದರು. ಅಬೂಬಕರ್‌ರಂತಹ ಹಿರಿಯರು ಮುಸ್ಲಿಮರ ಮುಂದೆ ಅಬೂ ಉಬೈದಾರ ಹೆಸರನ್ನು ಪ್ರಸ್ತಾಪಿಸುತ್ತಾ, "ಇವರೇ ಅಬೂ ಉಬೈದಾ ಬಿನ್ ಜರ್ರಾಹ್. ಇವರನ್ನು ಹಕೀಮುಲ್ ಉಮ್ಮತ್(ಸಮುದಾಯದ ಸಂರಕ್ಷಕ) ಎಂದು ಕರೆಯಲಾಗುತ್ತದೆ. ನೀವು ಇಚ್ಛಿಸಿದರೆ ಇವರ ಕೈಯಲ್ಲಿ ಬೈಅತ್ (ಅನುಸರಣೆಯ ಕರಾರು) ಮಾಡಬಹುದು" ಎಂದರು. ಕೂಡಲೇ ಅಬೂ ಉಬೈದಾ ಮುಂದೆ ಬಂದು ಅಬೂಬಕರ್‌ರ ಕೈಯಲ್ಲಿ ಬೈ ಅತ್ ಮಾಡಿ ಆ ಅವಕಾಶವನ್ನು ತಪ್ಪಿಸಿದರು. ಅವರು ಬೈಅತ್ ಮಾಡುವುದನ್ನು ಕಂಡು ಎಲ್ಲ ಮುಹಾಜಿರ್-ಅನ್ಸಾರ್‌ಗಳೂ ಬೈಅತ್ ಮಾಡಿದರು.

ಅಬೂ ಉಬೈದಾ ಇಸ್ಲಾಮಿ ಸಮಾನತೆಯ ಬಗ್ಗೆ ಬಹಳ ಗಮನವಿರಿಸುತ್ತಿದ್ದರು. ಅವರ ದೃಷ್ಟಿಯು ಸದಾ ಅಲ್ಲಾಹ್ ಮತ್ತು ಪ್ರವಾದಿಯ ಅನುಸರಣೆಯಲ್ಲಿ ನೆಟ್ಟಿರುತ್ತಿತ್ತು. ಅಧಿಕಾರಿಗಳು-ಅಧೀನರು ಎಂಬ ಭೇದಭಾವವೇ ಅವರ ಮನದಲ್ಲಿ ಮೂಡುತ್ತಿರಲಿಲ್ಲ. ಒಂದು ಯುದ್ಧದ ಸಂದರ್ಭ. ಮುಖಿಲ್ ಎಂಬಲ್ಲಿ ಸೇನೆ ಬೀಡುಬಿಟ್ಟಿತು. ವೈರಿಗಳ ಕಡೆಯಿಂದ ಓರ್ವ ದೂತ ಮಾತುಕತೆಗೆ ಬಂದ. ಇಲ್ಲಿ ಬಂದು ನೋಡುವಾಗ ಹಿರಿಯ-ಕಿರಿಯರೆಲ್ಲರೂ ಒಂದೇ ವರ್ಣದಲ್ಲಿರುವುದನ್ನು ಕಂಡು ದಂಗಾಗಿಬಿಟ್ಟ. ಇಸ್ಲಾಮಿ ಸಮಾಜದಲ್ಲಿ ದಂಡನಾಯಕ ಮತ್ತು ಸಾಮಾನ್ಯ ಸೈನಿಕನ ಮಧ್ಯೆ ಅಂತರವನ್ನು ಗುರುತಿಸಲಾರದೆ ಚಡಪಡಿಸಿದ. ದಂಡನಾಯಕ ಡೇರೆಯಲ್ಲಿರಬಹುದೆಂದು ಅತ್ತಿತ್ತ ದೃಷ್ಟಿ ಹಾಯಿಸಿದ. ಕೊನೆಗೆ ಆಶ್ಚರ್ಯದಿಂದ ನಿಮ್ಮ ನಾಯಕನೆಲ್ಲಿ ಎಂದು ಕೇಳಿದ. ಜನರು ಅವನನ್ನು ಅಬೂ ಉಬೈದಾರ ಬಳಿಗೆ ಕರೆದುಕೊಂಡು ಹೋದರು. ಆಗ ಅವರು ನೆಲದ ಮೇಲೆ ಕುಳಿತಿದ್ದರು. ಅದನ್ನು ನೋಡಿ ಆಶ್ಚರ್ಯದಿಂದ, "ನಿಜವಾಗಿಯೂ ನೀವೇ ಏನು ಸರದಾರ" ಎಂದು ಕೇಳಿದ. ತರುವಾಯ ಅಗತ್ಯದ ಮಾತುಕತೆ ನಡೆಸಿ ಮರಳಿದ.

ಉಮರ್ ಫಾರೂಕ್ ಸಿರಿಯಾದಲ್ಲಿ ಮಾಡಿದ ಎಲ್ಲ ಸುಧಾರಣಾ ಕಾರ್ಯಗಳನ್ನು ಅಬೂ ಉಬೈದಾರ ಮೂಲಕವೇ ಮಾಡಿದ್ದರು. ಹಿ.ಶ. 18ರಲ್ಲಿ ಅರೇಬಿಯದಾದ್ಯಂತ ಬರಗಾಲ ಬಂದಾಗ ಬಹಳ ಪ್ರಯತ್ನ ಪಟ್ಟು ಸಿರಿಯಾದಿಂದ ನಾಲ್ಕು ಸಾವಿರ ಒಂಟೆಗಳಲ್ಲಿ ಆಹಾರ ಧಾನ್ಯಗಳನ್ನು ಹೇರಿ ಕಳಿಸಿಕೊಟ್ಟರು. ಯುದ್ಧವಿರಲಿ, ಸಂಧಾನವಿರಲಿ ಯಾವುದೇ ಅವಸ್ಥೆಯಲ್ಲೂ ಇಸ್ಲಾಮಿನ ಪ್ರಚಾರದ ತನ್ನ ಕರ್ತವ್ಯವನ್ನು ಮರೆಯುತ್ತಿರಲಿಲ್ಲ. ಕೇವಲ ಅವರ ಚಾರಿತ್ರ್ಯವನ್ನು ಕಂಡೇ ಪ್ರಭಾವಿತಗೊಂಡ ಸಾವಿರಾರು ಸಿರಿಯನ್ ಮತ್ತು ರೋಮನ್ ಕ್ರೈಸ್ತರು ಇಸ್ಲಾಮ್ ಸ್ವೀಕರಿಸಿದ್ದಾರೆ.

ಅವರ ಬದುಕು ಅತ್ಯಂತ ಸರಳವಾಗಿತ್ತು. ಸಿರಿಯಾದ ದಿಗ್ವಿಜಯಿಯೂ ಆಡಳಿತಾಧಿಕಾರಿಯೂ ಆಗಿದ್ದೂ ಕೂಡಾ ಸಾದಾ ಬಟ್ಟೆಯ ಉಡುಪು ಧರಿಸುತ್ತಿದ್ದರು. ಸವಾರಿಗೊಂದು ಒಂಟೆಯಿತ್ತು. ಅದರ ಹಗ್ಗವೂ ಸಾಮಾನ್ಯತರದ್ದಾಗಿತ್ತು. ಒಮ್ಮೆ ಉಮರ್ ಫಾರೂಕರು ಯಾವುದೇ ಅಗತ್ಯ ಕೆಲಸದ ನಿಮಿತ್ತ ಸಿರಿಯಾಕ್ಕೆ ಹೋದರು. ಅಲ್ಲಿ ಅಬೂ ಉಬೈದಾರನ್ನು ಭೇಟಿಯಾದರು. ಅವರ ಬಳಿ ಖಡ್ಗ, ಗುರಾಣಿ ಮತ್ತು ಒಂಟೆಯ ಜೀನಲ್ಲದೆ ಬೇರೇನೂ ಇರಲಿಲ್ಲ. ಅದನ್ನು ನೋಡಿ

ಉಮರ್ ಹೇಳಿದರು - ಅಬೂ ಉಬೈದಾ! ನಿಮ್ಮ ಕೆಲವು ಅತಿ ಅಗತ್ಯದ ವಸ್ತುಗಳನ್ನಾದರೂ ನಿಮ್ಮ ಬಳಿಯಲ್ಲಿರಿಸಬಹುದಲ್ಲಾ. ಇದನ್ನು ಕೇಳಿ ಅವರು, ಅಮೀರುಲ್ ಮುಅ್ಮಿನೀನ್! ನನಗೆ ಇದೇ ಹೆಚ್ಚು" ಎಂದುತ್ತರಿಸಿದರು.

ಮರಳಿ ಹೋದ ಉಮರ್‌ರವರು ನಾಲ್ಕು ಸಾವಿರ ದೀನಾರ್ ಮತ್ತು ನಾಲ್ಕು ಸಾವಿರ ದಿರ್ಹಮ್‌ಗಳನ್ನು ಅವರಿಗೆ ಕಳಿಸಿಕೊಟ್ಟರು. ಆದರೆ ಅಲ್ಲಾಹನ ಈ ವಿನೀತದಾಸ ಅದರಲ್ಲಿ ಒಂದನ್ನೂ ಮುಟ್ಟದೆ ಎಲ್ಲವನ್ನೂ ತನ್ನ ಸೈನಿಕರಲ್ಲಿ ಹಂಚಿ ಕೈಕೊಡವಿಕೊಂಡರು. ಉಮರ್‌ರಿಗೆ ಈ ವಿಷಯ ತಿಳಿದಾಗ ಅವರು, ಅಲ್ಲಾಹನಿಗೆ ಸ್ತುತಿ! ಇಸ್ಲಾಮಿನಲ್ಲಿ ಇಂತಹ ವ್ಯಕ್ತಿಗಳೂ ಇದ್ದಾರಲ್ಲ! ಎಂದು ಉದ್ಗರಿಸಿದರು. ಇಂತಹ ಗುಣ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡಿದ್ದ ಈ ಸಮುದಾಯದ ಸಂರಕ್ಷಕ ತನ್ನ ಸಂಪೂರ್ಣ ಬದುಕನ್ನು ಅಲ್ಲಾಹ್ ಮತ್ತು ಪ್ರವಾದಿಯ ಅನುಸರಣೆಯಲ್ಲಿ ಕಳೆದರು. ಅವರ ಜೀವನದ ಅಂತ್ಯವೂ ಪ್ರವಾದಿಯ ಅನುಸರಣೆಗೇ ಬಲಿಯಾಯಿತು. ಜಾಬಿಯಾ ಎಂಬಲ್ಲಿ ಅವರು ಪ್ಲೇಗ್ ರೋಗಕ್ಕೆ ತುತ್ತಾಗಿ ಅದರಲ್ಲೇ ಅಂತ್ಯ ಕಂಡರು. ಹಿರಿಯರೆಲ್ಲರೂ ಉಪದೇಶಿಸಿದರೂ, ಪ್ಲೇಗ್ ಪೀಡಿತ ಪ್ರದೇಶದಿಂದ ಪಲಾಯನ ಮಾಡಬಾರದೆಂಬ ಪ್ರವಾದಿಯವರ(ಸ) ಆದೇಶಕ್ಕೆ ಬದ್ಧವಾಗಿದ್ದು ಅಲ್ಲಿಂದ ಹೊರ ಹೋಗಲು ಒಪ್ಪಲಿಲ್ಲ. ಅಲ್ಲಾಹನು ಅವರ ಜೀವನ ಮಾದರಿಯನ್ನು ಅನುಸರಿಸಿ ಜೀವಿಸುವಂತೆ ನಮ್ಮನ್ನು ಅನುಗ್ರಹಿಸಲಿ.

⋞⋞⋞ ❖ ⋟⋟⋟